ಸಮಯೋಚಿತ ಪದ್ಯಗಳು

(ಕನ್ನಡ ಅನುವಾದ ಸಹಿತ)

ಪ್ರಕಾಶಕರು :

ಶ್ರೀ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್

ಶ್ರೀರಾಮಮಂದಿರ, ನರಸಿಂಹರಾಜಾ ಕಾಲೋನಿ

ಬೆಂಗಳೂರು–560 019

ಸಮಯೋಚಿತ ಪದ್ಯಗಳು

ಸಂಗ್ರಹ ಕರ್ತೃ ಮತ್ತು ಅನುವಾದಕರು :

ಎನ್. ವಿ. ಅನಂತರಾಮಯ್ಯ

ತ್ರಿಭಾಷಾ ಪಂಡಿತರು

ಪ್ರಕಾಶಕರು :

ಶ್ರೀ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್

ಶ್ರೀರಾಮಮಂದಿರ, ನರಸಿಂಹರಾಜಾ ಕಾಲೋನಿ

ಬೆಂಗಳೂರು-560 019

Samayochita Padyagalu
Collected and Translated by Sri N. V. Anantaramaiah
Published by Sri Narasimharaja Colony Association
Sri Ramamandiram, Narasimharaja Colony
Bangalore - 560 019
Pages viii + 132. **Price : Rs. 30/-**

November 2002

ಹಕ್ಕುಗಳು ಕಾದಿರಿಸಲ್ಪಟ್ಟಿವೆ

ಬೆಲೆ : ರೂ. 30

ಮುದ್ರಣ :
ಪ್ರಭಾ ಮುದ್ರಣಾಲಯ
124, ಡಾ|| ಡಿ. ವಿ. ಗುಂಡಪ್ಪ ರಸ್ತೆ
ಬಸವನಗುಡಿ, ಬೆಂಗಳೂರು -560 004

ಅನುವಾದಕನ ಎರಡು ಮಾತು

ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀಯುತ ಎಸ್.ಎನ್.ಮೂರ್ತಿಯವರು ಸಾರ್ವಜನಿಕರ ಉಪಯೋಗಕ್ಕಾಗಿ 'ಸಮಯೋಚಿತ ಪದ್ಯಗಳು' ಎಂಬ ಹೆಸರಿನಲ್ಲಿ ನಾಲ್ಕುನೂರು ಸಂಸ್ಕೃತ ಶ್ಲೋಕಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿಸಿ, ಸುಂದರವಾಗಿ ಅಚ್ಚುಹಾಕಿಸಿರುತ್ತಾರೆ. ಇದರ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಬಿನ್ನವಿಸುತ್ತೇನೆ.

ಈ ಕಾರ್ಯಕ್ಕೆ ಪೂಜ್ಯರಾದ ಶ್ರೀ ಶ್ರೀ ರಂಗಪ್ರಿಯಸ್ವಾಮಿಗಳ ಆಶೀರ್ವಾದವು ದೊರಕಿದೆ. ಅವರಿಗೂ, ಮುನ್ನುಡಿಯನ್ನು ಬರೆದು ಅನುಗ್ರಹಿಸಿರುವ ಪೂಜ್ಯರಾದ ಶ್ರೀ ಎನ್.ರಂಗನಾಥಶರ್ಮರಿಗೂ ಪ್ರೋತ್ಸಾಹವನ್ನು ನೀಡಿರುವ ಪೂಜ್ಯರಾದ ಶ್ರೀ ಜಿ. ವೆಂಕಟಸುಬ್ಬಯ್ಯನವರಿಗೂ, ಮಿತ್ರರಾದ ಶ್ರೀ ಕೆ. ವೆಂಕಟನಾರಾಯಣ ಮತ್ತು ಪಾವಗಡದ ಶ್ರೀ ಪ್ರಕಾಶರಾಯರಿಗೂ ತುಂಬಾ ಕೃತಜ್ಞನಾಗಿರುತ್ತೇನೆ.

ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಡಿ. ಎಸ್. ಕೃಷ್ಣಾಚಾರ್ಯರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಕಾರ್ಯದಲ್ಲಿ ನನ್ನ ಕಿರಿಯ ಮಗನಾದ ಚಿ॥ ರಾ॥ ಎ. ರಾಮಚಂದ್ರಮೂರ್ತಿಯಿಂದ ಅನುವಾದ ಕಾರ್ಯದಲ್ಲಿ ಕರಡು ತಿದ್ದುವುದರಲ್ಲಿ ಸಾಕಷ್ಟು ಸಹಕಾರವನ್ನು ಪಡೆದಿರುತ್ತೇನೆ. ಶ್ರೀರಾಮಚಂದ್ರನು ಅವನನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಸಮಯೋಚಿತ ಪದ್ಯ ಮಾಲಿಕೆಯಲ್ಲಿ ಸುಮಾರು ಒಂದು ಸಹಸ್ರ ಪದ್ಯಗಳಿವೆ. ಅಕಾರಾದಿ ಕ್ರಮದಲ್ಲಿರುವ ಈ ಎಲ್ಲ ಪದ್ಯಗಳನ್ನೂ ಈ ಕಾಲದಲ್ಲಿ ಅಚ್ಚುಹಾಕಿಸಲು ಸಾಧ್ಯವಿಲ್ಲ. ಇವು ಏಕ ಕವಿಯಿಂದ

ರಚಿಸಲ್ಪಟ್ಟಿಲ್ಲ. ಮಹಾಕವಿ ಕಾಳಿದಾಸ, ಭರ್ತೃಹರಿ ಮುಂತಾದವರ ಪದ್ಯಗಳಂತೆ ಶುದ್ಧವೂ, ಪ್ರೌಢವೂ, ಗಂಭೀರವೂ ಆಗಿಲ್ಲ. ಕೆಲವು ಅಶ್ಲೀಲವಾಗಿವೆ. ಕೆಲವು ದೋಷಯುಕ್ತವಾಗಿವೆ. ಕೆಲವು ಪುನರುಕ್ತವಾಗಿವೆ. ಹಳೆಯ ಕಾಲದ ಸಾಮಾನ್ಯ ಸಂಸ್ಕೃತಜ್ಞರಾದ ವೃದ್ಧರ ಸುಭಾಷಿತ ಗೋಷ್ಠಿಯಲ್ಲಿ ಅವರ ಅನುಭವಾಮೃತವು ಹೀಗೆ ಹೊರಹೊಮ್ಮಿರಬೇಕು. ಇದು ಮೂಡಿದ್ದಲ್ಲ. ಕೂಡಿದ್ದೆಂದು ಹೇಳಬಹುದು. ಆದರೂ ಅವರ ಅನುಭವವನ್ನು ಅಲ್ಲಗಳೆಯುವಂತಿಲ್ಲ. ಇವುಗಳಲ್ಲಿ ನಮಗೆ ಇಷ್ಟವಾದುದನ್ನು ಕಂಠಪಾಠ ಮಾಡಿಕೊಂಡರೆ ಸಮಯಬಂದಾಗ ಜನರಂಜನೆ ಮತ್ತು ಸಭಾರಂಜನೆಯನ್ನು ಮಾಡಬಹುದು.

ಸಹಸ್ರ ಶ್ಲೋಕಗಳಲ್ಲಿ ಈ ಕಾಲಕ್ಕೆ ಹೊಂದತಕ್ಕ ಶ್ಲೋಕಗಳು ೩೬೭ ಮಾತ್ರ ಎಂದು ನನಗೆ ಅನ್ನಿಸಿತು. ಅವುಗಳನ್ನು ಆರಿಸಬೇಕಾದರೂ ತುಂಬಾ ಯೋಚಿಸಬೇಕಾಯಿತು. ಹೇಗಾದರೂ ಮಾಡಿ ೪೦೦ಕ್ಕೆ ಮುಟ್ಟಬೇಕೆಂದು ಹಿರಿಯರು ಸಲಹೆ ಮಾಡಿದ್ದರಿಂದ ಉಳಿದ ೩೩ ಶ್ಲೋಕಗಳನ್ನು ನಾನೇ ಬೇರೆ ಕಡೆಯಿಂದ ಆರಿಸಿ ಭರ್ತಿಮಾಡಿದೆ. ಅವು ಅಕಾರಾದಿ ನಿಯಮಕ್ಕೆ ಒಳಪಟ್ಟಿಲ್ಲ. ಹೆಚ್ಚು ಶ್ಲೋಕಗಳು, ಅಮರ ಕೋಶ, ಭಗವದ್ಗೀತೆಯಂತೆ ಅನುಷ್ಟುಪ್ ಛಂದಸ್ಸಿನಲ್ಲಿವೆ. ಸ್ವಲ್ಪ ಸಂಸ್ಕೃತ ಜ್ಞಾನವಿದ್ದರೂ ಸಾಕು, ಪ್ರಯೋಜನವನ್ನು ಹೊಂದಬಹುದು. ಅಥವಾ ಕೇವಲ ಕನ್ನಡದ ಅನುವಾದವನ್ನು ಓದಿಕೊಂಡರೂ ಸಾಕು, ತಿಳುವಳಿಕೆ ಹೆಚ್ಚುತ್ತದೆ. ನೀತಿ, ಆರೋಗ್ಯ, ಆಯುರ್ವೇದ, ಧರ್ಮಶಾಸ್ತ್ರ ಮುಂತಾದ ಭಿನ್ನಭಿನ್ನ ದೃಷ್ಟಿಯುಳ್ಳ ಶ್ಲೋಕಗಳಿವೆ. ಹಿಂದೆ ಶತಶ್ಲೋಕದಿಂದಲೇ ಪಂಡಿತರಾಗುತ್ತಿದ್ದರಂತೆ. ಇಲ್ಲಿ ನಾಲ್ಕು ಶತ ಶ್ಲೋಕಗಳಿವೆ.

ಇವನ್ನು ಅನುವಾದ ಮಾಡುವಾಗ ಮತ್ತು ಮುದ್ರಣಕ್ಕೆ ಮುಂಚೆ ತಪ್ಪುಗಳನ್ನು ತಿದ್ದುವಾಗ, ನಿರ್ಣಯಸಾಗರ ಪ್ರೆಸ್ಸಿನವರ, ಪೂಜ್ಯ ರಂಗನಾಥಶರ್ಮರ ಮತ್ತು ಭಾರತ ಪ್ರಕಾಶನದವರ ಪರಿಶ್ರಮವೇನೆಂದು

ಅರಿವಾಯಿತು. ಇದಕ್ಕೆ ತುಂಬಾ ತಾಳ್ಮೆ ಮತ್ತು ಜ್ಞಾನವಿರಬೇಕು. ಅಂತು ಹೇಗೋ, ಈ ಇಳಿವಯಸ್ಸಿನಲ್ಲಿ ಶ್ರೀರಾಮನ ಕೃಪೆ ಮತ್ತು ಹಿರಿಯರ ಆಶೀರ್ವಾದ ಬಲದಿಂದ ಒಂದು ಹಂತಕ್ಕೆ ತಲುಪಿರುತ್ತೇನೆ. ಇದು ಜನೋಪಯೋಗಿಯಾದರೆ ನನ್ನ ಶ್ರಮ ಸಾರ್ಥಕವಾದಂತೆಯೇ ಎಂದು ಭಾವಿಸುತ್ತೇನೆ. ಇದಕ್ಕೆ ಪೂಜ್ಯ ರಂಗನಾಥಶರ್ಮರು ಮುನ್ನುಡಿಯನ್ನು ಬರೆದುಕೊಟ್ಟು ಅನುಗ್ರಹಿಸಿರುತ್ತಾರೆ. ಜ್ಞಾನ ಮತ್ತು ವಯೋವೃದ್ಧರೂ, ಮುದ್ರಣಾಲಯದ ಒಡೆಯರೂ ಆದ ಕೃಷ್ಣಾಚಾರ್ಯರ ಸಹಕಾರವೂ ದೊರಕಿದೆ. ಅಚ್ಚುಹಾಕಿಸುವ ಹೊಣೆಗಾರಿಕೆಯನ್ನು ನರಸಿಂಹರಾಜ ಕಾಲೋನಿ ಅಸೋಸಿಯೇಷನ್‌ನವರು ವಹಿಸಿಕೊಂಡಿರುತ್ತಾರೆ. ಆದುದ ರಿಂದ ಈ ಎಲ್ಲ ಮಹನೀಯರಿಗೂ ನಾನು ಕೃತಜ್ಞನಾಗಿರುತ್ತೇನೆ. ಇದು ಮಾತೃಭಾಷೆಯಾದ ಕನ್ನಡ ಮತ್ತು ದೇವಭಾಷೆಯಾದ ಸಂಸ್ಕೃತದ ಸೇವೆಯೆಂದು ಭಾವಿಸುತ್ತೇನೆ. ಇದರಿಂದ ಸಮಾಜಕ್ಕೆ ಲಾಭವಾದರೆ ನಾನು ಧನ್ಯ.

ರಾಮಮೂರ್ತಿನಗರ
ಉತ್ಥಾನ ದ್ವಾದಶೀ
16-11-2002

ಇತಿ ಗುರುಜನ ವಿಧೇಯ,
ಎನ್. ವಿ. ಅನಂತರಾಮಯ್ಯ

ಮುನ್ನುಡಿ

'ವಾಗ್‌ಭೂಷಣಂ ಭೂಷಣಂ' ಎಂಬುದೊಂದು ಸಂಸ್ಕೃತದ ಸುಭಾಷಿತ. ಮನುಷ್ಯನಿಗೆ ಉತ್ತಮ ವಸ್ತ್ರ ಮುತ್ತಿನ ಹಾರ ಮುಂತಾದವು ಅಲಂಕಾರಗಳಲ್ಲ, ಉತ್ತಮವಾದ ಮಾತು ಅಲಂಕಾರ ಎಂದು ಅಭಿಪ್ರಾಯ. ನಾರದರು ಮಾತಾಡುವುದರಲ್ಲಿ ನಿಪುಣರಂತೆ. 'ವಾಗ್ವಿದಾಂ ವರಃ'. ಮೊದಲನೆಯ ಸಲ ಹನುಮಂತನ ಭೇಟಿಯಾದಾಗ ಆತನ ಮಾತಿನ ಧಾಟಿಗೆ ಶ್ರೀರಾಮನೂ ಸಹ ಮೆಚ್ಚುಗೆಯಿಂದ ಹನುಮಂತನನ್ನು ಹೊಗಳುತ್ತಾನೆ. ಬಳಿಯಲ್ಲಿದ್ದ ಲಕ್ಷ್ಮಣನಿಗೆ ''ಲಕ್ಷ್ಮಣ, ಈತನು ಎಷ್ಟು ಚೆನ್ನಾಗಿ ಮಾತಾಡುತ್ತಾನೆ, ನೋಡು! ಒಂದು ಮಾತನ್ನೂ ಅನಾವಶ್ಯಕವಾಗಿ ವಿಸ್ತರಿಸಲಿಲ್ಲ. ಅಕ್ಷರಗಳನ್ನು ಸ್ಫುಟವಾಗಿ ಉಚ್ಚರಿಸುತ್ತಾನೆ. ಸ್ವಲ್ಪವೂ ತಡವರಿಸಲಿಲ್ಲ. ಬಹುವೇಗವಾಗಿಯೂ ಮಾತಾಡಲಿಲ್ಲ. ಮಾತಿನ ಶೈಲಿ ಮಧುರವೂ ಚೇತೋಹಾರಿಯೂ ಆಗಿದೆ. ಈ ವಾಣಿಯು ಯಾರನ್ನು ಆನಂದಗೊಳಿಸದು?'' ಎನ್ನುತ್ತಾನೆ. (ಕಿಷ್ಕಿಂಧಾ. ಸರ್ಗ ೩). ಶ್ರೀರಾಮನು ಮಿತಭಾಷಿ, ಹಿತಭಾಷಿ, ಸ್ಮಿತಭಾಷಿ, ಮೃದುಭಾಷಿ, ಮಧುರಭಾಷಿ, ಪೂರ್ವಾಭಾಷಿಯೂ ಆಗಿದ್ದನೆಂದು ವಾಲ್ಮೀಕಿ ಮುನಿಗಳು ವರ್ಣಿಸಿದ್ದಾರೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' 'ಮಾತಾಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂದು ಗಾದೆಗಳುಂಟು. ''ಮಾತಾಡಿದರೆ ಮುತ್ತು ಸುರಿದಂತಿರಬೇಕು'' ಎಂದು ಬಸವಣ್ಣನವರ ವಚನ. ಮಾತೆಂಬುದು ಮನುಷ್ಯನಿಗೆ ದೇವರು ಕೊಟ್ಟಿರುವ ವರ.

ನುಡಿಯೊಡನೆ ನಡೆಯನ್ನು ತಿದ್ದುವುದಕ್ಕಾಗಿ, ಲೋಕವ್ಯವಹಾರದಲ್ಲಿ ಮಾರ್ಗದರ್ಶನಕ್ಕಾಗಿ ನೀತಿಕೋವಿದರೂ ಪಂಡಿತರೂ ಆದ ಕವಿಗಳು

ಸಂಸ್ಕೃತದಲ್ಲಿ ಸುಭಾಷಿತ ಗ್ರಂಥಗಳನ್ನು ರಚಿಸಿದ್ದಾರೆ. ನೀತಿಶತಕ, ಸುಭಾಷಿತಮಂಜರಿ, ಸುಭಾಷಿತನೀವಿ, ಸುಭಾಷಿತ ಭಾಂಡಾಗಾರ, ಸಮಯೋಚಿತ ಪದ್ಯಮಾಲಿಕೆ ಮುಂತಾದ ಸುಭಾಷಿತ ಗ್ರಂಥಗಳು ಸಂಸ್ಕೃತದಲ್ಲಿ ಹೇರಳವಾಗಿವೆ. ಈ ಶ್ಲೋಕಗಳು ಉತ್ತಮ ಕಾವ್ಯದಂತೆ ರಮಣೀಯವಾದವು. ಧರ್ಮಶಾಸ್ತ್ರದಂತೆ ನೀತಿಬೋಧಕವಾದವು. ಅರ್ಥಶಾಸ್ತ್ರದಂತೆ ಲೋಕವ್ಯವಹಾರವನ್ನು ಬೋಧಿಸತಕ್ಕವು. ಚಾಟು ಶ್ಲೋಕಗಳ ಚಾಟಿಯ ಹೊಡೆತದಂತೆ ಸನ್ಮಾರ್ಗಕ್ಕೆ ತಿರುಗಿಸಬಲ್ಲವು. ಮಾತಾಡುವವನ ಮಾತಿಗೆ ಅಪೂರ್ವವಾದ ಕಾಂತಿಯನ್ನು ನೀಡಬಲ್ಲವು. ಸಮಯೋಚಿತವಾಗಿ ಬಳಸಿದಾಗ ಶ್ರೋತೃಗಳನ್ನು ಸೆಳೆಯಬಲ್ಲವು. ನುಡಿದವರ ನುಡಿಗೆ ಪ್ರಾಮಾಣ್ಯವನ್ನು ಒದಗಿಸತಕ್ಕವು.

ಹೀಗೆ ಸಮಯೋಚಿತವಾಗಿ ಬಳಸಲು ಯೋಗ್ಯವಾದ ಕೆಲವು ಪದ್ಯಗಳನ್ನು ನನ್ನ ಆಪ್ತಮಿತ್ರರಾದ ವಿದ್ವಾನ್ ಎನ್.ವಿ.ಅನಂತರಾಮಯ್ಯ ನವರು ಈ ಪುಸ್ತಕದಲ್ಲಿ ಸಂಗ್ರಹಿಸಿ, ಅವುಗಳಿಗೆ ಕನ್ನಡದಲ್ಲಿ ಅರ್ಥವನ್ನು ಬರೆದಿದ್ದಾರೆ. ಶ್ರೀಯುತರು ಕನ್ನಡ, ಸಂಸ್ಕೃತ, ಹಿಂದೀ ಭಾಷೆಗಳಲ್ಲಿ ನುರಿತ ಭಾಷಾತ್ರಯ ಪಂಡಿತರು. ಮಾತು ಮಾತಿಗೂ ಮಹಾಕವಿ ಕಾಳಿದಾಸನ ಕಾವ್ಯ ನಾಟಕಗಳಿಂದ ಆರಿಸಿದ ಸಮಯೋಚಿತ ಪದ್ಯಗಳನ್ನು ಉದಾ ಹರಿಸುವ ಉತ್ತಮ ವಾಗ್ಮಿಗಳು.

ಇಲ್ಲಿ ಸಂಗ್ರಹಿಸಿದ ಪದ್ಯಗಳಲ್ಲಿ ನೀತಿ ಇದೆ, ಧರ್ಮವಿದೆ, ಚಮತ್ಕಾರ ವಿದೆ. ಸಮಯೋಚಿತವಾಗಿ ಹೇಳಲು ಯೋಗ್ಯವಾದ ಶ್ಲೋಕಗಳಿವು. ಅರ್ಥವನ್ನು ಬರೆದಿರುವುದರಿಂದ ಶ್ಲೋಕ ತಾತ್ಪರ್ಯವು ಸುಲಭ ಗ್ರಾಹ್ಯವಾಗಿದೆ. ಲಲಿತಶೈಲಿಯ ಈ ಅನುಷ್ಟುಪ್ ಶ್ಲೋಕಗಳನ್ನು ಒಂದೆರಡು ಸಲ ಮನನ ಮಾಡಿದರೆ ಅವು ಕಂಠಗತವಾಗಿಬಿಡುತ್ತವೆ. ಕನ್ನಡಿಗರು ಈ ಪುಸ್ತಕವನ್ನು ಸಂತೋಷದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಶ್ರೀಯುತ ವಿದ್ವಾನ್ ಎನ್. ವಿ. ಅನಂತರಾಮಯ್ಯನವರಿಗೂ ಈ

ಗ್ರಂಥವನ್ನು ಮುದ್ರಿಸಿ ಪ್ರಕಾಶಿಸಲು ಉತ್ಸಾಹದಿಂದ ಮುಂದೆ ಬಂದ ಮಾನ್ಯ ಶ್ರೀ ಎಸ್. ಎನ್. ಮೂರ್ತಿಯವರಿಗೂ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಬೆಂಗಳೂರು ವಿದ್ವಾನ್
12-5-2002 ಎನ್. ರಂಗನಾಥಶರ್ಮಾ

ಪ್ರಕಾಶಕರ ಮಾತು

ಸಮಯೋಚಿತ ಪದ್ಯಗಳು ಎಂಬ ಈ ಸಣ್ಣ ಗ್ರಂಥವನ್ನು ಮುದ್ರಣಕ್ಕೆ ಸಿದ್ಧಮಾಡಿ ಶ್ರೀ ಎನ್.ವಿ. ಅನಂತರಾಮಯ್ಯನವರು, ಶ್ರೀ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್‌ನ ವತಿಯಿಂದ ಮುದ್ರಣ-ಪ್ರಕಾಶನದ ಬಗ್ಗೆ ಸಹಕಾರ ಕೋರಿದರು. ಶ್ರೀ ಎನ್. ರಂಗನಾಥಶರ್ಮಾ ಅವರು ಗ್ರಂಥವನ್ನು ಪರಿಶೀಲಿಸಿ ಮುದ್ರಣಕ್ಕೆ ಅನುಮೋದಿಸಿದ ನಂತರ ಪ್ರಭಾ ಮುದ್ರಣಾಲಯದ ಶ್ರೀ ಕೃಷ್ಣಾಚಾರ್ಯರಿಗೆ ವಹಿಸಲಾಯಿತು. ಸಾಮಾನ್ಯ ಜನರೂ ಈ ಗ್ರಂಥದಿಂದ ಪ್ರಯೋಜನ ಹೊಂದುವರೆಂದು ಆಶಿಸಲಾಗಿದೆ.

ಸಂಗ್ರಹಕರ್ತೃ ಮತ್ತು ಅನುವಾದಕ ಶ್ರೀ ಎನ್.ವಿ. ಅನಂತರಾಮಯ್ಯನವರಿಗೂ, ಮುನ್ನುಡಿಯಿಂದ ಗ್ರಂಥದ ಪರಿಚಯ ಮಾಡಿಕೊಟ್ಟಿರುವ ವಿದ್ವಾನ್ ರಂಗನಾಥಶರ್ಮಾ ಅವರಿಗೂ, ಶುದ್ಧವಾಗಿ ಅಚ್ಚುಮಾಡಿರುವ ಪ್ರಭಾ ಮುದ್ರಣಾಲಯದವರಿಗೂ ನಾವು ಆಭಾರಿಯಾಗಿದ್ದೇವೆ.

ಬೆಂಗಳೂರು ಎಸ್. ಎನ್. ಮೂರ್ತಿ
16-11-2002 ಅಧ್ಯಕ್ಷರು
ಶ್ರೀ ನರಸಿಂಹರಾಜಾ ಕಾಲೋನಿ ಅಸೋಸಿಯೇಷನ್

|| ಶ್ರೀ ವಿಘ್ನಹಂತ್ರೇ ನಮಃ ||
|| ಶ್ರೀರಾಮಚಂದ್ರಾಯ ನಮಃ ||

ಸಮಯೋಚಿತ ಪದ್ಯಗಳು

ಅ

ಅತಿಪರಿಚಯಾದವಜ್ಞಾ ಸಂತತಗಮನಾದನಾದರೋ ಭವತಿ ।
ಮಲಯೇ ಭಿಲ್ಲಪುರಂಧ್ರೀ ಚಂದನತರುಕಾಷ್ಠಮಿಂಧನಂ ಕುರುತೇ ॥ ೧ ॥

ಯಾವುದಾದರೂ ಒಂದು ವಸ್ತು ಅಥವಾ ವ್ಯಕ್ತಿಯ ಪರಿಚಯವು ಅತಿಯಾದರೆ ಮತ್ತು ಯಾರಾದರೂ ಪರಿಚಿತರು ಅಥವಾ ನೆಂಟರು ಯಾರ ಮನೆಗಾದರೂ ಒಂದೇ ಸಮನೆ ಹೋಗುತ್ತಿದ್ದರೆ ಆ ವಸ್ತುವಿಗಾಗಲೀ ಆ ವ್ಯಕ್ತಿಗಾಗಲೀ ಬೆಲೆ ಕಡಿಮೆಯಾಗುತ್ತದೆ. ಅಳಿಯನಾದವನು ಅತ್ತೆಯ ಮನೆಗೆ ಹೆಚ್ಚು ಹೋಗಬೇಕಾದರೂ ಯೋಚಿಸಬೇಕು. ಕವಿಯು ಇದನ್ನು ಮಾರ್ಮಿಕವಾಗಿ ಈ ರೀತಿ ಚಿತ್ರಿಸಿದ್ದಾನೆ—ಮಲಯ ಪರ್ವತದಲ್ಲಿ ಶ್ರೀಗಂಧದ ಮರವು ಅತಿಯಾಗಿ ಬೆಳೆಯುವುದರಿಂದ ಅಲ್ಲಿಯ ಭಿಲ್ಲಸ್ತ್ರೀಯರು—ಅಂದರೆ ಅಲ್ಲೇ ವಾಸಮಾಡುವ ಕಾಡಿನ ಸ್ತ್ರೀಯರು—ಶ್ರೀಗಂಧದ ಮರದ ಕಟ್ಟಿಗೆಯನ್ನೇ ಸೌದೆಯಂತೆ ಬಳಸುತ್ತಾರೆ. ಅದರಿಂದಲೇ ಅಡಿಗೆ ಮಾಡುತ್ತಾರೆ. ನೀರನ್ನು ಕಾಯಿಸುತ್ತಾರೆ. ಅವರಿಗೆ ಅದರ ಬೆಲೆ ಗೊತ್ತಿರುವುದಿಲ್ಲ. ಕಾಶ್ಮೀರದ ಬಳಿ ಸೇಬೂ, ಮಲೆನಾಡಿನಲ್ಲಿ ಹಲಸೂ ಕಾಲಿಗೆ ಕಸವಾದರೆ, ದೊಡ್ಡ ನಗರಗಳಲ್ಲಿರುವ ಶ್ರೀಮಂತರ ನಾಲಿಗೆಗೆ ರಸವಾಗುತ್ತದೆ.

ಅನಭ್ಯಾಸೇ ವಿಷಂ ಶಾಸ್ತ್ರಮಜೀರ್ಣೇ ಭೋಜನಂ ವಿಷಮ್ ।
ವಿಷಂ ಸಭಾ ದರಿದ್ರಸ್ಯ ವೃದ್ಧಸ್ಯ ತರುಣೀ ವಿಷಮ್ ॥ ೨ ॥

ವೇದಶಾಸ್ತ್ರಾದಿಗಳು ಅಭ್ಯಾಸದಲ್ಲಿಲ್ಲದಿದ್ದರೆ ಮರೆತುಹೋಗಿ ಮುಂದೆ ಎಂದಾದರೂ ಸಭೆಗಳಲ್ಲಿ ಹೇಳಬೇಕಾಗಿಬಂದಾಗ ಬಹಳ ಕಷ್ಟವಾಗುವುದು. ಆದುದರಿಂದಲೇ ಸ್ವಾಧ್ಯಾಯಪ್ರವಚನವನ್ನು ಮಾಡುತ್ತಿರಬೇಕೆಂದು ಉಪನಿಷತ್ತು ಹೇಳುವುದು. ಅಜೀರ್ಣಾವಸ್ಥೆಯಲ್ಲಿ ಭೋಜನವು ವಿಷವಾಗುವುದು. ದರಿದ್ರರಿಗೆ ಸಭೆ, ಮದುವೆ ಮುಂತಾದ ಕಡೆ ಹೋಗುವುದು ವಿಷಪ್ರಾಯ. ಅಲ್ಲಿ ಎಲ್ಲರೂ ಆಭರಣ ವಸ್ತ್ರಗಳನ್ನು ಗಮನಿಸುತ್ತಾರೆ. ಅವಕ್ಕೇ ಪುರಸ್ಕಾರ. ಮುದುಕರಿಗೆ ತರುಣಿಯು ವಿಷವಾಗುತ್ತಾಳೆ. ವೃದ್ಧರು ತರುಣಿಯರನ್ನು ಮದುವೆಯಾಗಬಾರದು. ಮೊದಲನೆಯ ಮದುವೆಯು ಶೃಂಗಾರರಸಪ್ರಧಾನವಾಗಿರುತ್ತದೆ. ಎರಡನೆಯ ಮದುವೆಯು ಬಂಗಾರಪ್ರಧಾನವಾಗಿರುತ್ತದೆ. ಮೂರನೆಯ ಮದುವೆಯು ''ಅಂಗಾರ'' ಪ್ರಧಾನವಾಗುವುದು. ಅಂಗಾರವೆಂದರೆ ಪತಿಯ ಮರಣಾನಂತರ ಪತ್ನಿಯು ಹಣೆಗೆ ಹಚ್ಚಿಕೊಳ್ಳುವ ಭಸ್ಮ ಅಥವಾ ಕಾಡಿಗೆ. ಇದು ಹಿಂದಿನಕಾಲಕ್ಕೆ ಹೆಚ್ಚು ಅನ್ವಯವಾಗುತ್ತಿತ್ತು. ಹಿಂದಿನವರು ಪ್ರಾಸಬದ್ಧವಾಗಿರುತ್ತದೆಯೆಂದು ಶೃಂಗಾರ, ಬಂಗಾರ, ಅಂಗಾರ ಎಂದು ಹೇಳಿರುತ್ತಾರೆ.

ಅತಿರೂಪಾತ್ ಹೃತಾ ಸೀತಾಽತಿಮಾನಾತ್ಸುಯೋಧನಃ ।
ಅತಿದಾನಾದ್ಬಲಿರ್ಬದ್ಧೋ ಹ್ಯತಿ ಸರ್ವತ್ರ ವರ್ಜಯೇತ್ ॥ ೩ ॥

ಅತಿರೂಪವು ಸೀತೆಯ ಅಪಹರಣಕ್ಕೆ ಕಾರಣವಾಯಿತು. ಅತಿಮಾನದಿಂದ ದುರ್ಯೋಧನನು ಹಾಳಾದನು. ಅತಿದಾನದಿಂದ ಬಲಿ ಚಕ್ರವರ್ತಿಯು ಬಂಧಿಸಲ್ಪಟ್ಟನು. ಆದುದರಿಂದ ಯಾವುದೂ ಅತಿಯಾಗಬಾರದು.

ಕ್ಷಮಾಧನುಃ ಕರೇ ಯಸ್ಯ ದುರ್ಜನಃ ಕಿಂ ಕರಿಷ್ಯತಿ ।
ಅತೃಣೇ ಪತಿತೋ ವಹ್ನಿಃ ಸ್ವಯಮೇವೋಪಶಾಮ್ಯತಿ ॥ ೪ ॥

ಯಾವನ ಕೈಯಲ್ಲಿ ಕ್ಷಮೆಯೆಂಬ ಧನುಸ್ಸಿರುತ್ತದೆಯೋ ಅವನನ್ನು ದುಷ್ಟನು ಏನೂ ಮಾಡಲಾರನು. ಹುಲ್ಲು ಮುಂತಾದ ದಾಹ್ಯವಸ್ತುವಿಲ್ಲದ ಬರಿಯ ನೆಲದ ಮೇಲೆ ಬಿದ್ದ ಬೆಂಕಿಯು ತಾನಾಗಿಯೇ ಆರಿಹೋಗುತ್ತದೆ.

ಅಮೃತಂ ಶಿಶಿರೇ ವಹ್ನಿರಮೃತಂ ಬಾಲಭಾಷಣಂ ।
ಅಮೃತಂ ಸ್ವಪ್ರಿಯಾ ಭಾರ್ಯಾ ಹ್ಯಮೃತಂ ಸ್ವಾಮಿಗೌರವಮ್ ॥ ೫ ॥

ಚಳಿಗಾಲದಲ್ಲಿ ಬೆಂಕಿಯು ಹಿತವಾಗಿರುತ್ತದೆ. ಮಕ್ಕಳ ಮಾತು ಅಮೃತದಂತಿರುತ್ತದೆ. ತನ್ನ ಪ್ರಿಯಭಾರ್ಯೆಯು ಅಮೃತದಂತಿರುತ್ತಾಳೆ. ತನ್ನ ಸ್ವಾಮಿ (ದಣಿ)ಯು ಮಾಡುವ ಗೌರವವು ಅಮೃತದಂತೆ ಹಿತವಾಗಿರುತ್ತದೆ.

ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥ ೬ ॥

ಧನಕ್ಕೆ ಪುರುಷನು ದಾಸನಾಗಿರುತ್ತಾನೆ. ಧನವು ಯಾರಿಗೂ ದಾಸನಾಗಿರುವುದಿಲ್ಲ ಎಂಬ ಮಾತು ಸತ್ಯವಾದುದು. ಎಲೈ ಮಹಾರಾಜನೇ, ಕೌರವರ ಧನದಿಂದ ನಾನು ಕಟ್ಟಲ್ಪಟ್ಟಿರುತ್ತೇನೆ. ನಮಗೆ ಸ್ವಾತಂತ್ರ್ಯವಿಲ್ಲ ಎಂದು ಭೀಷ್ಮರು ಧರ್ಮರಾಜನಿಗೆ ಹೇಳಿರುವ ಮಾತಿದು.

ಅತ್ಯಂತಮತಿಮೇಧಾವೀ ತ್ರಯಾಣಾಮೇಕಮಶ್ನುತೇ ।
ಅಲ್ಪಾಯುಷೋ ದರಿದ್ರೋ ವಾ ಹ್ಯನಪತ್ಯೋ ನ ಸಂಶಯಃ ॥ ೭ ॥

ಅತ್ಯಂತ ಮೇಧಾವಿಗಳು ಈ ಮೂರರ ಪೈಕಿ ಯಾವುದಾದರೂ ಒಂದು ಕೊರತೆಗೆ ತುತ್ತಾಗಿರುತ್ತಾರೆ—ಅಲ್ಪಾಯುಸ್ಸು, ದಾರಿದ್ರ್ಯ ಅಥವಾ ಸಂತಾನಹೀನತೆ.

ಅನಾರಂಭೋ ಮನುಷ್ಯಾಣಾಂ ಪ್ರಥಮಂ ಬುದ್ಧಿಲಕ್ಷಣಮ್ ।
ಆರಬ್ಧಸ್ಯಾಂತಗಮನಂ ದ್ವಿತೀಯಂ ಬುದ್ಧಿಲಕ್ಷಣಮ್ ॥ ೮ ॥

ಮನುಷ್ಯನು ಕೆಲವು ಮಹತ್ಕಾರ್ಯಗಳನ್ನು (ಅಂದರೆ ತನ್ನ ಶಕ್ತಿಗೆ ಮೀರಿದಂತಹ) ಪ್ರಾರಂಭಿಸದಿರುವುದೇ ಮೊದಲನೆಯ ಬುದ್ಧಿವಂತಿಕೆ. ಒಂದು ವೇಳೆ ಪ್ರಾರಂಭಿಸಿಬಿಟ್ಟರೆ ಕೊನೆಮುಟ್ಟುವುದು ಎರಡನೆಯ ಬುದ್ಧಿ ಲಕ್ಷಣ. ಮಧ್ಯೆ ಬಿಡಬಾರದು.

ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋಽಪಿ ನ ವಿದ್ಯತೇ ।
ಅಜಾಗಲಸ್ತನಸ್ಯೇವ ತಸ್ಯ ಜನ್ಮ ನಿರರ್ಥಕಮ್ ॥ ೯ ॥

ಧರ್ಮ ಅರ್ಥ ಕಾಮ ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಲ್ಲಿ ಕೊನೆಯ ಪಕ್ಷ ಒಂದನ್ನಾದರೂ ಸಂಪಾದಿಸದವನ ಬಾಳು, ಮೇಕೆಯ ಕುತ್ತಿಗೆಯಲ್ಲಿರುವ ಮೊಲೆಯಂತೆ ವ್ಯರ್ಥ.

ಅಜರಾಮರವತ್ಪ್ರಾಜ್ಞೋ ವಿದ್ಯಾಮರ್ಥಂ ಚ ಸಾಧಯೇತ್ ।
ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥ ೧೦ ॥

ತಿಳುವಳಿಕೆಯುಳ್ಳವನು, ವಿದ್ಯೆಯನ್ನೂ ಧನವನ್ನೂ ತನಗೆ ಮುಪ್ಪು ಮತ್ತು ಮರಣವಿಲ್ಲವೆಂಬ ಉತ್ಸಾಹದಿಂದ ಸಂಪಾದಿಸಬೇಕು. ಹಾಗೆಯೇ ಮೃತ್ಯು ದೇವತೆಯು ತಲೆಗೂದಲಿಗೆ ಕೈಹಾಕಿ ಎಳೆಯುತ್ತಿದ್ದಾಳೆಯೋ ಎಂದು ಭಾವಿಸಿ ಧರ್ಮಕಾರ್ಯವನ್ನು ಮಾಡಬೇಕು. ಮೊದಲನೆಯದಕ್ಕೆ ಸ್ವಲ್ಪ ತಡವಾದರೂ ಅಡ್ಡಿಯಿಲ್ಲ. ಕಡೆಯದಕ್ಕೆ ಕೂಡದು.

ಇತರಕರ್ಮಫಲಾನಿ ಯದೃಚ್ಛಯಾ
ವಿಲಿಖಿತಾನಿ ಸಹೇ ಚತುರಾನನ ।
ಅರಸಿಕೇಷು ಕವಿತ್ವನಿವೇದನಂ
ಶಿರಸಿ ಮಾ ಲಿಖ ಮಾ ಲಿಖ ಮಾ ಲಿಖ ॥ ೧೧ ॥

ಎಲೈ ಚತುರ್ಮುಖನೇ ! ಬೇರೆ ಇನ್ನಾವ ಕರ್ಮಫಲವನ್ನಾದರೂ ಬರೆ. ಅದನ್ನು ಸಹಿಸುವೆನು. ಅರಸಿಕರೆದುರಿಗೆ ಕವಿತ್ವವನ್ನು ಓದುವ ಕಷ್ಟವನ್ನು ಮಾತ್ರ ಬರೆಯಬೇಡ. (ಇದನ್ನು ಕಾಳಿದಾಸ ಕವಿಯು ಬರೆದಿದ್ದಾನೆಂದು ಹೇಳುತ್ತಾರೆ.)

ಶಾಸ್ತ್ರಂ ಸುಚಿಂತಿತಮಥೋ ಪರಿಚಿಂತನೀಯಂ
ಆರಾಧಿತೋಽಪಿ ನೃಪತಿಃ ಪರಿಸೇವನೀಯಃ ।
ಅಂಕೇ ಸ್ಥಿತಾಪಿ ತರುಣೀ ಪರಿಶಂಕನೀಯಾ
ಶಾಸ್ತ್ರೇ ನೃಪೇ ಚ ಯುವತೌ ಕುತೋ ವಶಿತ್ವಮ್ ॥ ೧೨ ॥

ಓದಿದ ಶಾಸ್ತ್ರವನ್ನು ಆಗಾಗ ಚಿಂತನೆ ಮಾಡುತ್ತಲೇ ಇರಬೇಕು. ಇಲ್ಲದಿದ್ದರೆ ಮರೆತುಹೋಗುತ್ತದೆ. ರಾಜಸೇವೆಯನ್ನು ದಿನವೂ ಮಾಡುತ್ತಿರಬೇಕು. ಈ ಕಾಲದಲ್ಲಿ ರಾಜನ ಬದಲು ಮಂತ್ರಿಗಳು ಮತ್ತು ಮೇಲಧಿಕಾರಿಗಳಿಗೆ ದಿನವೂ ''ನಮಸ್ಕಾರ'' ಎಂದು ಹೇಳುತ್ತಾ ಇರಬೇಕು. ಕೆಲವು ಸಲ ಬಾಯಿಂದ ಹೇಳಿದರೆ, ಕೆಲವು ಸಲ ಕೈಯಿಂದಲೂ ಮಾಡಿ ತೋರಿಸಬೇಕು. ಯುವತಿಯು ತನ್ನ ತೊಡೆಯಮೇಲೆಯೇ ಕುಳಿತಿದ್ದರೂ ನಂಬಬಾರದು. ಪುರುಷರಿಗಿಂತ ಬುದ್ಧಿ, ಸಾಹಸ ಮತ್ತು ಕಾಮವು ಅಧಿಕ ಅವಳಿಗೆ. ''ಶಾಸ್ತ್ರವೂ, ರಾಜಕೀಯಪುರುಷರೂ, ಯುವತಿಯರೂ ವಶವಾಗಿದ್ದಾರೆ, ಹೇಳಿದಂತೆ ಕೇಳುತ್ತಾರೆ'' ಎಂಬ ಭಾವನೆಯು ಕೇವಲ ಭ್ರಾಂತಿ.

ಅಸಹಾಯಃ ಪುಮಾನೇಕಃ ಕಾರ್ಯಾಂತಂ ನಾಧಿಗಚ್ಛತಿ ।
ತುಷೇಣಾಪಿ ವಿನಿರ್ಯುಕ್ತಸ್ತಂಡುಲೋ ನ ಪ್ರರೋಹತಿ ॥ ೧೩ ॥

ಅನ್ಯರ ಸಹಾಯವಿಲ್ಲದೆ ಕೇವಲ ಒಬ್ಬ ಮನುಷ್ಯನು ಕಾರ್ಯವನ್ನು ಸಾಧಿಸಲಾರ. ಮೇಲಿನ ಹೊಟ್ಟಿಲ್ಲದಿದ್ದರೆ ಭತ್ತವು ಬೆಳೆಯುತ್ತಲೇ ಇರಲಿಲ್ಲ. ಭತ್ತವು ಪೈರಾಗುತ್ತದೆ, ಅಕ್ಕಿಯಲ್ಲ.

ವಿಶ್ವಾಸಪ್ರತಿಪನ್ನಾನಾಂ ವಂಚನೇ ಕಾ ವಿದಗ್ಧತಾ ।
ಅಂಕಮಾರುಹ್ಯ ಸುಪ್ತಾನಾಂ ಹನನೇ ಕಿಂ ನು ಪೌರುಷಮ್॥ ೧೪ ॥

ನಂಬಿದವರನ್ನು ವಂಚಿಸಲು ಜಾಣ್ಮೆ ಬೇಕಿಲ್ಲ. ನಮ್ಮನ್ನು ಪೂರ್ಣವಾಗಿ ನಂಬಿದ ನಾಯಿ, ಬೆಕ್ಕು ಮುಂತಾದ ಪ್ರಾಣಿಗಳು ನಿಶ್ಚಿಂತೆಯಿಂದ ನಿರ್ಭಯದಿಂದ ನಮ್ಮ ತೊಡೆಯ ಮೇಲೆ ಮಲಗಿ ನಿದ್ರಿಸುತ್ತಿದ್ದಾಗ ಕೊಲೆ ಮಾಡುವುದರಲ್ಲಿ ಏನು ಪೌರುಷ ಕಾಣುತ್ತದೆ? ಇದರಂತೆ ತಾಯಿ ಮಕ್ಕಳನ್ನು ಕೊಲ್ಲಬಹುದು. ಇದನ್ನೇ ವಿಶ್ವಾಸಘಾತುಕತನ ಎನ್ನುವುದು.

ತ್ರಿಭಿರ್ವರ್ಷೈಃ ತ್ರಿಭಿರ್ಮಾಸೈಃ ತ್ರಿಭಿಃ ಪಕ್ಷೈಃ ತ್ರಿಭಿರ್ದಿನೈಃ ।
ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇ ॥ ೧೫ ॥

ಪಾಪ ಪುಣ್ಯಗಳ ಫಲ ಎಷ್ಟು ಬೇಗ ಹೆಚ್ಚಿದರೆ ಅಷ್ಟು ಬೇಗ ಕಷ್ಟಸುಖಗಳು ಪ್ರಾಪ್ತವಾಗುತ್ತವೆ. ಅಂದರೆ ಪಾಪಪುಣ್ಯಗಳ ಬಿಂದಿಗೆ ತುಂಬಿದ ಕೂಡಲೇ ಪರಿಣಾಮವುಂಟಾಗುತ್ತದೆ. ಆ ಬಿಂದಿಗೆ ತುಂಬಲು ಮೂರು ವರ್ಷ, ಮೂರು ಮಾಸ, ಮೂರು ಪಕ್ಷ, ಮೂರು ದಿನ ಆದರೂ ಆಗಬಹುದು. ಇವು ತುಂಬಾ ಅತಿಯಾದರೆ ಈ ಜನ್ಮದಲ್ಲೇ ಫಲಿಸುತ್ತವೆ.

ಅಂಡಕಂಡೂಯಮಾನೇನ ಯತ್ಸುಖಂ ತವ ಭೂಪತೇ ।
ಪಶ್ಚಾದ್ಭವತಿ ಯದ್ದುಃಖಂ ತದಸ್ತು ತವ ವೈರಿಣಾಮ್ ॥ ೧೬ ॥

ಇದು ಒಬ್ಬ ರಾಜನ ಸ್ತುತಿ. ಹಾಸ್ಯಮಯವಾಗಿದೆ. ಒಬ್ಬ ಬಡ ಬ್ರಾಹ್ಮಣ ಕವಿಯು ತನ್ನ ಅನುಭವವನ್ನು ತಿಳಿಸುತ್ತಾನೆ. ಅವನ ಮೈಯ್ಯಲ್ಲೆಲ್ಲಾ ಕಜ್ಜಿಯೆಂಬ ಚರ್ಮರೋಗವು ವ್ಯಾಪಿಸಿತ್ತು. ಅದು ನವೆಯುಂಟಾದಾಗ ಕೆರೆಯಲು ಪ್ರೇರಿಸುತ್ತದೆ. ಕೆರೆಯುತ್ತಿರುವಾಗ ಸುಖವಾಗಿರುತ್ತದೆ. ಆಮೇಲೆ ಉರಿ ನೋವುಗಳು ಕಾಣಿಸಿಕೊಳ್ಳುತ್ತವೆ. ಈ ಕವಿಯು ರಾಜನನ್ನು ಕುರಿತು, ''ಎಲೈ ಭೂಪತಿಯೇ, ಕಜ್ಜಿಹತ್ತಿದ ಅಂಡಕೋಶವನ್ನು ಕೆರೆದುಕೊಳ್ಳುತ್ತಿರುವಾಗ ಯಾವ ಸುಖವುಂಟಾಗುವುದೋ ಆ ಸುಖವು ನಿನಗಾಗಲಿ.

ಅನಂತರ ಯಾವ ನೋವು ಉರಿಗಳುಂಟಾಗುವುವೋ ಅವು ನಿನ್ನ ಶತ್ರುಗಳಿಗುಂಟಾಗಲಿ'' ಎಂದು ಹೇಳಿದನು. ರಾಜನಿಗೆ ಸುಖವನ್ನೂ ಅವನ ಶತ್ರುಗಳಿಗೆ ದುಃಖವನ್ನೂ ಕೋರಿದನು.

ಅಜ್ಞ್ಯಃಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞ್ಯಃ ।
ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ ॥ ೧೭ ॥

ಏನೂ ತಿಳಿಯದವನನ್ನು ಸುಲಭವಾಗಿ ಸಮಾಧಾನಪಡಿಸಬಹುದು. ಹಾಗೆಯೇ ಹೆಚ್ಚಾಗಿ ತಿಳಿದವನನ್ನು ಅಂದರೆ ವಿದ್ವಾಂಸನನ್ನು ಇನ್ನೂ ಸುಲಭವಾಗಿ ಸಮಾಧಾನಪಡಿಸಬಹುದು. ಆದರೆ ಅರ್ಧಜ್ಞಾನವುಳ್ಳವ ನನ್ನು —ಅಂದರೆ ತಿಳಿದೂ ಇಲ್ಲ, ತಿಳಿಯದೆಯೂ ಇಲ್ಲ (ಮೂರ್ಖ) ಅಂತಹ ಮನುಷ್ಯನನ್ನು ಬ್ರಹ್ಮನೂ ಏನೂ ಮಾಡಲಾರ.

ಅಲ್ಪತೋಯಶ್ಚಲತ್ಕುಂಭೋಽಲ್ಪದುಗ್ಧಾಶ್ಚ ಧೇನವಃ ।
ಅಲ್ಪವಿದ್ಯೋ ಮಹಾಗರ್ವೀ ಕುರೂಪೀ ಬಹುಚೇಷ್ಟಿತಃ ॥ ೧೮ ॥

ತುಂಬಿದ ಕೊಡವು ತುಳುಕುವುದಿಲ್ಲ. ಅರ್ಧವಿದ್ದರೆ ಸದ್ದು ಜಾಸ್ತಿ. ಸ್ವಲ್ಪ ಹಾಲುಕೊಡುವ ಹಸುಗಳು ತುಂಬಾ ಸಿಡುಕು ಸ್ವಭಾವದವಗಳಾಗಿರುತ್ತವೆ. ಹಾಯುವುದು, ಒದೆಯುವುದು ಹೆಚ್ಚು. ಅಲ್ಪವಿದ್ಯೆಯುಳ್ಳವನಿಗೆ ಗರ್ವ ಹೆಚ್ಚು. ಕುರೂಪಿಯು ಚೇಷ್ಟೆ ಮಾಡುವುದು ಹೆಚ್ಚು.

ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥ ೧೯ ॥

ಇದು ಮಾರೀಚನು ರಾವಣನಿಗೆ ಹೇಳಿರುವ ಹಿತವಚನ. ಎಲೈ ರಾಜನೇ, ಯಾವಾಗಲೂ ಪ್ರಿಯವಾಗಿ ಮಾತಾಡಬಲ್ಲ ಜನರು ಹೇರಳವಾಗಿ ದೊರೆಯುತ್ತಾರೆ. ಪರಿಣಾಮದಲ್ಲಿ ಪ್ರಿಯವಾಗುವ, ಸದ್ಯದಲ್ಲಿ ಅಪ್ರಿಯ

ವಾಗಿ ತೋರುವ ಮಾತನ್ನು ಆಡುವವರು ಕಡಿಮೆ, ಆಡಿದರೆ ಕೇಳುವವರೂ ಕಡಿಮೆ. ಹೊಗಳುಭಟ್ಟರೇ ಜಾಸ್ತಿ. ಈ ಕಾಲದಲ್ಲಿ ಇದು ಇನ್ನೂ ಹೆಚ್ಚು.

ನೃಪತೇಃ ಪ್ರತಿಷಿದ್ಧಮೇವ ತತ್
ಕೃತವಾನ್ ಪಂಕ್ತಿರಥೋ ವಿಲಂಘ್ಯ ಯತ್ ।
ಅಪಥೇ ಪದಮರ್ಪಯಂತಿ ಹಿ
ಶ್ರುತವಂತೋಽಪಿ ರಜೋನಿಮೀಲಿತಾಃ ॥ ೨೦ ॥

ಇದು ಕಾಳಿದಾಸನ ಕೃತಿ. ರಘುವಂಶದ ೯ನೆಯ ಸರ್ಗದಲ್ಲಿ ಬರುತ್ತದೆ. ರಾಜರು ಗಜವಧೆಯನ್ನು ಮಾಡುವುದು ಶಾಸ್ತ್ರನಿಷಿದ್ಧ. ವಿವೇಕಿಯಾದ ಪಂಕ್ತಿರಥನು, ಅಂದರೆ ದಶರಥನು ಅಂತಹ ಕಾರ್ಯವನ್ನು ಮಾಡಿದನು. ರಜೋಗುಣಕ್ಕೆ ತುತ್ತಾದಮೇಲೆ, ಶಾಸ್ತ್ರಜ್ಞಾನವುಳ್ಳವರೂ ದುರ್ಮಾರ್ಗದಲ್ಲಿ ನಡೆಯುತ್ತಾರೆ. ಬುದ್ಧಿಯು ಮಂಕಾಗುತ್ತದೆ.

ಯಾವನ್ನ ಪತತಿ ಭಾನುಸ್ತಾವತ್ ಸಂತಪತಿ ವಾಲುಕಾನಿಕರಃ ।
ಅನ್ಯಸ್ಮಾಲ್ಲಬ್ಧಪದಃ ಪ್ರಾಯೋ ನೀಚೋಽಪಿ ದುಸ್ಸಹಸ್ತಪ್ತಃ ॥ ೨೧ ॥

ಸೂರ್ಯನು ಪ್ರಕಾಶಿಸುವ ತನಕ ಮರಳಿನಲ್ಲಿ ಶಾಖವಿರುತ್ತದೆ. ಅವನು ಅಸ್ತನಾದ ಮೇಲೆ ಇದು ತಣ್ಣಗಾಗುತ್ತದೆ. ಆದರೆ ಸೂರ್ಯನಿಗಿಂತಲೂ, ಅವನಿಂದ ಉಷ್ಣತೆಯನ್ನು ಪಡೆದ ಮರಳು ಸೂರ್ಯನಿಗಿಂತ ಹೆಚ್ಚು ಸುಡುತ್ತದೆ. ಸಾಮಾನ್ಯವಾಗಿ ದೊಡ್ಡ ಅಧಿಕಾರಿಗಳಿಗಿಂತ ಅವರ ಬಾಗಿಲು ಕಾಯುವ ಜವಾನರದೇ ಜೋರು ಜಾಸ್ತಿ. ದೇವರಿಗಿಂತ ಅರ್ಚಕರದೇ ಪ್ರತಾಪ ಹೆಚ್ಚಾಗಿರುತ್ತದೆ. ಕುದುರೆಗಿಂತ ಲದ್ದಿ ಬಿರುಸು ಎಂಬ ಗಾದೆಯೂ ಉಂಟು.

ಅರ್ಚಕಸ್ಯ ಪ್ರಭಾವೇನ ಶಿಲಾ ಭವತಿ ಶಂಕರಃ ।
ಆಭಿರೂಪ್ಯಾಚ್ಚ ಮೂರ್ತೀನಾಂ ದೇವಸ್ಸಾನ್ನಿಧ್ಯಮೃಚ್ಛತಿ ॥ ೨೨ ॥

ಅರ್ಚಕನ ಪ್ರಭಾವದಿಂದ ಶಿಲೆಯು ಶಂಕರನಾಗುತ್ತದೆ. ವಿಗ್ರಹಗಳ ಎದುರಿಗೆ ನಿಂತುಕೊಂಡು ಭಕ್ತಿಯಿಂದ ಧ್ಯಾನಿಸಿದರೆ ದೇವತಾಸಾನ್ನಿಧ್ಯ ವುಂಟಾಗುತ್ತದೆ.

ಅಕ್ಷರಾಣಿ ಪರೀಕ್ಷ್ಯಂತಾಂ ಅಂಬರಾಡಂಬರೇಣ ಕಿಮ್ ।
ಶಂಭುರಂಬರಹೀನೋಽಪಿ ಸರ್ವಜ್ಞಃ ಕಿಂ ನ ಜಾಯತೇ ॥ ೨೩ ॥

ವಿದ್ಯೆಗೆ ಬೆಲೆ ಕೊಡಬೇಕು. ವಸ್ತ್ರಗಳ ಆಡಂಬರಕ್ಕಲ್ಲ. ಶಂಭುವು ವಸ್ತ್ರಹೀನನಾಗಿದ್ದರೂ ಸರ್ವಜ್ಞನಾಗಿಲ್ಲವೆ? ಸಾಮಾನ್ಯವಾಗಿ ಅವಿದ್ಯಾವಂತರೇ ವಸ್ತ್ರಾಭರಣಗಳನ್ನು ಮೆಚ್ಚುವವರು; ಸ್ತ್ರೀಯರು ಇನ್ನೂ ಹೆಚ್ಚು, ವಿದ್ಯಾವಂತರು ವಸ್ತ್ರಗಳಿಗೆ ಮಹತ್ವ ಕೊಡುವುದಿಲ್ಲ.

ಆ

ಆರೋಗ್ಯಂ ಭಾಸ್ಕರಾದಿಚ್ಛೇತ್ ಶ್ರಿಯಮಿಚ್ಛೇದ್ಧುತಾಶನಾತ್ ।
ಜ್ಞಾನಂ ಮಹೇಶ್ವರಾದಿಚ್ಛೇನ್ಮೋಕ್ಷಮಿಚ್ಛೇಜ್ಜನಾರ್ದನಾತ್ ॥ ೨೪ ॥

ಆರೋಗ್ಯವನ್ನು ಸೂರ್ಯನಿಂದ ಬಯಸಬೇಕು. ಸಂಪತ್ತನ್ನು ಅಗ್ನಿಯಿಂದ ಬಯಸಬೇಕು. ಜ್ಞಾನವನ್ನು ಮಹೇಶ್ವರನಿಂದ ಬಯಸಬೇಕು. ಮೋಕ್ಷವನ್ನು ಜನಾರ್ದನನಿಂದ ಬಯಸಬೇಕು.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥ ೨೫

ಒಂದು ಕುಲದ ಒಳಿತಿಗಾಗಿ ಒಬ್ಬನನ್ನು ತ್ಯಾಗಮಾಡಬೇಕು. ಗ್ರಾಮದ ಒಳಿತಿಗಾಗಿ ಕುಲವನ್ನು ತ್ಯಜಿಸಬೇಕು. ದೇಶಕ್ಕಾಗಿ ಗ್ರಾಮವನ್ನು ತ್ಯಜಿಸಬೇಕು. ತನಗಾಗಿ ಭೂಮಿಯನ್ನೇ ತ್ಯಾಗ ಮಾಡಬೇಕು. ಹೆಚ್ಚು ಲಾಭಕ್ಕಾಗಿ ಕಡಿಮೆ ತ್ಯಾಗ ಮಾಡುವುದು ಉತ್ತಮ. ದೇಹರಕ್ಷಣೆಗಾಗಿ ಒಂದು ಅಂಗವನ್ನು ತ್ಯಾಗ ಮಾಡಿದರೆ ಅಡ್ಡಿಯಿಲ್ಲ.

ಆಪದರ್ಥೇ ಧನಂ ರಕ್ಷೇತ್ ದಾರಾನ್ರಕ್ಷೇದ್ಧನೈರಪಿ ।
ಆತ್ಮಾನಂ ಸರ್ವದಾ ರಕ್ಷೇದ್ದಾರೈರಪಿ ಧನೈರಪಿ ॥ ೨೬ ॥

ಆಪತ್ಕಾಲಕ್ಕೆಂದು ಧನವನ್ನು ರಕ್ಷಿಸಿಕೊಳ್ಳಬೇಕು. ಧನಕ್ಕಿಂತಲೂ ಪತ್ನಿಯ ರಕ್ಷಣೆ ಇನ್ನೂ ಮುಖ್ಯ. ಧನ ಮತ್ತು ಭಾರ್ಯೆಗಿಂತಲೂ ತನ್ನನ್ನು ಕಾಪಾಡಿಕೊಳ್ಳುವುದು ಇನ್ನೂ ಮುಖ್ಯ. ಆತ್ಮರಕ್ಷಣೆಗಾಗಿ ಏನನ್ನು ಬೇಕಾದರೂ ತ್ಯಜಿಸಬಹುದು.

ಮಾತೃವತ್ಪರದಾರಾಶ್ಚ ಪರದ್ರವ್ಯಾಣಿ ಲೋಷ್ಟವತ್ ।
ಆತ್ಮವತ್ಸರ್ವಭೂತೇಷು ಯಃ ಪಶ್ಯತಿ ಸ ಪಂಡಿತಃ ॥ ೨೭ ॥

ಪರಸತಿಯರನ್ನು ತಾಯಿಯಂತೆಯೂ, ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ, ಎಲ್ಲ ಪ್ರಾಣಿಗಳನ್ನು ತನ್ನಂತೆಯೂ ನೋಡುವವನೇ ಪಂಡಿತನು.

ಅಧಿಕಾರಸ್ಯ ಗರ್ಭಸ್ಯ ಪತ್ನೀಪುತ್ರಾದಿಕಸ್ಯ ಚ ।
ಆಗಮೇ ಸುಖಮಾಪ್ನೋತಿ ನಿರ್ಗಮೇ ದುಃಖಮೇವ ಚ ॥ ೨೮ ॥

ಅಧಿಕಾರ, ಗರ್ಭ, ಪತ್ನೀಪುತ್ರರ ಆಗಮ ಅಂದರೆ ಪ್ರಾಪ್ತಿ. ಇವು ಬರುವಾಗ ಸುಖವೂ ಹೋಗುವಾಗ ದುಃಖವೂ ಆಗುತ್ತದೆ. ಪತ್ನೀಪುತ್ರರ ವಿಯೋಗವು ತುಂಬಾ ದುಃಖದಾಯಕ.

ಆಹಾರನಿದ್ರಾಭಯಮೈಥುನಾನಿ
ಸಾಮಾನ್ಯಮೇತತ್ಪಶುಭಿರ್ನರಾಣಾಂ ।
ಜ್ಞಾನಂ ಹಿ ತೇಷಾಮಧಿಕೋ ವಿಶೇಷೋ
ಜ್ಞಾನೇನ ಹೀನಃ ಪಶುಭಿಸ್ಸಮಾನಃ ॥ ೨೯ ॥

ಆಹಾರ ನಿದ್ರೆ ಭಯ ಮೈಥುನಗಳು ಎಲ್ಲ ಪ್ರಾಣಿಗಳಿಗೂ ಸಮಾನ. ಆ

ಎಲ್ಲಕ್ಕಿಂತ ಜ್ಞಾನವೇ ಮೇಲಾದುದು. ಅದು ಮನುಷ್ಯರಲ್ಲೂ ಎಲ್ಲರಿಗೂ ಇರುವುದಿಲ್ಲ. ಒಬ್ಬೊಬ್ಬರಿಗೆ ಇರುತ್ತದೆ. ಅದಿಲ್ಲದವನು ಪಶು ಸಮಾನನೇ.

ವೃದ್ಧಾರ್ಕೋ ಹೋಮಧೂಮಶ್ಚ ಬಾಲಸ್ತ್ರೀ ನಿರ್ಝರೋದಕಮ್ ।
ಆಯುಷ್ಯವರ್ಧಕಂ ನಿತ್ಯಂ ರಾತ್ರೌ ಕ್ಷೀರಾನ್ನಭೋಜನಮ್ ॥ ೩೦ ॥

ವೃದ್ಧಸೂರ್ಯ ದರ್ಶನ, ಹೋಮಧೂಮ ಸೇವನೆ, ಬಾಲಸ್ತ್ರೀ ಸಹವಾಸ, ಪ್ರವಾಹದ ನೀರು (ಹರಿಯುವ ನೀರು), ರಾತ್ರಿಯ ಹೊತ್ತು ಕ್ಷೀರಾನ್ನಭೋಜನ ಇವು ಆಯುರ್ವರ್ಧಕಗಳು.

ಬಾಲಾರ್ಕಃ ಪ್ರೇತಧೂಮಶ್ಚ ವೃದ್ಧಸ್ತ್ರೀ ಪಲ್ವಲೋದಕಮ್ ।
ಆಯುಷ್ಯನಾಶಕಂ ನಿತ್ಯಂ ರಾತ್ರೌ ದಧ್ಯನ್ನಭೋಜನಮ್ ॥ ೩೧ ॥

ಬಾಲಸೂರ್ಯ ದರ್ಶನ, ಪ್ರೇತಧೂಮ ಸೇವನೆ, ಹಳ್ಳದ ನೀರಿನ ಪಾನ (ಅಂದರೆ ನಿಂತಿರುವ ಹೊಂಡದ ನೀರು ಎಂದರ್ಥ), ವೃದ್ಧಸ್ತ್ರೀ ಸಮಾಗಮ, ರಾತ್ರಿಯಲ್ಲಿ ಮೊಸರನ್ನದ ಊಟ ಇವು ಆಯುರ್ನಾಶಕಗಳು. (ಆಯುಸ್ಸನ್ನು ನಾಶಮಾಡುತ್ತವೆ.)

ಆಶಾಯಾ ಯೇ ದಾಸಾಸ್ತೇ ದಾಸಾ ಸರ್ವಲೋಕಸ್ಯ ।
ಆಶಾ ಯೇಷಾಂ ದಾಸೀ ತೇಷಾಂ ದಾಸಾಯತೇ ಲೋಕಃ ॥ ೩೨ ॥

ಯಾರು ಆಸೆಯ ದಾಸರಾಗಿರುತ್ತಾರೋ, ಅವರು ಎಲ್ಲರಿಗೂ ದಾಸರಾಗುತ್ತಾರೆ. ಆಸೆಯೇ ಯಾರ ದಾಸಿಯಾಗುವುದೋ ಅವರಿಗೆ ಸರ್ವಲೋಕವೂ ದಾಸನಾಗುವುದು.

ಚಿಂತನೀಯಾ ಹಿ ವಿಪದಾಂ ಆದಾವೇವ ಪ್ರತಿಕ್ರಿಯಾ ।
ನ ಕೂಪಖನನಂ ಯುಕ್ತಂ ಪ್ರದೀಪ್ತೇ ವಹ್ನಿನಾ ಗೃಹೇ ॥ ೩೩ ॥

ಮುಂದೆ ಸಂಭವಿಸಬಹುದಾದ ವಿಪತ್ತುಗಳಿಗೆ ಮೊದಲೇ

ಪರಿಹಾರೋಪಾಯವನ್ನು ಯೋಚಿಸಿ ಸಿದ್ಧವಾಗಿರಬೇಕು. ಮನೆಗೆ ಬೆಂಕಿ ಬಿದ್ದಮೇಲೆ ಬಾವಿ ತೋಡುವುದು ಸಾಧುವಲ್ಲ.

ಇ

ಇದಮೇವ ಹಿ ಪಾಂಡಿತ್ಯಂ ಚಾತುರ್ಯಮಿದಮೇವ ಚ ।
ಇದಮೇವ ಸುಬುದ್ಧಿತ್ವಂ ಆಯಾದಲ್ಪತರೋ ವ್ಯಯಃ ॥ ೩೪ ॥

ಆದಾಯಕ್ಕಿಂತ ವ್ಯಯವು ಕಡಿಮೆಯಿರುವುದೇ ಪಾಂಡಿತ್ಯ, ಜಾಣತನ ಮತ್ತು ವಿವೇಕದ ಲಕ್ಷಣವು. ತಿಂಗಳಿಗೆ ಸಾವಿರ ರೂಪಾಯಿ ವರಮಾನವಿದ್ದರೆ ೯೫೦ರೂ. ವ್ಯಯಮಾಡಿದರೂ ಚಿಂತೆಯಿಲ್ಲ, ಸಾವಿರವನ್ನು ಮೀರಬಾರದು. (ಇಂತಹ ಜನರೇ ಹೆಚ್ಚು, ಸರ್ಕಾರದ ಸ್ಥಿತಿಯೂ ಹೀಗೆಯೇ ಆಗುತ್ತಿದೆ.)

ಸತ್ಕುಲೇ ಯೋಜಯೇತ್ಕನ್ಯಾಂ
ಪುತ್ರಂ ವಿದ್ಯಾಸು ಯೋಜಯೇತ್ ।
ವ್ಯಸನೇ ಯೋಜಯೇಚ್ಛತ್ರುಂ
ಇಷ್ಟಂ ಧರ್ಮೇಣ ಯೋಜಯೇತ್ ॥ ೩೫ ॥

ಕನ್ಯೆಯನ್ನು ಸತ್ಕುಲ ಪ್ರಸೂತನಿಗೆ ದಾನಮಾಡಬೇಕು. ಪುತ್ರನನ್ನು ಸದ್ವಿದ್ಯಾಭ್ಯಾಸದಲ್ಲಿ ತೊಡಗಿಸಬೇಕು. ಶತ್ರುವನ್ನು ಯಾವುದಾದರೂ ದುಶ್ಚಟಕ್ಕೆ ತೊಡಗಿಸಬೇಕು. ತನ್ನ ಇಷ್ಟಾರ್ಥಗಳನ್ನು ಧರ್ಮದ ಕಡೆ ತಿರುಗಿಸಬೇಕು.

ಉತ್ತಮಂ ಪ್ರಣಿಪಾತೇನ ಶೂರಂ ಭೇದೇನ ಯೋಜಯೇತ್ ।
ನೀಚಮಲ್ಪಪ್ರದಾನೇನ ಇಷ್ಟಂ ಧರ್ಮೇಣ ಯೋಜಯೇತ್ ॥ ೩೬ ॥

ಉತ್ತಮರನ್ನು ಪ್ರಣಾಮದಿಂದ ಒಲಿಸಿಕೊಳ್ಳಬೇಕು. ಶೂರರನ್ನು

ಭೇದೋಪಾಯದಿಂದ ಗೆಲ್ಲಬೇಕು. ನೀಚರಿಗೆ ಸ್ವಲ್ಪ ಧನವನ್ನು ಕೊಟ್ಟು ವಶಪಡಿಸಿಕೊಳ್ಳಬೇಕು. ತಮ್ಮ ಇಷ್ಟಾರ್ಥಗಳನ್ನು ಧರ್ಮಮಾರ್ಗದ ಕಡೆ ತಿರುಗಿಸಬೇಕು.

ಉ

ಉದ್ಯೋಗಃ ಖಲು ಕರ್ತವ್ಯಃ ಫಲಂ ಮಾರ್ಜಾರವದ್ಭವೇತ್ ।
ಜನ್ಮಪ್ರಭೃತಿ ಗೌರ್ನಾಸ್ತಿ ಪಯಃ ಪಿಬತಿ ನಿತ್ಯಶಃ ॥ ೩೭ ॥

ಮನುಷ್ಯನು ಯಾವುದಾದರೂ ಉದ್ಯೋಗವನ್ನು ಮಾಡಬೇಕು. ಬೆಕ್ಕಿಗೆ ಫಲ ದೊರಕುವಂತೆ, ಹೇಗೋ ಫಲಪ್ರಾಪ್ತಿಯಾಗುತ್ತದೆ. ಅದು ಹಸುವನ್ನೇನೂ ಸಾಕುವುದಿಲ್ಲ. ಆದರೂ ನಿತ್ಯವೂ ಹಾಲನ್ನು ಕುಡಿಯುತ್ತದೆ. ಬೆಕ್ಕಿನ ಉದ್ಯೋಗವೆಂದರೆ ಹಾಲಿರುವ ಜಾಗವನ್ನು ಪತ್ತೆಮಾಡಿ, ಪಾತ್ರೆಯನ್ನು ಉರುಳಿಸಿ ಹಾಲನ್ನು ಕುಡಿಯುವುದು.

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥ ೩೮ ॥

ಸಂಕುಚಿತ ಸ್ವಭಾವದವರು ''ಇವನು ತನ್ನವನೋ, ಪರನೋ'' ಎಂದು ಎಣಿಕೆಹಾಕುತ್ತಾರೆ. ಉದಾರ ಸ್ವಭಾವದ ಸಜ್ಜನರು ಸಮಸ್ತ ಭೂಮಂಡಲವನ್ನೇ ತಮ್ಮ ಕುಟುಂಬವೆಂದು ಭಾವಿಸುತ್ತಾರೆ.

ಅಶ್ವಸ್ಯ ಲಕ್ಷಣಂ ವೇಗೋ ಮದೋ ಮಾತಂಗಲಕ್ಷಣಮ್ ।
ಚಾತುರ್ಯಂ ಲಕ್ಷಣಂ ನಾರ್ಯಾ ಉದ್ಯೋಗಃ ಪುರುಷಲಕ್ಷಣಮ್॥

ವೇಗವು ಕುದುರೆಯ ಲಕ್ಷಣ. ಮದವು ಆನೆಯ ಭೂಷಣ. ಚಾತುರ್ಯವು ನಾರಿಯ ಲಕ್ಷಣ. ಉದ್ಯೋಗವು ಪುರುಷನ ಲಕ್ಷಣ.

ಉತ್ತಮಾ ಆತ್ಮನಾ ಖ್ಯಾತಾಃ ಪಿತ್ರಾ ಖ್ಯಾತಾಸ್ತು ಮಧ್ಯಮಾಃ ।
ಮಾತುಲೇನಾಧಮಾಃ ಖ್ಯಾತಾಃ ಶ್ವಶುರೇಣಾಧಮಾಧಮಾಃ ॥ ೪೦

ತನ್ನಿಂದಲೇ ಪ್ರಸಿದ್ಧರಾದವರು ಉತ್ತಮರು. ತಂದೆಯಿಂದ ಪ್ರಸಿದ್ಧರಾದವರು ಮಧ್ಯಮರು. ಸೋದರಮಾವನಿಂದ ಖ್ಯಾತರಾದವರು ಅಧಮರು. ಹೆಣ್ಣುಕೊಟ್ಟ ಮಾವನಿಂದ ಪ್ರಸಿದ್ಧರಾದವರು ಅಧಮಾಧಮರು.

ಉತ್ತಮೇ ತು ಕ್ಷಣಂ ಕೋಪಃ ಮಧ್ಯಮೇ ಘಟಿಕಾದ್ವಯಮ್ ।
ಅಧಮೇ ಸ್ಯಾದಹೋರಾತ್ರಂ ಪಾಪಿಷ್ಠೇ ಮರಣಾಂತಿಕಃ ॥ ೪೧ ॥

ಉತ್ತಮನಿಗೆ ಕೋಪವು ಕ್ಷಣಕಾಲವಿರುತ್ತದೆ. ಮಧ್ಯಮನಿಗೆ ಎರಡು ಘಂಟೆ ಇರುವುದು. ಅಧಮನಿಗೆ ಒಂದು ಹಗಲು ಒಂದು ರಾತ್ರಿ ಇರುತ್ತದೆ. ಪಾಪಿಗಳಿಗೆ ಸಾಯುವತನಕವಿರುವುದು.

ಸರ್ವಾಸ್ಸಂಪತ್ತಯಸ್ತಸ್ಯ ಸಂತುಷ್ಟಂ ಯಸ್ಯ ಮಾನಸಮ್ ।
ಉಪಾನದ್ಗೂಢಪಾದಸ್ಯ ನನು ಚರ್ಮಾವೃತೈವ ಭೂಃ ॥ ೪೨ ॥

ಯಾವನ ಮನಸ್ಸು ಸಂತುಷ್ಟವಾಗಿರುತ್ತದೆಯೋ ಅವನಿಗೆ ಸರ್ವ ಸಂಪತ್ತುಗಳೂ ಇದ್ದಂತೆಯೇ. ಕಾಲಿಗೆ ಪಾದರಕ್ಷೆ ಹಾಕಿಕೊಂಡವನಿಗೆ ಭೂಮಿಯೆಲ್ಲಾ ಚರ್ಮಹಾಸಿದಂತಿರುತ್ತದೆಯಲ್ಲವೇ?

ಉದ್ಯೋಗೇ ನಾಸ್ತಿ ದಾರಿದ್ರ್ಯಂ ಜಪತೋ ನಾಸ್ತಿ ಪಾತಕಮ್ ।
ಮೌನಿನಃ ಕಲಹೋ ನಾಸ್ತಿ ನ ಭಯಂ ಚಾಸ್ತಿ ಜಾಗ್ರತಃ ॥ ೪೩ ॥

ಉದ್ಯೋಗಶೀಲನಿಗೆ ದಾರಿದ್ರ್ಯವಿರುವುದಿಲ್ಲ. ಜಪಮಾಡುವವನಿಗೆ ಪಾಪವಿರುವುದಿಲ್ಲ. ಮೌನವಾಗಿರುವವನಿಗೆ ಕಲಹದ ಕಾಟವಿರುವುದಿಲ್ಲ. ಎಚ್ಚರದಿಂದಿರುವವನಿಗೆ ಯಾವ ಭಯವೂ ಇರದು.

ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಶವಕರ್ಪಟಃ ।
ಕಾಕವಿಷ್ಠಾಸಮುತ್ಪನ್ನಾಃ ಪಂಚೈತೇऽತಿಪವಿತ್ರಕಾಃ ॥ ೪೪ ॥

ಮುಂದೆಹೇಳಿರುವ ಐದು ವಸ್ತುಗಳು ತುಂಬಾ ಪವಿತ್ರವಾದವುಗಳು. ಹಾಲು—ಕರುವಿನ ಉಚ್ಛಿಷ್ಟ. ಅಂದರೆ, ಎಂಜಲು. ಶಿವನಿರ್ಮಾಲ್ಯ—ಗಂಗಾಜಲ. ಶಿವನು ತಲೆಯಿಂದ ಧರಿಸಿಬಿಟ್ಟದ್ದು. ವಮನಂ—ವಾಂತಿ ಅಂದರೆ ಜೇನುಹುಳುಗಳ ವಮನ—ಜೇನುತುಪ್ಪ. ಶವಕರ್ಪಟ ಎಂದರೆ ರೇಷ್ಮೆಹುಳುಗಳಿಂದ ಆದ ವಸ್ತ್ರ—ರೇಷ್ಮೆ ಮಗುಟ. ಕಾಕವಿಷ್ಠಾಸಮುತ್ಪನ್ನ ಎಂದರೆ ಅಶ್ವತ್ಥವೃಕ್ಷ. ಇದರ ಬೀಜ ಪ್ರಸಾರ ಕಾಕಮಲದಿಂದ ಆಗುತ್ತದೆ. ಆಶ್ವತ್ಥಪ್ರತಿಷ್ಠೆ ಅಥವಾ ವಿವಾಹದಲ್ಲಿ ಅರಳಿಮರಕ್ಕೆ ಕಾಕಮಲೋದ್ಭವ ಶಾಂತಿ ಮಾಡುತ್ತಾರೆ. ಇದು ಕಷ್ಟಸಹಿಷ್ಣು ಮತ್ತು ಬಲಿಷ್ಠವಾದುದು. ಆದ್ದರಿಂದ ನೀರೇ ಬೇಡ. ಎಂತಹ ಕೋಟೆಗಳ ಮಧ್ಯೆ ಮತ್ತು ಕಲ್ಲು ಸಂದಿಗಳಲ್ಲೂ ಬೆಳೆಯುತ್ತದೆ.

ಊ

ಕಾರ್ಪಾಸಂ ಕಟಿನಿರ್ಮುಕ್ತಂ ಕೌಶೇಯಂ ಭೋಜನಾವಧಿ ।
ಊರ್ಣವಸ್ತ್ರಂ ಸದಾ ಶುದ್ಧಂ ಊರ್ಣಾ ವಾತೇನ ಶುಧ್ಯತೇ ॥ ೪೫

ಹತ್ತಿಯ ವಸ್ತ್ರವು ಸೊಂಟದಿಂದ ಬಿಚ್ಚಿದಮೇಲೆ ಅಶುದ್ಧ. ರೇಷ್ಮೆಯ ವಸ್ತ್ರವು ಊಟಮಾಡಿದಮೇಲೆ ಅಶುದ್ಧ. ಉಣ್ಣೆಬಟ್ಟೆಯು ಸರ್ವದಾ ಶುದ್ಧ. ಏಕೆಂದರೆ ಅದು ಗಾಳಿಯಿಂದಲೇ ಶುದ್ಧವಾಗುತ್ತದೆ. ನೀರಿಗೆ ಹಾಕ-ಬೇಕಾಗಿಲ್ಲ.

ಋ

ಅಪಾತ್ರೇ ಪಾತ್ರತಾಬುದ್ಧಿಃ ಪಾತ್ರೇ ಬುದ್ಧಿರಪಾತ್ರತಾ ।
ಋಣಾನುಬಂಧರೂಪೇಣ ದಾತುರುತ್ಪದ್ಯತೇ ಮತಿಃ ॥ ೪೬ ॥

ಋಣಾನುಬಂಧರೂಪದಿಂದ ದಾನಮಾಡುವವನಿಗೆ ಅಯೋಗ್ಯನು ಯೋಗ್ಯನಾಗಿಯೂ, ಯೋಗ್ಯನು ಅಯೋಗ್ಯನಾಗಿಯೂ ಕಾಣಿಸುತ್ತಾನೆ. ಅಂತಹ ಬುದ್ಧಿಯು ಹುಟ್ಟುತ್ತದೆ.

ಏ

ಏಕಾಕ್ಷರಪ್ರದಾತಾರಂ ಯೋ ಗುರುಂ ನಾಭಿನಂದತಿ ।
ಶ್ವಾನಯೋನಿಶತಂ ಭುಕ್ತ್ವಾ ಚಾಂಡಾಲೇಷ್ವಭಿಜಾಯತೇ ॥ ೪೭ ॥

ಒಂದಕ್ಷರವನ್ನು ಹೇಳಿಕೊಟ್ಟ ಗುರುವನ್ನು ಕೂಡ ಯಾವನು ಗೌರವಿಸುವುದಿಲ್ಲವೋ, ಅವನು ನೂರು ಸಲ ನಾಯಿಜನ್ಮವೆತ್ತಿ ಕಡೆಗೆ ಚಂಡಾಲನಾಗಿ ಜನಿಸುವನು.

ಏಕಸ್ತಪೋ ದ್ವಿರಧ್ಯಾಯೀ ತ್ರಿಭಿರ್ಗೀತಂ ಚತುಷ್ಪಥಃ ।
ಸಪ್ತ ಪಂಚ ಕೃಷೀಣಾಂ ಚ ಸಂಗ್ರಾಮೋ ಬಹುಭಿರ್ಜನೈಃ ॥ ೪೮ ॥

ಚಿತ್ತೈಕಾಗ್ರತೆಯನ್ನು ಸಾಧಿಸಲು ತಪಸ್ಸನ್ನು ಒಬ್ಬನೇ ಮಾಡಬೇಕು. ಅಧ್ಯಯನಕ್ಕೆ ಇಬ್ಬರಿರಬೇಕು. ಇದರಿಂದ ವಿಚಾರ ವಿಮರ್ಶೆ, ವಿಚಾರ ವಿನಿಮಯಗಳು ಸಾಧ್ಯ. ಸಂಗೀತಕ್ಕೆ ಮೂವರಿರಬೇಕು. ಮಾರ್ಗ ಪ್ರಯಾಣಕ್ಕೆ ನಾಲ್ವರಿರಬೇಕು. ಕೃಷಿ ಕಾರ್ಯಕ್ಕೆ ಐದಾರು ಮಂದಿಯಿರಬೇಕು. ಯುದ್ಧಕ್ಕೆ ಬಹುಮಂದಿ ಇರಬೇಕು. ಈಗಿನ ವೈಜ್ಞಾನಿಕ ಯುಗದಲ್ಲಿ ಎಲ್ಲವೂ ಯಂತ್ರಾಧೀನವಾಗಿರುವುದರಿಂದ ಎಲ್ಲ ನಿಯಮಗಳೂ ಏರುಪೇರಾಗಿವೆ.

ಏಕಃ ಸ್ವಾದು ನ ಭುಂಜೀತ ನೈಕಃ ಸುಪ್ತೇಷು ಜಾಗ್ರಯಾತ್ ।
ಏಕೋ ನ ಗಚ್ಛೇತ್ಪಂಥಾನಂ ನೈಕಶ್ಚಾರ್ಥಾನ್ಪ್ರಚಿಂತಯೇತ್ ॥ ೪೯ ॥

ರುಚಿಕರವಾದ ಊಟವನ್ನಾಗಲೀ ತಿಂಡಿಯನ್ನಾಗಲೀ ಒಬ್ಬನೇ ತಿನ್ನ

ಬಾರದು. ದೋಷವಿರುವ ಸಂಭವವೂ ಉಂಟು. ತಿಂದರೆ ಸ್ವಾರ್ಥವಾಗುವುದು. ಎಲ್ಲರೂ ನಿದ್ರಿಸುತ್ತಿರುವಾಗ ಒಬ್ಬನು ಎದ್ದಿರಬಾರದು. ಸಂದೇಹಕ್ಕೆ ಎಡೆಯಾಗುತ್ತದೆ. ಅದೂ ರಾತ್ರಿಯ ರೈಲಿನಲ್ಲಿ ಎಲ್ಲರೂ ಹೇಗೇಗೋ ಮಲಗಿದ್ದಾಗ ಒಬ್ಬನು ಎದ್ದಿದ್ದರೆ ಇವನ ಹೆಗಲ ಮೇಲೆ ಕಾಲು ಚಾಚುತ್ತಾರೆ. ಹಾಗೆಯೇ ದೂರ ಪ್ರಯಾಣವನ್ನು ಒಬ್ಬನೇ ಮಾಡಬಾರದು. ಮಂತ್ರಾಲೋಚನೆಯನ್ನೂ ಒಬ್ಬನೇ ಮಾಡಬಾರದು. ಬಗೆಹರಿಯುವುದಿಲ್ಲ.

ಯತ್ರ ವಿದ್ವಜ್ಜನೋ ನಾಸ್ತಿ ಶ್ಲಾಘ್ಯಸ್ತತ್ರಾಲ್ಪಧೀರಪಿ ।
ನಿರಸ್ತಪಾದಪೇ ದೇಶೇ ಏರಂಡೋಽಪಿ ದ್ರುಮಾಯತೇ ॥ ೫೦ ॥

ವಿದ್ವಾಂಸರಿಲ್ಲದ ಕಡೆ ಸ್ವಲ್ಪ ವಿದ್ಯೆಯಿದ್ದರೂ ಅವನಿಗೇ ಬೆಲೆ ಬರುತ್ತದೆ. ದೊಡ್ಡ ಮರಗಳಿಲ್ಲದ ಸ್ಥಳದಲ್ಲಿ ಹರಳುಗಿಡವೇ ಮರದಂತೆ ಆಗುತ್ತದೆ. ಹಾಳೂರಿಗೆ ಉಳಿದವನೇ ಗೌಡ ಎಂದಂತೆ.

ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ ।
ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ ॥ ೫೧ ॥

ಇದು ಅಶೋಕವನದಲ್ಲಿ ಸೀತಾದೇವಿಯು ಹನುಮಂತನ ಭೇಟಿಯಾದ ಮೇಲೆ ಹೇಳಿರುವ ಮಾತು. ವಾಲ್ಮೀಕಿ ರಾಮಾಯಣದ ಸುಂದರ ಕಾಂಡದಲ್ಲಿದೆ. ಶುಭಪ್ರದವಾದ ಒಂದು ಗಾದೆಯು ನನಗೆ ತೋರುತ್ತಿದೆ. ಆಯುಸ್ಸಿದ್ದು ಮನುಷ್ಯನು ಬದುಕಿದ್ದರೆ ನೂರು ವರ್ಷ ಕಳೆದ ಮೇಲೂ ಆನಂದವುಂಟಾಗುವುದು. ಇದನ್ನೇ ''ಜೀವನ್ನರೋ ಭದ್ರಶತಾನಿ ಪಶ್ಯತಿ'' ಎಂದೂ ಹೇಳುತ್ತಾರೆ.

ಏಕೋಽಪಿ ಗುಣವಾನ್ ಪುತ್ರೋ ನಿರ್ಗುಣೈಃ ಕಿಂ ಕರಿಷ್ಯತಿ ।
ಏಕಶ್ಚಂದ್ರಸ್ತಮೋ ಹಂತಿ ನಕ್ಷತ್ರೈಃ ಕಿಂ ಪ್ರಯೋಜನಮ್ ॥ ೫೨ ॥

ಗುಣರಹಿತರಾದ ನೂರು ಮಂದಿ ಪುತ್ರರಿಗಿಂತ ಗುಣವಂತನಾದ

ಒಬ್ಬ ಪುತ್ರನೇ ಮೇಲು. ಒಬ್ಬ ಚಂದ್ರನು ಕತ್ತಲೆಯನ್ನು ತೊಲಗಿಸಿ ನೇತ್ರಾನಂದಕರನಾಗಿರುತ್ತಾನೆ. ಅಗಣಿತ ನಕ್ಷತ್ರಗಳಿದ್ದೇನು ಪ್ರಯೋಜನ?

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್
ನ ಬ್ರೂಯಾತ್ ಸತ್ಯಮಪ್ರಿಯಂ ।
ಪ್ರಿಯಂ ಚ ನಾನೃತಂ ಬ್ರೂಯಾತ್
ಏಷ ಧರ್ಮಸ್ಸನಾತನಃ ॥ ೫೩ ॥

ಸತ್ಯವನ್ನು ಹೇಳಬೇಕು. ಅದನ್ನು ಪ್ರಿಯವಾಗಿರುವಂತೆ ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಪ್ರಿಯವಾಗಿರಲೆಂದು ಸುಳ್ಳನ್ನು ಹೇಳಬಾರದು. ಇದು ಸನಾತನ ಧರ್ಮದ ಗುಟ್ಟು.

ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।
ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥ ೫೪ ॥

ಪಾಪಕಾರ್ಯವನ್ನು ಒಬ್ಬನು ಮಾಡುತ್ತಾನೆ. ಅದರ ಫಲವನ್ನು ಮಹಾಜನರು ಅನುಭವಿಸುತ್ತಾರೆ. ''ಹಣ್ಣುತಿಂದವನು ತಪ್ಪಿಸಿಕೊಂಡ, ಸಿಪ್ಪೆ ತಿಂದವನು ಸಿಕ್ಕಿ ಹಾಕಿಕೊಂಡ'' ಎಂಬಂತೆಯೂ ಆಗುವ ಸಂಭವವುಂಟು. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ. ತಂದೆಯು ಯಾವು ದಾದರೂ ಅಂಟುರೋಗವನ್ನು ಹೊಂದಿದ್ದರೆ ಮಕ್ಕಳಿಗೂ ಬರುತ್ತದೆ.

ಕ

ಹೀನಾಶ್ರಯೋ ನ ಕರ್ತವ್ಯಃ ಕರ್ತವ್ಯೋ ಮಹದಾಶ್ರಯಃ ।
ಪಯೋಽಪಿ ಶೌಂಡಿನೀಹಸ್ತೇ ವಾರುಣೀತ್ಯಭಿಧೀಯತೇ ॥ ೫೫ ॥

ಹೀನಾಶ್ರಯವು ಒಳ್ಳೆಯದಲ್ಲ. ದೊಡ್ಡವರಾಶ್ರಯವನ್ನು ಮಾಡ ಬೇಕು. ಮದ್ಯ ಮಾರುವ ಸ್ತ್ರೀಯ ಕೈಯ್ಯಲ್ಲಿರುವ ಹಾಲೂ ಕೂಡ ಮದ್ಯ

ವೆಂದು ಹೇಳಲ್ಪಡುತ್ತದೆ. ''ಈಚಲಮರದ ಕೆಳಗೆ ಮಜ್ಜಿಗೆ ಕುಡಿದರೆ ನಾಚಿಕೆಗೇಡು '' ಎಂಬ ಗಾದೆಯು ಇಲ್ಲಿ ಅನ್ವಯವಾಗುತ್ತದೆ.

ಕಷ್ಟಂ ಖಲು ಮೂರ್ಖತ್ವಂ
ಕಷ್ಟಂ ಖಲು ಯೌವನೇಷು ದಾರಿದ್ರ್ಯಮ್ ।
ಕಷ್ಟಾತ್ಕಷ್ಟತರಂ ಕಿಂ
ಪರಗೃಹವಾಸಃ ಪರಾನ್ನಂ ಚ ॥ ೫೬ ॥

ಮೂರ್ಖತನವು ಕಷ್ಟಕರವಾದುದು, ತಾರುಣ್ಯದಲ್ಲಿ ಬಡತನವನ್ನು ಅನುಭವಿಸುವುದೂ ಕಷ್ಟವೇ. ಪರಗೃಹವಾಸ ಮತ್ತು ಪರಾನ್ನವು ತುಂಬಾ ಕಷ್ಟತರವಾದುದು.

ಕೋ ಹಿ ಭಾರಃ ಸಮರ್ಥಾನಾಂ ಕಿಂ ದೂರಂ ವ್ಯವಸಾಯಿನಾಮ್ ।
ಕೋ ವಿದೇಶಸ್ಸುವಿದ್ಯಾನಾಂ ಕಃ ಪರಃ ಪ್ರಿಯವಾದಿನಾಮ್॥ ೫೭ ॥

ಸಮರ್ಥರಾದವರಿಗೆ ಭಾರವಾದುದು ಯಾವುದೂ ಇಲ್ಲ. ಕೆಲಸ ಮಾಡುವವರಿಗೆ ದೂರವು ಅಡ್ಡಿ ಬರುವುದಿಲ್ಲ. ಒಳ್ಳೆಯ ವಿದ್ಯಾವಂತರಿಗೆ ವಿದೇಶವಾವುದೂ ಇಲ್ಲ. ಪ್ರಿಯವಾಗಿ ಮಾತಾಡುವವರಿಗೆ ಶತ್ರುವೇ ಇರುವುದಿಲ್ಲ.

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸಂನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥ ೫೮ ॥

ಧರ್ಮಕಾರ್ಯವನ್ನು ತ್ವರೆಯಿಂದ ಮಾಡಬೇಕು. ಏಕೆಂದರೆ ಶರೀರವು ಅಶಾಶ್ವತ. ''ಶರೀರಮಾದ್ಯಂ ಖಲು ಧರ್ಮಸಾಧನಂ'' ಎಂದು ಕಾಳಿದಾಸನೂ ಹೇಳಿರುತ್ತಾನೆ. ಸಂಪತ್ತುಗಳು ಸ್ಥಿರವಲ್ಲ. ಮರಣವು ನೆರಳಿನಂತೆ ಹಿಂಬಾಲಿಸುತ್ತಲೇ ಇರುತ್ತದೆ. ಆದುದರಿಂದ ಧರ್ಮ ಸಂಗ್ರಹವನ್ನು ಬೇಗ ಮಾಡಬೇಕು.

ಕೃತೇ ಚ ರೇಣುಕಾ ಮೃತ್ಯುಃ ತ್ರೇತಾಯಾಂ ಜಾನಕೀ ತಥಾ ।
ದ್ವಾಪರೇ ದ್ರೌಪದೀ ಮೃತ್ಯುಃ ಕಲೌ ಮೃತ್ಯುಃ ಗೃಹೇ ಗೃಹೇ ॥ ೫೯ ॥

ಕೃತಯುಗದಲ್ಲಿ ಪರಶುರಾಮರ ತಾಯಿಯಾದ ರೇಣುಕಾ ದೇವಿಯ ನೆಪದಿಂದ ಕ್ಷತ್ರಿಯರ ನಾಶವಾಯಿತು. (ಭೂಭಾರ ಕಡಿಮೆಯಾಯಿತು) ತ್ರೇತಾಯುಗದಲ್ಲಿ ಜಾನಕಿಯ ನಿಮಿತ್ತವಾಗಿ ರಾಕ್ಷಸರು ಹತರಾದರು. ದ್ವಾಪರದಲ್ಲಿ ದ್ರೌಪದಿಯ ಕಾರಣದಿಂದ ಮಹಾಭಾರತ ಯುದ್ಧವಾಗಿ ಜನ ನಾಶವಾಯಿತು. ಕಲಿಯುಗದಲ್ಲಿ ಮನೆ ಮನೆಯಲ್ಲೂ ಮೃತ್ಯುವಿಗೆ ಅವಕಾಶವಿದೆ. ಒಡವೆ, ಭೋಗವಸ್ತು, ವಿದ್ಯುಚ್ಛಕ್ತಿ, ಸಿಲೆಂಡರ್, ದ್ವಿಚಕ್ರ ವಾಹನಗಳು ಇವೆಲ್ಲಾ ಮೃತ್ಯುವನ್ನು ಆಹ್ವಾನಿಸತಕ್ಕವುಗಳೇ.

ಕ್ವಚಿದ್ದಂತಾಲಕೋ ಮೂರ್ಖಃ ಕ್ವಚಿತ್ ಗಾನವತೀ ಸತೀ ।
ಕ್ವಚಿತ್ಕಾಣೋ ಭವೇತ್ಸಾಧುಃ ಖಲ್ವಾಟೋ ನಿರ್ಧನಃ ಕ್ವಚಿತ್ ॥ ೬೦ ॥

ಹಲ್ಲಿನಮೇಲೆ ಹಲ್ಲು ಬೆಳೆದವನು ಮೂರ್ಖನಾಗಿರುವುದು ಕಡಿಮೆ. ಅಂದರೆ ಜಾಣ. ಸಂಗೀತ ಹಾಡುವವಳು ಪತಿವ್ರತೆಯಾಗಿರುವುದು ಕಷ್ಟ. ಕುರುಡನು ಸಾಧುವಾಗಿರುವುದು ಕಡಿಮೆ. ಬೊಕ್ಕುತಲೆಯವನು ನಿರ್ಧನ ನಾಗಿರುವುದು ಕಡಿಮೆ. ಅಂದರೆ ಸ್ವಲ್ಪವಾದರೂ ಧನವಿರುತ್ತದೆಯೆಂದು ಭಾವ.

ದ್ರವ್ಯಾಣಿ ಭೂಮೌ ಪಶವಶ್ಚ ಗೋಷ್ಠೇ
ಭಾರ್ಯಾ ಗೃಹದ್ವಾರಿ ಜನಃ ಶ್ಮಶಾನೇ ।
ದೇಹಶ್ಚಿತಾಯಾಂ ಪರಲೋಕಮಾರ್ಗೇ
ಕರ್ಮಾನುಗೋ ಗಚ್ಛತಿ ಜೀವ ಏಕಃ ॥ ೬೧ ॥

ಮಾನವನು ಕಷ್ಟಪಟ್ಟು ಸಂಪಾದಿಸಿದ ಹಣವು ಬ್ಯಾಂಕಿನಲ್ಲಿ ಅಥವಾ ಮನೆಯಲ್ಲಿ ಒಡವೆ ವಸ್ತುಗಳ ರೂಪದಲ್ಲಿ ಇಲ್ಲೇ ಉಳಿದುಹೋಗುತ್ತದೆ.

ಸಾಕಿದ ಪಶುಗಳು ಕೊಟ್ಟಿಗೆಯಲ್ಲೂ, ಕಾರುಗಳು ಷೆಡ್ಡಿನಲ್ಲೂ ಉಳಿದು ಹೋಗುತ್ತವೆ. ಹೆಂಡತಿಯು ಮನೆಯ ಬಾಗಿಲಲ್ಲಿ ನಿಂತುಹೋಗುತ್ತಾಳೆ. ಉಳಿದ ನೆಂಟರಿಷ್ಟರು ಶ್ಮಶಾನದಲ್ಲಿ ನಿಂತುಬಿಡುತ್ತಾರೆ. ದೇಹವು ಚಿತೆಯ ಮೇಲೆ ಮಲಗಿರುತ್ತದೆ (ಅದೂ ಒಡವೆ ವಸ್ತುಗಳಿಲ್ಲದೆ). ಪರಲೋಕ ಮಾರ್ಗದಲ್ಲಿ ಜೀವನೊಬ್ಬನೇ ಪ್ರಯಾಣ ಮಾಡುತ್ತಾನೆ. ಪಾಪಪುಣ್ಯಗಳು ಮಾತ್ರ ಹಿಂಬಾಲಿಸುತ್ತವೆ.

ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್ ।
ಕ್ಷಣತ್ಯಾಗೇ ಕುತೋ ವಿದ್ಯಾ ಕಣತ್ಯಾಗೇ ಕುತೋ ಧನಮ್ ॥ ೬೨ ॥

ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ವಿದ್ಯೆಯನ್ನು ಕಲಿಯಬೇಕು. ಒಂದು ಚೂರೂ ಪೋಲಾಗದಂತೆ ಧನವನ್ನು ಸಂಗ್ರಹಿಸಬೇಕು. ಒಂದು ಕ್ಷಣ ವ್ಯರ್ಥವಾದರೂ ವಿದ್ಯೆ ಬಾರದು. ಹಾಗೆಯೇ ಚೂರು ಚೂರು ಹಾಳಾಗುತ್ತಿದ್ದರೆ (ಹಣದ ಸೋರಿಕೆ) ಧನವು ಉಳಿಯುವುದಿಲ್ಲ.

ಕಂ ಸಂಜಘಾನ ಕೃಷ್ಣಃ ಕಾ ಶೀತಲವಾಹಿನೀ ಗಂಗಾ ।
ಕೇ ದಾರಪೋಷಣರತಾಃ ಕಂ ಬಲವಂತಂ ನ ಬಾಧತೇ ಶೀತಮ್॥ ೬೩ ॥

ಇದೊಂದು ಅಲಂಕಾರಕ್ಕೆ ಉದಾಹರಣೆಯಾಗಿದೆ. ಪ್ರಶ್ನೆ-ಉತ್ತರ ಒಂದರಲ್ಲೇ ಇರುತ್ತದೆ. ಪ್ರಶ್ನೆ–ಕಂ ಸಂಜಘಾನ? ಕೃಷ್ಣನು ಯಾರನ್ನು ಕೊಂದನು? ಉತ್ತರ–ಕಂಸಂ ಜಘಾನ. ಕಂಸನನ್ನು ಕೃಷ್ಣನು ಕೊಂದನು. ಶೀತಲವಾಹಿನೀ ಗಂಗೆಯು ಯಾವಳು? ಕಾಶಿಯ ಪಕ್ಕದಲ್ಲಿ ಹರಿಯುವವಳು. ದಾರಪೋಷಣರತಾಃ ಅಂದರೆ ಹೆಂಡತಿಯನ್ನು ಸಾಕುವವರಾರು ಎಂದರೆ ಕೇದಾರ=ಭೂಮಿ, ಕ್ಷೇತ್ರವನ್ನು ಪೋಷಿಸುವವರು ಅಂದರೆ ಕೃಷಿ ಮಾಡುವವರು. ಶೀತವು ಯಾವ ಬಲಿಷ್ಠನನ್ನು ತಾನೇ ಬಾಧಿಸುವುದಿಲ್ಲ? ಎಂದರೆ ಕಂಬಲವಂತಂ=ಕಂಬಳಿ ಹೊದ್ದವನನ್ನು ಬಾಧಿಸುವುದಿಲ್ಲವೆಂದು ಉತ್ತರ.

ಕಾಕಃ ಕೃಷ್ಣಃ ಪಿಕಃ ಕೃಷ್ಣಃ ಕೋ ಭೇದಃ ಪಿಕಕಾಕಯೋಃ ।
ವಸಂತಸಮಯೇ ಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ ॥ ೬೪ ॥

ಕಾಗೆಯೂ ಕಪ್ಪು. ಕೋಗಿಲೆಯೂ ಕಪ್ಪು. ಅವೆರಡಕ್ಕೂ ಏನು ಭೇದವೆಂದರೆ—ವಸಂತಋತು ಬಂದಾಗ ಕೋಗಿಲೆಯು ಇಂಪಾಗಿ ಕೂಗುತ್ತದೆ. ಕಾಗೆಯು ಕರ್ಕಶವಾಗಿ ಅರಚುತ್ತದೆ. ಬಣ್ಣವಲ್ಲ ಮುಖ್ಯವಾದುದು, ಗುಣವೆಂದರ್ಥ.

ಕಾಲಃ ಪಚತಿ ಭೂತಾನಿ ಕಾಲಃ ಸಂಹರತೇ ಪ್ರಜಾಃ ।
ಕಾಲಃ ಸುಪ್ತೇಷು ಜಾಗರ್ತಿ ಕಾಲೋ ಹಿ ದುರತಿಕ್ರಮಃ ॥ ೬೫ ॥

ಕಾಲವು (ಯಮನು) ಸರ್ವಭೂತಗಳನ್ನೂ ಹಣ್ಣು ಮಾಡುತ್ತದೆ. ಕಾಲವು (ಯಮನು) ಸರ್ವಪ್ರಜೆಗಳನ್ನೂ ಸಂಹರಿಸುತ್ತದೆ. ಎಲ್ಲರೂ ನಿದ್ರಿಸುತ್ತಿರುವಾಗ ಕಾಲವು(ನು) ಎಚ್ಚರದಿಂದಿರುತ್ತದೆ. ಕಾಲವನ್ನು (ನನ್ನು) ಮೀರುವವರು ಯಾರೂ ಇಲ್ಲ.

ಮಾತುಲೋ ಯಸ್ಯ ಕೃಷ್ಣಶ್ಚ ಪಿತಾ ಯಸ್ಯ ಧನಂಜಯಃ ।
ಅಭಿಮನ್ಯೋರ್ಗತಾಃ ಪ್ರಾಣಾಃ ಕಾಲಸ್ಯ ಕುಟಿಲಾ ಗತಿಃ ॥ ೬೬ ॥

ಯಾವನಿಗೆ ಶ್ರೀಕೃಷ್ಣನೇ ಸೋದರಮಾವನೋ, ಅರ್ಜುನನೇ ತಂದೆಯೋ ಅಂತಹ ಅಭಿಮನ್ಯುವು ಮೃತನಾದನು. ಕಾಲಗತಿಯು ವಕ್ರವಾಗಿದೆ.

ಪ್ರಾತರ್ದ್ಯೂತಪ್ರಸಂಗೇನ ಮಧ್ಯಾಹ್ನೇ ಸ್ತ್ರೀಪ್ರಸಂಗತಃ ।
ರಾತ್ರೌ ಚೋರಪ್ರಸಂಗೇನ ಕಾಲೋ ಗಚ್ಛತಿ ಧೀಮತಾಮ್ ॥ ೬೭

ವಿದ್ವಾಂಸರ ಕಾಲವು ಪ್ರಾತಃಕಾಲದಲ್ಲಿ ಜೂಜಿನ ಪ್ರಸಂಗದಿಂದಲೂ ಮಧ್ಯಾಹ್ನದಲ್ಲಿ ಸ್ತ್ರೀಪ್ರಸಂಗದಿಂದಲೂ, ರಾತ್ರಿಯಲ್ಲಿ ಚೋರಪ್ರಸಂಗದಿಂದಲೂ ಕಳೆದುಹೋಗುತ್ತದೆ. ದ್ಯೂತಪ್ರಸಂಗವೆಂದರೆ ಭಾರತ.

ಸ್ತ್ರೀಪ್ರಸಂಗವೆಂದರೆ ರಾಮಾಯಣ. ಚೋರಪ್ರಸಂಗವೆಂದರೆ ಭಾಗವತ. ಪಗಡೆಯಾಟ, ಸೀತಾದೇವಿ, ಕೃಷ್ಣ ಬೆಣ್ಣೆ ಕದಿಯುವುದು ಎಂಬುದಾಗಿ.

ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್ ।
ವ್ಯಸನೇನ ತು ಮೂರ್ಖಾಣಾಂ ನಿದ್ರಯಾ ಕಲಹೇನ ವಾ ॥ ೬೮ ॥

ವಿದ್ಯಾವಂತರು ತಮ್ಮ ಸಮಯವನ್ನು ಕಾವ್ಯರಚನೆ, ಓದುವಿಕೆ, ಶಾಸ್ತ್ರಾವಲೋಕನ ಮುಂತಾದವುಗಳಿಂದ ಕಳೆದರೆ ಮೂರ್ಖರು ದುಶ್ಚಟ, ಮದ್ಯಪಾನ, ಜೂಜು, ನಿದ್ರೆ, ನಿಷ್ಕಾರಣವಾದ ವ್ಯಾಜ್ಯಗಳಿಂದ ಕಳೆಯುತ್ತಾರೆ.

ಕಾವ್ಯೇಷು ನಾಟಕಂ ರಮ್ಯಂ ತತ್ರಾಪಿ ಚ ಶಕುಂತಲಾ ।
ತತ್ರಾಪಿ ಚ ಚತುರ್ಥೋಽಂಕಸ್ತತ್ರ ಶ್ಲೋಕಚತುಷ್ಟಯಮ್ ॥ ೬೯ ॥

ಕಾವ್ಯಗಳಲ್ಲಿ ನಾಟಕವು ರಮ್ಯವಾದುದು ಅದರಲ್ಲೂ ಶಕುಂತಲಾ ನಾಟಕವು. ಅದರಲ್ಲೂ ನಾಲ್ಕನೆಯ ಅಂಕ, ಅದರಲ್ಲೂ ನಾಲ್ಕು ಪದ್ಯಗಳು. [ಯಾಸ್ಯತ್ಯದ್ಯ; ಪಾತುಂ ನ ಪ್ರಥಮಂ; ಅಸ್ಮಾನ್ ಸಾಧು, ಶುಶ್ರೂಷಸ್ವ]

ಕಾಲೇ ವಾಪ್ಯಥವಾಽಕಾಲೇ ಸಂಧ್ಯಾವಂದನತತ್ಪರಃ ।
ಅವಿದ್ಯೋ ವಾ ಸವಿದ್ಯೋ ವಾ ಬ್ರಾಹ್ಮಣೋ
ಮಾಮಕೀ ತನುಃ ॥ ೭೦ ॥

ಸಕಾಲದಲ್ಲೋ ಅಕಾಲದಲ್ಲೋ; ವಿದ್ಯಾವಂತನಾದರೂ ಸರಿ, ಅವಿದ್ಯಾವಂತನಾದರೂ ಸರಿ; ಸಂಧ್ಯಾವಂದನೆ ಮಾಡುವ ಬ್ರಾಹ್ಮಣನು ಪರಬ್ರಹ್ಮನ ಸ್ವರೂಪ.

ವಿಜೇತವ್ಯಾ ಲಂಕಾ ಚರಣತರಣೀಯೋ ಜಲನಿಧಿಃ
ವಿಪಕ್ಷಃ ಪೌಲಸ್ತ್ಯೋ ರಣಭುವಿ ಸಹಾಯಾಶ್ಚ ಕಪಯಃ ।

ತಥಾಪ್ಯೇಕೋ ರಾಮಃ ಸಕಲಮಜಯದ್ರಾಕ್ಷಸಕುಲಮ್
ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ ॥ ೭೧ ॥

ಜಯಿಸಬೇಕಾಗಿದ್ದುದು ಲಂಕೆ. ಕಾಲಿಂದ ದಾಟಬೇಕಾಗಿದ್ದುದು ಸಮುದ್ರ. ಶತ್ರುವಾದರೋ ರಾವಣನು. ಯುದ್ಧದಲ್ಲಿ ಸಹಾಯಕರಾದವರೋ ಮರ್ಕಟಗಳು. ಹೀಗಿದ್ದರೂ ರಾಮನೊಬ್ಬನೇ ಸಕಲ ರಾಕ್ಷಸರನ್ನೂ ಜಯಿಸಿದನೆಂದರೆ, ಮಹಾತ್ಮರಿಗೆ ಸಾಧನ ಸಂಪತ್ತುಗಳು ಮುಖ್ಯವಲ್ಲ. ಅವರ ಕ್ರಿಯಾಸಿದ್ಧಿಗೆ ಪರಾಕ್ರಮವೇ ಕಾರಣ.

ವಿಪಕ್ಷಃ ಶ್ರೀಕಂಠೋ ಜಡತನುರಮಾತ್ಯಶ್ಶಶಧರಃ
ವಸಂತಃ ಸಾಮಂತಃ ಕುಸುಮಮಿಷವಃ ಸೈನ್ಯಮಬಲಾಃ ।
ತಥಾಪಿ ತ್ರೈಲೋಕ್ಯಂ ಜಯತಿ ಮದನೋ ದೇಹರಹಿತಃ
ಕ್ರಿಯಾಸಿದ್ಧಿಃ ಸತ್ತ್ವೇ ವಸತಿ ಮಹತಾಂ ನೋಪಕರಣೇ ॥

ಶತ್ರುವು ಶಂಭುವು ಅಂದರೆ ಮದನಾರಿ; ಅಮಾತ್ಯನು ಜಡದೇಹಿಯಾದ ಚಂದ್ರನು. ಸಾಮಂತನು ಕೋಮಲನಾದ ವಸಂತನು. ಬಾಣಗಳು ಪುಷ್ಪಗಳೇ; ಸೈನಿಕರೋ ಅಬಲೆಯರು (ಸ್ತ್ರೀಯರು) ಸ್ವಯಂ ದೇಹವನ್ನೇ ಕಳೆದುಕೊಂಡವನು ಮನ್ಮಥ. ಅಂತಹವನು ಮೂರು ಲೋಕಗಳನ್ನು ಜಯಿಸುತ್ತಾನೆ ಎಂದರೆ ಮಹಾಪುರುಷರ ಕಾರ್ಯಸಿದ್ಧಿಯು ಅವರ ಸ್ವಶಕ್ತಿಯನ್ನವಲಂಬಿಸಿರುತ್ತದೆ, ಸಾಧನ ಸಂಪತ್ತುಗ್ಗಳನ್ನಲ್ಲ. ॥ ೭೨ ॥

ಜಗನ್ಮಾತರ್ಮಾತಸ್ತವ ಚರಣಸೇವಾ ನ ರಚಿತಾ
ನ ವಾ ದತ್ತಂ ದೇವಿ ದ್ರವಿಣಮಪಿ ಭೂಯಸ್ತವ ಮಯಾ ।
ತಥಾಪಿ ತ್ವಂ ಸ್ನೇಹಂ ಮಯಿ ನಿರುಪಮಂ ಯತ್ಪ್ರಕುರುಷೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥

ಎಲೈ ಜಗನ್ಮಾತೆಯಾದ ನನ್ನ ತಾಯಿಯೇ, ನಿನ್ನ ಪಾದಸೇವೆಯನ್ನು

ನಾನು ಮಾಡಲಿಲ್ಲ. ನಿನಗಾಗಿ ಸಾಕಷ್ಟು ಧನವನ್ನೂ ವ್ಯಯಿಸಲಿಲ್ಲ. ಆದರೂ ನೀನು ನನ್ನ ವಿಷಯದಲ್ಲಿ ಅನುಪಮವಾದ ಸ್ನೇಹ ವಾತ್ಸಲ್ಯಗಳನ್ನು ತೋರಿಸುತ್ತಿರುವೆ. ಅಮ್ಮ, ಕೆಟ್ಟ ಮಗನು ಹುಟ್ಟಿಯಾನು; ಕೆಟ್ಟ ತಾಯಿಯು ಹುಟ್ಟುವುದಿಲ್ಲ. ॥ ೭೩ ॥

ಕುಗ್ರಾಮವಾಸಃ ಕುಲಹೀನಸೇವಾ
ಕುಭೋಜನಂ ಕ್ರೋಧಮುಖೀ ಚ ಭಾರ್ಯಾ ।
ಪುತ್ರಶ್ಚ ಮೂರ್ಖೋ ವಿಧವಾ ಚ ಪುತ್ರೀ
ವಿನಾಗ್ನಿನಾ ಸಂದಹತೇ ಶರೀರಮ್ ॥ ೭೪ ॥

ಅಂಗಾಂಗಗಳು ಸ್ವಸ್ಥವಾಗಿದ್ದರೆ ದೇಹವೂ ಗಟ್ಟಿಯಾಗಿರುತ್ತದೆ. ಕುಟುಂಬವರ್ಗದವರೆಲ್ಲಾ ಚೆನ್ನಾಗಿದ್ದರೆ ಯಜಮಾನನೂ ಚೆನ್ನಾಗಿರುತ್ತಾನೆ. ಇದು ಒಂದು ವಿಷಮವಾದ ಉದಾಹರಣೆ. ಕುಗ್ರಾಮದಲ್ಲಿ ವಾಸ ಮಾಡುವುದು, ಹೀನಕುಲದವರ ಸೇವೆ, ಕೆಟ್ಟ ಊಟ, ಉರಿಮುಖದ ಹೆಂಡತಿ, ಮೂರ್ಖನಾದ ಪುತ್ರ, ವಿಧವೆಯಾದ ಮಗಳು ಇವೆಲ್ಲಾ ಬೆಂಕಿಯಿಲ್ಲದೆ ದೇಹವನ್ನು ಸುಡುತ್ತವೆ.

ನ ಹಿ ಜ್ಯೇಷ್ಠಸ್ಯ ಜ್ಯೇಷ್ಠತ್ವಂ ಗುಣೈರ್ಜ್ಯೇಷ್ಠತ್ವಮುಚ್ಯತೇ ।
ಕೇತಕೀ ಗುರುಪತ್ರೇಭ್ಯೋ ಲಘೂನಾಮೇವ ಗೌರವಮ್ ॥ ೭೫ ॥

ಕೇವಲ ಮೊದಲು ಹುಟ್ಟಿದುದರಿಂದ ಮಾತ್ರ ಗೌರವ, ಬೆಲೆ ಬರುವುದಿಲ್ಲ. ಗುಣಗಳಿಂದಲೇ ಬೆಲೆ. ಕೇದುಗೆಹೂವಿನ ಮೇಲಿನ ಪತ್ರಗಳಿಗೆ ಗೌರವ ಕಡಿಮೆ. ಕಾರಣ ಪರಿಮಳವಿಲ್ಲದಿರುವುದು. ಸುವಾಸನೆಯಿಂದ ಕಡೆಯಲ್ಲಿ ಹುಟ್ಟಿದ ಪತ್ರಗಳಿಗೇ ಬೆಲೆ ಹೆಚ್ಚು. ಹಾಗೆಯೇ ಖಾರದ ಗುಣದಿಂದ ದೊಡ್ಡ ಮೆಣಸಿನಕಾಯಿಗಿಂತ ಚಿಕ್ಕದಕ್ಕೇ ಬೆಲೆ. ಜ್ಯೇಷ್ಠ ಪುತ್ರರಿಗಿಂತ ಕನಿಷ್ಠರೇ ಚುರುಕಾಗಿರುತ್ತಾರೆ. ಶ್ರೀಕೃಷ್ಣನು ಎಂಟನೆಯ ಪುತ್ರ. ಕಾಲಗತಿಯಿಂದ ಈಗ ಕನಿಷ್ಠಪುತ್ರನ ಜನನಕ್ಕೇ ಅವಕಾಶವಿಲ್ಲದಂತಾಗಿದೆ.

ಕೋ ನರಕಃ ಪರವಶತಾ ಕಿಂ ಸೌಖ್ಯಂ ಸರ್ವಸಂಗವಿರತಿರ್ಯಾ ।
ಕಿಂ ಸತ್ಯಂ ಭೂತಹಿತಂ ಕಿಂ ಪ್ರೇಯಃ ಪ್ರಾಣಿನಾಮಸವಃ ॥ ೭೬ ॥

ಪರಾಧೀನತೆಯೇ ನರಕ, ಸರ್ವಸಂಗಪರಿತ್ಯಾಗವೇ ಸುಖಕರ. ಸತ್ಯವೆಂದರೆ, ಪ್ರಾಣಿಗಳಿಗೆ ಹಿತವನ್ನು ಮಾಡುವುದು. ಪ್ರಾಣಿಗಳಿಗೆ ಅತಿಪ್ರಿಯವಾದುದು ಪ್ರಾಣ.

ಕೋ ಧರ್ಮೋ ಭೂತದಯಾ
ಕಿಂ ಸೌಖ್ಯಮರೋಗಿತಾ ಜಗತಿ ಜಂತೋಃ ।
ಕಃ ಸ್ನೇಹಃ ಸದ್ಭಾವಃ
ಕಿಂ ಪಾಂಡಿತ್ಯಂ ಪರಿಚ್ಛೇದಃ ॥ ೭೭ ॥

ಭೂತದಯೆಯೇ ಧರ್ಮವು. ಆರೋಗ್ಯವೇ ಸೌಖ್ಯವು. ಸೌಜನ್ಯವೇ ಸ್ನೇಹವು. ಸಂಸಾರಬಂಧನಗಳನ್ನು ಕತ್ತರಿಸಿಕೊಳ್ಳುವುದೇ ಪಾಂಡಿತ್ಯ.

ಖ

ಖಲಸಖ್ಯಂ ಪ್ರಾಙ್ಮಧುರಂ ವಯೋಂತರಾಲೇ
ನಿದಾಘದಿನಮಂತೇ ।
ಏಕಾದಿಮಧ್ಯಪರಿಣತಿರಮಣೀಯಾ ಸಾಧುಜನಮೈತ್ರೀ ॥ ೭೮ ॥

ದುರ್ಜನರ ಸ್ನೇಹವು ಮೊದಲಲ್ಲಿ ಚೆನ್ನಾಗಿರುತ್ತದೆ. ವಯಸ್ಸಿನಲ್ಲಿ ಮಧ್ಯಭಾಗವು ಚೆನ್ನ. ಬಾಲ್ಯ ವಾರ್ಧಕಗಳು ಹಿತವಾಗಿರುವುದಿಲ್ಲ. ಬೇಸಗೆ ಕಾಲದ ದಿವಸದಲ್ಲಿ ಸಂಜೆ ಹೊತ್ತು ಚೆನ್ನಾಗಿರುತ್ತದೆ. ಆದರೆ, ಆದಿಯಲ್ಲೂ, ಮಧ್ಯದಲ್ಲೂ ಮತ್ತು ಅಂತ್ಯದಲ್ಲೂ ರಮಣೀಯ (ಹಿತಕರ) ವಾಗಿರುವುದು ಸಜ್ಜನರ ಮೈತ್ರಿ (ಸಖ್ಯ) ಯೊಂದೇ.

ನಿರ್ವಿಷೇಣಾಪಿ ಸರ್ಪೇಣ ಕರ್ತವ್ಯಾ ಮಹತೀ ಫಣಾ ।
ವಿಷಂ ಭವತು ಮಾ ವಾಸ್ತು ಖಟಾಟೋಪೋ ಭಯಂಕರಃ ॥ ೭೯

ಹಾವು ವಿಷವಿಲ್ಲದಿದ್ದರೂ ಹೆಡೆಯಾಡಿಸುತ್ತಿರಬೇಕು. ಇಲ್ಲದಿದ್ದರೆ ಜನಗಳು ಉಡಿದಾರಕ್ಕೂ ಹಾವನ್ನೇ ಬಳಸುತ್ತಾರೆ. ಅಂದರೆ ಭಯ ಹುಟ್ಟಿಸಬೇಕು, ಸದರವಾಗಬಾರದು ಎಂದರ್ಥ. ಕೆಲವರು ಸ್ವರಜ್ಞಾನ ವಿಲ್ಲದಿದ್ದರೂ ಗಟ್ಟಿಯಾಗಿ ಮಂತ್ರ ಹೇಳುತ್ತಾರೆ. ವ್ಯಾಕರಣ ಜ್ಞಾನವಿಲ್ಲ ದಿದ್ದರೂ ಗಟ್ಟಿಯಾಗಿ ಭಾಷಣ ಮಾಡುತ್ತಾರೆ. ಫಟಾಟೋಪ ಎಂದೂ ಉಂಟು.

ಗ

ಭವಿತವ್ಯಂ ಭವತ್ಯೇವ ನಾರಿಕೇಲಫಲಾಂಬುವತ್ ।
ಗಂತವ್ಯಂ ಗತಮಿತ್ಯಾಹುಃ ಗಜಭುಕ್ತಕಪಿತ್ಥವತ್ ॥ ೮೦ ॥

ತೆಂಗಿನಕಾಯಿಯೊಳಗೆ ನೀರು ಸಂಗ್ರಹವಾಗುವಂತೆ ಹೇಗೋ ಆಗಬೇಕಾದ ಕಾರ್ಯಗಳು ಆಗುತ್ತವೆ. ಆಗಬಾರದ್ದು ಒಳಗೆ ಹುಳುತಿಂದ ಬೇಲದ ಹಣ್ಣಿನಂತೆ ನಾಶವಾಗಿಬಿಡುತ್ತದೆ. ಇಲ್ಲಿ 'ಗಜ' ಎಂದರೆ ಕ್ರಿಮಿವಿಶೇಷವೆಂದರ್ಥ 'ಆನೆ' ಎಂದಲ್ಲ.

ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕಃ ।
ಗಂಗಾಸೈಕತಲಿಂಗೇನ ಗತಂ ಮೇ ತಾಮ್ರಭಾಜನಮ್ ॥ ೮೧ ॥

ಜನತೆಯಲ್ಲಿ ಅಂಧಾನುಕರಣೆ ಹೆಚ್ಚಾಗಿದೆ. ತತ್ವಾರ್ಥದ ಗೊಡವೆಗೆ ಯಾರೂ ಹೋಗುವುದಿಲ್ಲ. ಯಾವನೋ ಒಬ್ಬ ಯಾತ್ರಿಕನು ಗಂಗಾನದಿಯ ದಡದ ಮರಳಿನಲ್ಲಿ ತನ್ನ ತಾಮ್ರದ ಚೊಂಬನ್ನು ಹೂತಿಟ್ಟು ಗುರುತಿಗಾಗಿ ಒಂದು ಶಿವಲಿಂಗವನ್ನು ಮರಳಿಂದ ನಿರ್ಮಿಸಿ, ಶೌಚಕ್ರಿಯೆಗಾಗಿ ಸ್ವಲ್ಪ ದೂರ ಹೋಗಿ ಬಂದನು. ಆ ವೇಳೆಗೆ ಅಕ್ಕಪಕ್ಕದಲ್ಲಿ ಎಷ್ಟೋ ಲಿಂಗಗಳು

ಸಾಲಾಗಿ ನಿರ್ಮಿಸಲ್ಪಟ್ಟಿದ್ದವು. ಅವನಿಗೆ ತನ್ನ ಲಿಂಗ ಯಾವುದೆಂದು ಪತ್ತೆಯಾಗಲಿಲ್ಲ. ತಾಮ್ರದ ಚೊಂಬನ್ನು ಕಳೆದುಕೊಂಡು ಹೀಗೆ ಹೇಳಿದನು.

ಆಯುಃ ಕರ್ಮ ಚ ವಿತ್ತಂ ಚ ವಿದ್ಯಾ ನಿಧನಮೇವ ಚ ।
ಪಂಚೈತಾನಿ ಹಿ ಸೃಜ್ಯಂತೇ ಗರ್ಭಸ್ಥಸ್ಯೈವ ದೇಹಿನಃ ॥ ೮೨ ॥

ಮಾನವನಿಗೆ ಗರ್ಭದಲ್ಲಿರುವಾಗಲೇ ಆಯುಸ್ಸು ವೃತ್ತಿ ಧನ, ವಿದ್ಯೆ, ಮರಣಗಳ ನಿಶ್ಚಯವಾಗಿಬಿಟ್ಟಿರುತ್ತವೆ.

ಸಂತ ಏವ ಸತಾಂ ನಿತ್ಯಮಾಪದುದ್ಧರಣಕ್ಷಮಾಃ ।
ಗಜಾನಾಂ ಪಂಕಮಗ್ನಾನಾಂ ಗಜಾ ಏವ ಧುರಂಧರಾಃ ॥ ೮೩ ॥

ವಿದ್ಯಾವಂತರೇ ವಿದ್ಯಾವಂತರನ್ನು ಕಷ್ಟದಿಂದ ಉದ್ಧರಿಸಬಲ್ಲರು. ಅಥವಾ ಸಜ್ಜನರೇ ಸಜ್ಜನರನ್ನು . ಕೆಸರಿನಲ್ಲಿ ಸಿಕ್ಕಿ ಬಿದ್ದ ಆನೆಗಳನ್ನು ಆನೆಗಳೇ ಪಾರುಮಾಡಬಲ್ಲವು.

ನ ಗೃಹಂ ಗೃಹಮಿತ್ಯಾಹುರ್ಗೃಹಿಣೀ ಗೃಹಮುಚ್ಯತೇ ।
ಗೃಹಂ ತು ಗೃಹಿಣೀಶೂನ್ಯಂ ಕಾಂತಾರಮಿತಿ ಮನ್ಯತೇ (ಕಥ್ಯತೇ) ॥

ಬರೀ ಮನೆಯನ್ನು ಮನೆಯೆಂದು ಹೇಳುವುದಿಲ್ಲ. ಗೃಹಿಣಿಯನ್ನೇ ಮನೆಯೆಂದು ಹೇಳುತ್ತಾರೆ. ಗೃಹಿಣಿಯಿಲ್ಲದ ಮನೆಯು ಅರಣ್ಯವೆಂದು ಹೇಳಲ್ಪಡುತ್ತದೆ. (ತಿಳಿಯಲ್ಪಡುತ್ತದೆ) ॥ ೮೪ ॥

ಖಾದನ್ನ ಗಚ್ಛಾಮಿ ಹಸನ್ನ ಜಲ್ಪೇ
ಗತಂ ನ ಶೋಚಾಮಿ ಕೃತಂ ನ ಮನ್ಯೇ ।
ದ್ವಾಭ್ಯಾಂ ತೃತೀಯೋ ನ ಭವಾಮಿ ರಾಜನ್
ಕಿಂ ಕಾರಣಂ ಭೋಜ ಭವಾಮಿ ಮೂರ್ಖಃ ॥ ೮೫ ॥

ಇದು ಭೋಜಪ್ರಬಂಧದಲ್ಲಿದೆ. ಭೋಜರಾಜನ ಹೆಂಡತಿಯು ತನ್ನ

ಇಬ್ಬರು ಸಖಿಯರ ಸಂಗಡ ಮಾತಾಡುತ್ತಿದ್ದಾಗ ದಿಢೀರನೆ ಭೋಜನು ಪ್ರವೇಶಿಸಿ ಮಾತಿಗೆ ಮಣೆ ಹಾಕಿಕೊಂಡನು. ಇದನ್ನು ನೋಡಿ ಸೈರಿಸದೆ ರಾಣಿಯು "ಮೂರ್ಖ ದೂರಂ ಗಚ್ಛ" ಎಂದು ಗದರಿಸಿ ಕಳಿಸಿದಳು. ಪೆಚ್ಚಾದ ಭೋಜನು ಆಸ್ಥಾನಕ್ಕೆ ಬಂದು ಎಲ್ಲ ಪಂಡಿತರನ್ನೂ "ಮೂರ್ಖ ದೂರಂ ಗಚ್ಛ" ಎಂದು ಹೇಳತೊಡಗಿದನು. ಎಲ್ಲರೂ ಗಾಬರಿಗೊಂಡು ಪೆಚ್ಚಾದರು. ಕಾಳಿದಾಸನು ಮಾತ್ರ ಕೂಡಲೇ "ಭೋಜನೇ, ಮೂರ್ಖರ ಲಕ್ಷಣಗಳು ಇಷ್ಟು. ಅವುಗಳ ಪೈಕಿ ನನ್ನಲ್ಲಿ ಯಾವುದೂ ಇಲ್ಲ. ಹೇಗೆ ಮೂರ್ಖ ಎಂದು ಹೇಳಿದೆ?" ಎಂದು ತರಾಟೆಗೆ ತೆಗೆದುಕೊಂಡನು. ಭೋಜನಿಗೆ ತನ್ನ ತಪ್ಪು ಗೊತ್ತಾಗಿ ಕಾಳಿದಾಸನನ್ನು ಆನಂದದಿಂದ ಆಲಿಂಗಿಸಿಕೊಂಡನು. ಶ್ಲೋಕಾರ್ಥ— ತಿನ್ನುತ್ತ ನಡೆಯಬಾರದು. ನಗುತ್ತಾ ಮಾತಾಡಬಾರದು. ಗತಿಸಿ ಹೋದುದರ ಬಗ್ಗೆ ಮತ್ತೆ ಚಿಂತಿಸಬಾರದು. ತಾನು ಮಾಡಿದ ಉಪಕಾರ ಮತ್ತು ದಾನವನ್ನು ಹೇಳಿಕೊಳ್ಳಬಾರದು. ಮತ್ತೂ ಅದೇ ದೊಡ್ಡದೆಂದು ತಿಳಿಯಬಾರದು. ಇಬ್ಬರು ಏಕಾಂತದಲ್ಲಿ ಮಾತಾಡುತ್ತಿರುವಾಗ ಮೂರನೆಯವನು ಅನಧಿಕೃತನಾಗಿ ಮೂಗು ತೂರಿಸಬಾರದು. ಈ ಕೊನೆಯದೇ ಭೋಜನು ಮಾಡಿದ ಕೆಲಸ. ಹೆಂಡತಿಯು ಬೈದಿದ್ದು ಸರಿ (ಇದು ಕೇವಲ ಕಲ್ಪಿತ ಕಥೆ. ಕೇಳಲು ಚೆನ್ನಾಗಿರುತ್ತೆ. ಭೋಜನು ಹಾಗೆ ಮಾಡಿಲ್ಲ. ಕಾಳಿದಾಸನು ಭೋಜನ ಕಾಲದಲ್ಲಿ ಇರಲೂ ಇಲ್ಲ).

<u>ಗೃಹಾಸಕ್ತಸ್ಯ</u> ನೋ ವಿದ್ಯಾ ನೋ ದಯಾ ಮಾಂಸಭೋಜಿನಃ ।
ದ್ರವ್ಯಲುಬ್ಧಸ್ಯ ನೋ ಸತ್ಯಂ ಸ್ತ್ರೈಣಸ್ಯ ನ ಪವಿತ್ರತಾ ॥ ೮೬ ॥

ಯಾವಾಗಲೂ ಗೃಹಕಾರ್ಯದಲ್ಲಿ ತೊಡಗಿರುವವನಿಗೆ ಅಥವಾ ಹೆಂಡತಿಯ ವಿಷಯದಲ್ಲಿ ಆಸಕ್ತಿಯಿರುವವನಿಗೆ ವಿದ್ಯೆ ಹತ್ತುವುದಿಲ್ಲ. ಮಾಂಸಾಹಾರಿಗೆ ದಯೆಯಿರುವುದಿಲ್ಲ. ಹಣಕ್ಕೆ ಬಾಯಿಬಿಡುವವನಲ್ಲಿ

ಸತ್ಯವಿರುವುದಿಲ್ಲ. ಸ್ತ್ರೀಯರ ಗುಂಪು ಪವಿತ್ರವಾಗಿರುವುದಿಲ್ಲ; ಯಾರಾದರೂ ರಜಸ್ವಲೆಯರಾಗಿರುವವರು ಇದ್ದೇ ಇರುತ್ತಾರೆ.

ಗುಣಾಸ್ಸರ್ವತ್ರ ಪೂಜ್ಯಂತೇ ಪಿತೃವಂಶೋ ನಿರರ್ಥಕಃ ।
ವಾಸುದೇವಂ ನಮಸ್ಯಂತಿ ವಸುದೇವಂ ನ ಕಶ್ಚನ ॥ ೮೭ ॥

ಪೂಜ್ಯತೆಗೆ ಗುಣವೇ ಮುಖ್ಯ. ತಂದೆಯ ವಂಶವಲ್ಲ. ವಾಸುದೇವನನ್ನು ಅಂದರೆ ವಸುದೇವನ ಮಗನಾದ ಶ್ರೀಕೃಷ್ಣನನ್ನು ವಂದಿಸುತ್ತಾರೆ. ವಸುದೇವನನ್ನು ಯಾರೂ ವಂದಿಸುವುದಿಲ್ಲ.

ಗುರವೋ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ ।
ಗುರವೋ ವಿರಲಾಸ್ಸಂತಿ ಶಿಷ್ಯಚಿತ್ತಾಪಹಾರಕಾಃ ॥ ೮೮ ॥

ಶಿಷ್ಯನ ಧನವನ್ನು ಸೆಳೆಯಬಲ್ಲ ಗುರುಗಳು ಬೇಕಾದಷ್ಟು ಮಂದಿಯಿದ್ದಾರೆ. ಶಿಷ್ಯನ ಹೃದಯವನ್ನು ಸೆಳೆಯಬಲ್ಲ (ಸನ್ಮಾರ್ಗ, ಸದ್ವಿದ್ಯೆಗಳ ಕಡೆಗೆ) ಗುರುಗಳು ವಿರಳವಾಗಿದ್ದಾರೆ.

ಗುಣೈರುತ್ತುಂಗತಾಂ ಯಾತಿ ನೋಚ್ಚೈರಾಸನಸಂಸ್ಥಿತಃ ।
ಪ್ರಾಸಾದಶಿಖರಸ್ಥೋಽಪಿ ಕಾಕಃ ಕಿಂ ಗರುಡಾಯತೇ ॥ ೮೯ ॥

ಮಾನವನು ಗುಣದಿಂದ ಮೇಲಕ್ಕೇರಬೇಕು. ಆಸನದಿಂದಲ್ಲ ಕಾಗೆಯು ಉಪ್ಪರಿಗೆಯ ಮನೆಯ ಮೇಲೆ ಕುಳಿತಿದ್ದರೂ ಅದು ಗರುಡನಾಗುವುದಿಲ್ಲ.

ಗುಣವಾನಪಿ ಚಿರಜೀವೀ ಸಧನೋ ವಿನತಃ ಸತೀ ವಿದಗ್ಧಾ ಸ್ತ್ರೀ ।
ಹರಿಭಕ್ತೋಽಪಿ ಧನಾಢ್ಯಃ ಕ್ಷಮಾತಲೇ ನ ಶ್ರುತಂ ನ ವಾ ದೃಷ್ಟಮ್ ॥

ಗುಣವಂತನಾಗಿದ್ದೂ ದೀರ್ಘಾಯುವಾಗಿರುವವನೂ, ಧನಿಕನಾಗಿದ್ದೂ ವಿನಯವಂತನಾಗಿರುವವನೂ, ಪತಿವ್ರತೆಯಾಗಿದ್ದೂ ರಸಿಕಳೂ

ಅಥವಾ ಚಮತ್ಕಾರವುಳ್ಳವಳೂ ಆಗಿರುವುದು, ಹರಿಭಕ್ತನಾಗಿದ್ದೂ ಧನಾಢ್ಯವಾಗಿರುವುದು, ಭೂಮಂಡಲದಲ್ಲಿ ಕಂಡಿಲ್ಲ, ಕೇಳಿಲ್ಲ. ಇವು ವಿರುದ್ಧ ಗುಣಗಳು ಬೆಳಕು ಕತ್ತಲುಗಳಿದ್ದ ಹಾಗೆ. ಹರಿಯು ಅನುಗ್ರಹ ಮಾಡುವುದಕ್ಕೆ ಮುಂಚೆ ಭಕ್ತನ ಧನವನ್ನು ಸೆಳೆದುಬಿಡುತ್ತಾನೆ. 'ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ' ಎಂಬುದು ಹರಿವಚನ. ॥ ೯೦ ॥

ಗೋತ್ರಸ್ಯತ್ವಪರಿಜ್ಞಾನೇ ಕಾಶ್ಯಪಂ ಗೋತ್ರಮುಚ್ಯತೇ ॥ ೯೦ ॥

ಗೋತ್ರ ಗೊತ್ತಿಲ್ಲದವನಿಗೆ ಕಾಶ್ಯಪಗೋತ್ರವೆಂದು ಹೇಳುತ್ತಾರೆ.

ಘ

ಸಂಚಾರಿಣೀ ಕಾಂಚನವಲ್ಲರೀವ ವಿದ್ಯುಲ್ಲತಾ ವಾ ಪತಿತಾ ನಭಸ್ತಃ ।
ಘೃತಸ್ಯ ಧಾರಾ ಪತಿತಾ ನ ಜಾನೇ ದಿವಂ ಗತಾ ವಾಥ ಭುವಂ
ಗತಾ ವಾ ॥ ೯೧ ॥

ಇದು ಸಾರ್ವಜನಿಕ ಸಮಾರಾಧನೆಯ ಕಾಲದಲ್ಲಿ ತುಪ್ಪ ಬಡಿಸುವ ರೀತಿ. ಅದೂ ಚಮಚದ ಬುಡದಿಂದ ಬಡಿಸುತ್ತಾರೆ. ಆ ನೀರು ತುಪ್ಪವು ಹರಿದಾಡುವ ಚಿನ್ನದ ಬಳ್ಳಿಯೋ, ಆಕಾಶದಿಂದ ಬೀಳುವ ಮಿಂಚಿನ ಬಳ್ಳಿಯೋ ಎಂಬಂತೆ ಭಾಸವಾಗುತ್ತಾ ತುಪ್ಪದ ಧಾರೆಯು ಕಾಣಿಸುವುದೇ ಇಲ್ಲ. ಆಕಾಶಕ್ಕೇ ಹಾರಿತೋ, ಭೂಮಿಗೆ ಇಳಿಯಿತೋ ಕಾಣೆನು ಎಂದು ಒಬ್ಬ ಭೋಜನ ರಸಿಕನು ಅದರಲ್ಲೂ ಘೃತಪ್ರಿಯನು ಹೇಳುತ್ತಾನೆ.

ಘೃತಂ ನ ಶ್ರೂಯತೇ ಕರ್ಣೇ ದಧಿ ಸ್ವಪ್ನೇ ನ ದೃಶ್ಯತೇ ।
ಮುಗ್ಧೇ ದುಗ್ಧಸ್ಯ ಕಾ ವಾರ್ತಾ ತಕ್ರಂ ಶಕ್ರಸ್ಯ ದುರ್ಲಭಮ್॥ ೯೨ ॥

ಒಬ್ಬ ದರಿದ್ರನಾದ ತಂದೆ ಏನೂ ತಿಳಿಯದ ಮಗಳಿಗೆ ಅಥವಾ

ದರಿದ್ರನಾದ ಪತಿಯು ಸುಂದರಿಯಾದ ಪತ್ನಿಗೆ ಹೇಳುವ ಸಂಕಟ ಪೂರ್ಣವಚನ. ಮೂಢಳೇ ಅಥವಾ ಸುಂದರಿಯೇ ! ನೀನು ಕೇಳುತ್ತಿರುವ 'ತುಪ್ಪ'ವೆಂಬ ಶಬ್ದವನ್ನೇ ಕಿವಿಗಳು ಕೇಳಿಲ್ಲ. ಮೊಸರನ್ನು ಕನಸಿನಲ್ಲೂ ಕಂಡಿಲ್ಲ. ಇನ್ನು ಹಾಲಿನ ವಿಷಯವನ್ನೂ ಕೇಳುವ ಹಾಗೆಯೇ ಇಲ್ಲ. ದೇವೇಂದ್ರನಿಗೇ ಮಜ್ಜಿಗೆ ದುರ್ಲಭವಾಗಿರುವಾಗ ಇನ್ನು ನಮಗೆಲ್ಲಿಂದ ಬರಬೇಕು ? ದ್ರೋಣಾಚಾರ್ಯರು ಅಶ್ವತ್ಥಾಮಾಚಾರ್ಯನಿಗೆ ಬಾಲ್ಯದಲ್ಲಿ ಹಾಲುಬೇಕೆಂದು ಹಠಮಾಡಿದಾಗ ಅಕ್ಕಿಯನ್ನು ತೊಳೆದ ಅಂದರೆ ಕಲಗಚ್ಚಿನ ನೀರನ್ನು ಕೊಡುತ್ತಿದ್ದರಂತೆ.

೭೩

ಜಾನಂತಿ ಪಶವೋ ಗಂಧಾತ್ ವೇದಾಜ್ಜಾನಂತಿ ಪಂಡಿತಾಃ ।
ಚಾರಾಜ್ಜಾನಂತಿ ರಾಜಾನಃ ಚಕ್ಷುರ್ಭ್ಯಾಮಿತರೇ ಜನಾಃ ॥ ೯೩ ॥

ಪಶುಗಳು ಅಂದರೆ ಹಸು ನಾಯಿ ಮುಂತಾದ ಪ್ರಾಣಿಗಳು ಗಂಧದಿಂದ ಅಂದರೆ ವಾಸನೆಯಿಂದ ತಮ್ಮ ಹಿತಾಹಿತವನ್ನು ತಿಳಿದುಕೊಳ್ಳುತ್ತವೆ. ವಿದ್ವಾಂಸರು ಜ್ಞಾನದಿಂದ ತಿಳಿದುಕೊಳ್ಳುತ್ತಾರೆ. ರಾಜರು ಗೂಢಚಾರರಿಂದ ತಿಳಿಯುತ್ತಾರೆ. ಉಳಿದವರು ಕಣ್ಣುಗಳಿಂದ ನೋಡಿ ತಿಳಿದುಕೊಳ್ಳುತ್ತಾರೆ.

ಮಾತ್ರಾ ಸಮಂ ನಾಸ್ತಿ ಶರೀರಪೋಷಣಂ
ವಿದ್ಯಾಸಮಂ ನಾಸ್ತಿ ಶರೀರಭೂಷಣಮ್ ।
ಭಾರ್ಯಾಸಮಂ ನಾಸ್ತಿ ಶರೀರತೋಷಣಂ
ಚಿಂತಾಸಮಂ ನಾಸ್ತಿ ಶರೀರಶೋಷಣಮ್ ॥ ೯೪ ॥

ದೇಹ ಪೋಷಣೆಯಲ್ಲಿ ತಾಯಿಗೆ ಸಮನಾರೂ ಇಲ್ಲ. ವಿದ್ಯೆಗೆ ಸಮನಾದ ಭೂಷಣವು ದೇಹಕ್ಕೆ ಬೇರೆ ಇಲ್ಲ. ಶರೀರದ ಬಯಕೆಗಳನ್ನು ತೃಪ್ತಿಪಡಿಸುವುದರಲ್ಲಿ ಪತ್ನಿಗೆ ಸಮನಾರೂ ಇಲ್ಲ. ದೇಹವನ್ನು ಒಣಗಿಸುವ ವಿಷಯದಲ್ಲಿ ಚಿಂತೆಗೆ ಸಮನಾದುದು ಬೇರೊಂದಿಲ್ಲ.

ಅರ್ಥಾತುರಾಣಾಂ ನ ಗುರುರ್ನ ಬಂಧುಃ
ಕಾಮಾತುರಾಣಾಂ ನ ಭಯಂ ನ ಲಜ್ಜಾ ।
ಕ್ಷುಧಾತುರಾಣಾಂ ನ ರುಚಿರ್ನ ಪಕ್ವಂ
ಚಿಂತಾತುರಾಣಾಂ ನ ಸುಖಂ ನ ನಿದ್ರಾ ॥ ೯೫ ॥

ಧನಪಿಶಾಚಗ್ರಸ್ತರಿಗೆ ಗುರುಗಳೂ ಬೇಡ, ಬಂಧುಗಳೂ ಬೇಡ. ಕಾಮಾತುರರಿಗೆ ನಾಚಿಕೆಯೂ ಇಲ್ಲ, ಭಯವೂ ಇರುವುದಿಲ್ಲ. ತುಂಬಾ ಹಸಿದವನಿಗೆ ರುಚಿ ಪಾಕ ಒಂದೂ ಬೇಡ. ಚಿಂತಾಗ್ರಸ್ತರಿಗೆ ಸುಖವೂ ಇಲ್ಲ, ನಿದ್ರೆಯೂ ಬರುವುದಿಲ್ಲ. ವಿದ್ಯಾತುರಾಣಾಂ ಎಂಬ ಪಾಠವೂ ಉಂಟು.

ಚಿಂತನೀಯಾ ಹಿ ವಿಪದಾಂ ಆದಾವೇವ ಪ್ರತಿಕ್ರಿಯಾ ।
ನ ಕೂಪಖನನಂ ಯುಕ್ತಂ ಪ್ರದೀಪ್ತೇ ವಹ್ನಿನಾ ಗೃಹೇ ॥ ೯೬ ॥

ವಿಪತ್ತುಗಳನ್ನು ಎದುರಿಸಲು ಮೊದಲೇ ಯೋಚಿಸಿ ಸಿದ್ಧರಾಗಿರಬೇಕು. ಮನೆಗೆ ಬೆಂಕಿಬಿದ್ದಮೇಲೆ ನೀರಿಗೆ ಬಾವಿ ತೋಡುವ ಪ್ರಯತ್ನವು ಸರಿಯಲ್ಲ.

ಲುಬ್ಧಾನಾಂ ಯಾಚಕಶ್ಶತ್ರು-
ರ್ಮೂರ್ಖಾಣಾಂ ಬೋಧಕಸ್ತಥಾ
ಜಾರಿಣೀನಾಂ ಪತಿಶ್ಶತ್ರುಃ
ಚೋರಾಣಾಂ ಚಂದ್ರಮಾ ರಿಪುಃ ॥ ೯೭ ॥

ಜಿಪುಣರಿಗೆ ಯಾಚಕರು ಶತ್ರುಗಳು. ಮೂರ್ಖರಿಗೆ ಉಪದೇಶ ಮಾಡುವವರು ಶತ್ರುಗಳು. ಜಾರಸ್ತ್ರೀಯರಿಗೆ ಪತಿಯೇ ಶತ್ರುವು. ಕಳ್ಳರಿಗೆ ಚಂದ್ರನು ಶತ್ರುವು.

ಜ

ಪಠತೋ ನಾಸ್ತಿ ಮೂರ್ಖತ್ವಂ <u>ಜಪತೋ</u> ನಾಸ್ತಿ ಪಾತಕಮ್ ।
ಮೌನಿನಃ ಕಲಹೋ ನಾಸ್ತಿ ನ ಭಯಂ ಚಾಸ್ತಿ ಜಾಗ್ರತಃ ॥ ೯೮ ॥

ಓದುವವನಿಗೆ ದಡ್ಡತನವು ಇರುವುದಿಲ್ಲ. ಜಪ ಮಾಡುವವನಿಗೆ ಪಾಪ ಬರುವುದಿಲ್ಲ. ಮೌನವಾಗಿರುವವನಿಗೆ ಜಗಳದ ಭಯವಿರುವುದಿಲ್ಲ. ಎಚ್ಚರದಿಂದಿರುವವನಿಗೆ ಭಯವಿರುವುದಿಲ್ಲ. ಪ್ರತಿವಿಷಯದಲ್ಲೂ ಎಚ್ಚರಿಕೆ ಇರಬೇಕು.

<u>ಜನಾವನಾಯೋದ್ಯಮಿನಂ</u> ಜನಾರ್ದನೋ
ಲಯೇ ಸದೋದ್ಯುಕ್ತತರಂ ಸದಾಶಿವಮ್ ।
ವದಂತಿ ಲೋಕಾಃ ಸ್ವಮನೋನುರಾಗಾ-
ಜ್ಜನಾನನೇ ಕಃ ಕರಮರ್ಪಯಿಷ್ಯತಿ ॥ ೯೯ ॥

ಜನಗಳನ್ನು ರಕ್ಷಿಸುವವನನ್ನು ಜನಾರ್ದನನೆಂದೂ, ಯಾವಾಗಲೂ ನಾಶದಲ್ಲಿ ತೊಡಗಿರುವವನನ್ನು ಸದಾಶಿವನೆಂದೂ ಜನಗಳು ಕರೆಯುತ್ತಾರೆ (ತಮಗೆ ತೋರಿದಂತೆ). ಜನಗಳ ಬಾಯಿಗೆ ಬೀಗ ಹಾಕುವವರಾರು? ಇಲ್ಲಿ ಜನಾರ್ದನ ಎಂಬಲ್ಲಿ ಎರಡರ್ಥವಿದೆ. ಜನಗಳನ್ನು ಪೀಡಿಸುವವನು ಮತ್ತು ಪಾಲಿಸುವವನು. ಯಾವಾಗಲೂ ಶಿವ ಮಂಗಳವನ್ನುಂಟು ಮಾಡುವವನು. ಆದರೆ ಮಹಾಪ್ರಳಯ ಕಾಲದಲ್ಲಿ ಸರ್ವನಾಶ ಮಾಡುವವನು. ಈಗ ಭಕ್ತರನ್ನೇನೂ ನಾಶಮಾಡುವುದಿಲ್ಲ.

ಸದಾ ವಕ್ರಸ್ಸದಾ ರುಷ್ಟಃ ಸದಾ ಪೂಜಾಮಪೇಕ್ಷತೇ ।
ಕನ್ಯಾರಾಶಿಸ್ಥಿತೋ ನಿತ್ಯಂ <u>ಜಾಮಾತಾ</u> ದಶಮೋ ಗ್ರಹಃ ॥ ೧೦೦ ॥

ಗುರು ಶನಿ ಮುಂತಾದ ಗ್ರಹಗಳು ಒಮ್ಮೊಮ್ಮೆ ವಕ್ರಗಮನವುಳ್ಳವರೂ

ಆಗಾಗ್ಗೆ ರೋಷವುಳ್ಳವರೂ ಒಮ್ಮೊಮ್ಮೆ ಪೂಜೆ ಮಾಡಿಸಿಕೊಳ್ಳುವವರೂ ಮತ್ತು ಮೇಷಾದಿ ದ್ವಾದಶ ರಾಶಿಗಳಲ್ಲಿ ಇರುವವರೂ ಆಗಿರುತ್ತಾರೆ. ಇವರು ನವಗ್ರಹಗಳು. ಈ ಅಳಿಯನು ಹತ್ತನೆಯ ಗ್ರಹ. ಇವನಿಗೆ ಋಜುಗಮನ ವಿಲ್ಲ. ಸಂತೋಷವಿಲ್ಲ. ಯಾವಾಗಲೂ ಪೂಜೆಯಾಗುತ್ತಿರಲೇಬೇಕು. ಏನನ್ನಾದರೂ ಕೊಡುತ್ತಿರಲೇಬೇಕು. ಕನ್ಯಾರಾಶಿಯನ್ನು ಬಿಟ್ಟು ತೊಲಗು ವುದೇ ಇಲ್ಲ. ಕನ್ಯಾ ಎಂದರೆ ಹೆಂಡತಿ. ಅವಳ ಜೊತೆಯಲ್ಲೇ ಬಿದ್ದಿರುತ್ತಾನೆ. ಆದುದರಿಂದ ಅಳಿಯನು ಹತ್ತನೆಯ ಗ್ರಹವೆಂದು ಒಬ್ಬ ಕವಿಯು ವಿನೋದಕ್ಕಾಗಿ ಹೀಗೆ ಮೂರು ರೀತಿಯಿಂದ ವರ್ಣಿಸಿದ್ದಾನೆ. ಇದು ಒಂದನೆಯದು.

ಆದಿತ್ಯಾದ್ಯಾ ಗ್ರಹಾಸ್ಸರ್ವೇ ಯಥಾ ತುಷ್ಯಂತಿ ದಾನತಃ ।
ಸರ್ವಸ್ವೇಽಪಿ ನ ತುಷ್ಯೇತ <u>ಜಾಮಾತಾ</u> ದಶಮೋ ಗ್ರಹಃ ॥ ೧೦೧

ಆದಿತ್ಯಾದಿ ಗ್ರಹಗಳಿಗೆ ಗೋಧಿ, ಅಕ್ಕಿ ಮುಂತಾದ ಒಂದು ಧಾನ್ಯದ ದಾನ ಮಾಡಿದರೂ ಪ್ರಸನ್ನರಾಗುತ್ತಾರೆ. ಈ ಅಳಿಯನೆಂಬ ದಶಮಗ್ರಹಕ್ಕೆ ಸರ್ವಸ್ವವನ್ನು (ಮನೆ, ಭೂಮಿ, ಧನ, ಆಭರಣ, ಸೈಟು) ದಾನಕೊಟ್ಟರೂ ಪ್ರಸನ್ನನಾಗುವುದಿಲ್ಲ.

ಭಾರತಂ ಪಂಚಮೋ ವೇದಃ ಸುಪುತ್ರಃ ಸಪ್ತಮೋ ರಸಃ ।
ದಾತಾ ಚ ದಶಮಂ ರತ್ನಂ <u>ಜಾಮಾತಾ</u> ದಶಮೋ ಗ್ರಹಃ ॥೧೦೨॥

ಮಹಾಭಾರತವು ಐದನೆಯ ವೇದ, ಸುಪುತ್ರನು ಏಳನೆಯ ರಸ (ಇರುವುದು ಆರೇ ರಸ. ಷಡ್ರಸ) ದಾನ ಮಾಡುವವನು ಹತ್ತನೆಯ ರತ್ನ. ಅಳಿಯನು ಹತ್ತನೆಯ ಗ್ರಹ.

<u>ಜಿಹ್ವೇ ಪ್ರಮಾಣಂ</u> ಜಾನೀಹಿ ಭೋಜನೇ ಭಾಷಣೇಽಪಿ ಚ ।
ಅತಿಭುಕ್ತಿರತೀವೋಕ್ತಿಃ ಸದ್ಯಃ ಪ್ರಾಣಾಪಹಾರಿಣೀ ॥ ೧೦೩ ॥

ಎಲ್ಲೆ ನಾಲಿಗೆಯೇ, ಭೋಜನ ಮತ್ತು ಮಾತಿನಲ್ಲಿ ಮಿತಿಯಿರಲಿ. ಅತಿ ಭೋಜನ ಮತ್ತು ಅತಿ ಮಾತು ಪ್ರಾಣಕ್ಕೇ ಸಂಚಕಾರ ತರುತ್ತದೆ. ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ.

ಜಿತಾ ಧನವತಾ ದಾರಾ ಜಿತಾ ವಸ್ತ್ರವತಾ ಸಭಾ ।
ಜಿತೋ ಹ್ಯಭ್ಯಾಗತೋ ಗೋಭಿರ್ದಾರಿದ್ರ್ಯಂ ಕೃಷಿಭಿರ್ಜಿತಮ್ ॥

ಧನವುಳ್ಳವನು ಹೆಂಡತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲ. ಅಥವಾ ವಶಮಾಡಿಕೊಳ್ಳಬಲ್ಲ. ಒಳ್ಳೆಯ ಬೆಲೆಬಾಳುವ ವಸ್ತ್ರಧರಿಸಿದವನು ಸಭೆಯನ್ನೇ ಬೆರಗುಗೊಳಿಸಿ ಗೆಲ್ಲಬಲ್ಲ. ಅಭ್ಯಾಗತನನ್ನು ಒಳ್ಳೆಯ ಮಾತುಗಳಿಂದ ವಶಮಾಡಿಕೊಳ್ಳಬಹುದು. (ಇಲ್ಲಿ ಗೋಭಿಃ ಎಂದರೆ ಮಾತುಗಳಿಂದ ಎಂದರ್ಥ.) ಕೃಷಿಕಾರ್ಯ ಮಾಡುವವನು ದಾರಿದ್ರ್ಯವನ್ನು ಗೆದ್ದಂತೆಯೇ. ಸಮೃದ್ಧಿಯಾದ ಧಾನ್ಯವನ್ನು ಬೆಳೆಯುವುದರಿಂದ ದಾರಿದ್ರ್ಯ ವಿರುವುದಿಲ್ಲ. ಧಾನ್ಯಲಕ್ಷ್ಮಿಯ ಅನುಗ್ರಹ ಕಾರಣ. ॥ ೧೦೪ ॥

ಜೀರ್ಣಮನ್ನಂ ಪ್ರಶಂಸಂತಿ ಭಾರ್ಯಾಂ ಚ ಗತಯೌವನಾಮ್ ।
ಶೂರಂ ವಿಜಿತಸಂಗ್ರಾಮಂ ಪಾರಂಗತತಪಸ್ವಿನಮ್ ॥ ೧೦೫ ॥

ಊಟ ಮಾಡಿ ಅರಗಿಹೋದುದನ್ನು, ಯೌವನವನ್ನು ಕಳೆದುಕೊಂಡ ಹೆಂಡತಿಯನ್ನು, ಹಿಂದೆ ಯುದ್ಧದಲ್ಲಿ ಗೆದ್ದ ವೀರನನ್ನು, ಸಿದ್ಧಿಯನ್ನು ಪಡೆದ ತಪಸ್ವಿಯನ್ನು ಪ್ರಶಂಸಿಸುತ್ತಾರೆ. ಈಗಿರುವುದಕ್ಕಿಂತ ಕಳೆದುಹೋದದ್ದೇ ಇವರ ಪಾಲಿಗೆ ಚೆನ್ನ ಎಂದು ಕೆಲವರು ಹೇಳುತ್ತಾರೆ. ಹಿಂದಿನಕಾಲ ಚೆನ್ನಾಗಿತ್ತು, ನಮ್ಮ ಬಾಲ್ಯ ಚೆನ್ನಾಗಿತ್ತು ಮುಂತಾದ ಹಳೆಯ ಕತೆಯೇ ಇವರಿಗೆ ಇಷ್ಟ ಎಂದು ತಾತ್ಪರ್ಯ.

ಸದ್ಯಃ ಫಲತಿ ಗಾಂಧರ್ವೀ ಪುರಾಣಂ ತ್ವೇಕಮಾಸಕೇ ।
ಕಾಲೇ ಫಲಂತಿ ವೇದಾಸ್ತು ಜ್ಯೋತಿರ್ವೈದ್ಯಂ ನಿರಂತರಂ ॥ ೧೦೬ ॥

ಸಂಗೀತಕ್ಕೆ ಫಲ ಕೂಡಲೇ ಸಿಗುತ್ತದೆ. ಅಂದರೆ ಕೇಳಿದ ಕೂಡಲೇ ಆನಂದದಿಂದ ತಾಳತಟ್ಟಿಕೊಂಡು ತಲೆದೂಗುತ್ತಾರೆ. ಹಾಗೆಯೇ ಹಾಡುವವರಿಗೂ ಮೊದಲು ಮುಂಗಡ ಹಣ ದೊರಕಿ ಕಛೇರಿ ಮುಗಿದ ಕೂಡಲೇ ಉಳಿದ ಧನರೂಪದ ಫಲ ದೊರಕುತ್ತದೆ. ಪುರಾಣದ ಫಲ ಶ್ರೋತೃವಿನ ಮೇಲಾಗಬೇಕಾದರೆ ಒಂದು ತಿಂಗಳಾದರೂ ಬೇಕು. ಹಾಗೆಯೇ ಪುರಾಣ ವಾಚಕರಿಗೆ ಧನ ದೊರಕಬೇಕಾದರೆ ಒಂದು ತಿಂಗಳಾದರೂ ಬೇಕು. ಮಧ್ಯೆ ಯಾವುದಾದರೂ ಮಂಗಳದಘಟ್ಟ ಬರಬೇಕು. ಹಾಗೆಯೇ ವೇದ ಓದಿದವನಿಗೆ ಫಲ ಎಂದೋ ದೊರಕುವುದು. ಮುಂದಿನ ಜನ್ಮದಲ್ಲಾದರೂ ಸರಿ. ಕೇಳಿದವನಿಗೂ ಅಷ್ಟೆ. ಜ್ಯೋತಿಷ ಹೇಳುವವರಿಗೆ ಮತ್ತು ವೈದ್ಯರಿಗೆ (ಡಾಕ್ಟರಿಗೆ) ಯಾವಾಗಲೂ ಫಲ ಅಂದರೆ ಹಣದ ಹೊಳೆಯೇ ಹರಿಯುತ್ತಿರುತ್ತದೆ.

ಜ್ಯೋತಿಷಂ ಜಲದೇ ಮಿಥ್ಯಾ ಮಿಥ್ಯಾ ಶ್ವಾಸಿನಿ ವೈದ್ಯಕಮ್ ।
ಯೋಗೋ ಬಹ್ವಶನೇ ಮಿಥ್ಯಾ ಮಿಥ್ಯಾ ಜ್ಞಾನಂ ಚ ಮದ್ಯಪೇ ॥

ಮಳೆಯ ವಿಷಯದಲ್ಲಿ ಜ್ಯೋತಿಷವು ಸುಳ್ಳಾಗುತ್ತದೆ. ಪಂಚಾಂಗದಲ್ಲಿ ಬರೆದಂತೆ ಆಗುವುದಿಲ್ಲ. ಹಾಗೆಯೇ ವೈದ್ಯಶಾಸ್ತ್ರವು ಉಬ್ಬಸ ಅಥವಾ ಗೂರಲು (ಆಸ್ಥಮಾ) ರೋಗದ ಬಗ್ಗೆ ಅಂದರೆ ಗುಣಪಡಿಸುವ ವಿಷಯದಲ್ಲಿ ವ್ಯರ್ಥವಾಗುತ್ತದೆ. ಉಬ್ಬಸಕ್ಕೆ ಔಷಧಿಯಿಲ್ಲವೆಂದು ಹೇಳುತ್ತಾರೆ. ಆಹಾರನಿಯಮವಿಲ್ಲದ ಹೊಟ್ಟೆಬಾಕನಿಗೆ ಯೋಗವಿದ್ಯೆಯು ವ್ಯರ್ಥ ಮದ್ಯಪಾನಾಸಕ್ತನಿಗೆ ಜ್ಞಾನೋಪದೇಶವು ವ್ಯರ್ಥ. ಕುಡಿದ ಅಮಲಿನಲ್ಲಿ ಅವನ ಜ್ಞಾನವೇ ಅವನ ಹತೋಟಿಯಲ್ಲಿರುವುದಿಲ್ಲ. ॥ ೧೦೭ ॥

ತ

ಭೋಜನಾಂತೇ ಚ ಕಿಂ ಪೇಯಂ
ಜಯಂತಃ ಕಸ್ಯ ವೈ ಸುತಃ ।
ಕಥಂ ವಿಷ್ಣುಪದಂ ಪ್ರೋಕ್ತಂ
ತಕ್ರಂ ಶಕ್ರಸ್ಯ ದುರ್ಲಭಮ್ ॥ ೧೦೮ ॥

ಇಲ್ಲಿ ಕೇಳಲ್ಪಟ್ಟಿರುವ ಪ್ರಶ್ನೆಗಳಿಗೆ ಉತ್ತರವು ಯಥಾಕ್ರಮದಲ್ಲಿದೆ. ಊಟವಾದ ಮೇಲೆ ಏನನ್ನು ಕುಡಿಯಬೇಕು? ತಕ್ರಂ=ಮಜ್ಜಿಗೆಯನ್ನು. ಜಯಂತನು ಯಾರ ಮಗ? ಶಕ್ರಸ್ಯ=ಇಂದ್ರನ ಮಗ. ವಿಷ್ಣುಪದಂ=ಆಕಾಶ ಅಥವಾ ವೈಕುಂಠವು ಹೇಗೆ ಪ್ರಾಪ್ತವಾಗುತ್ತದೆ ? ದುರ್ಲಭಂ=ಕಷ್ಟದಿಂದ ಪಡೆಯಲು ಸಾಧ್ಯವಾದುದು. ಎಲ್ಲರಿಗೂ ಸುಲಭ ಸಾಧ್ಯವಲ್ಲ.

ಲಾಲನಾದ್ಬಹವೋ ದೋಷಾಸ್ತಾಡನಾದ್ಬಹವೋ ಗುಣಾಃ ।
ತಸ್ಮಾತ್ಪುತ್ರಂ ಚ ಶಿಷ್ಯಂ ಚ ತಾಡಯೇನ್ನ ತು ಲಾಲಯೇತ್ ॥೧೦೯॥

ಪುತ್ರನನ್ನೂ ಶಿಷ್ಯನನ್ನೂ ಮುದ್ದಿಸುವುದರಿಂದ ಅವರು ವಿದ್ಯೆಯನ್ನು ಕಲಿಯದೇ ಕೆಟ್ಟುಹೋಗುತ್ತಾರೆ. ಸಮಯವನ್ನು ನೋಡಿ ಸ್ವಲ್ಪ ಚುರುಕು ಮುಟ್ಟಿಸುತ್ತಿದ್ದರೆ ಎಷ್ಟೋ ಮೇಲೆ ಬರುತ್ತಾರೆ. ಆದುದರಿಂದ ಲಾಲನೆಗಿಂತ ತಾಡನವೇ ಗುಣಕಾರಿ.

ಲಾಲಯೇತ್ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ।
ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್ ॥

ಮಗನನ್ನು ಐದು ವರ್ಷಗಳ ಕಾಲ ಮುದ್ದಿಸಬೇಕು. ಆಮೇಲೆ ಹತ್ತು ವರ್ಷಗಳ ಕಾಲ ಏಟುಗಳನ್ನು ಕೊಡುತ್ತಾ ಭಯದಿಂದ ಇಟ್ಟಿರಬೇಕು. ಹದಿನಾರು ವರ್ಷಕ್ಕೆ ಬಂದ ಮೇಲೆ ಪುತ್ರನನ್ನು ಹೊಡೆಯಬಾರದು. ಮಿತ್ರನಂತೆ ಭಾವಿಸಬೇಕು. ॥ ೧೧೦ ॥

ಮೂರ್ಖೋಽಪಿ ಶೋಭತೇ ತಾವತ್ಸಭಾಯಾಂ ವಸ್ತ್ರವೇಷ್ಟಿತಃ ।
ತಾವಚ್ಚ ಶೋಭತೇ ಮೂರ್ಖೋ ಯಾವತ್ಕಿಂಚಿನ್ನ ಭಾಷತೇ ॥

ದಡ್ಡನೂ ಕೂಡ ಉತ್ತಮ ವಸ್ತ್ರಗಳನ್ನು ಧರಿಸಿಕೊಂಡು ಸಭೆಯಲ್ಲಿ ಮಾತಾಡಲು ಬಾಯಿ ತೆರೆಯುವತನಕ ದೊಡ್ಡ ಪಂಡಿತನಂತೆ ಶೋಭಿಸುತ್ತಿರುತ್ತಾನೆ. ''ಬಾಯಿಬಿಟ್ಟರೆ ಬಣ್ಣಗೇಡು'' ಎಂಬಂತೆ ಮಾತಾಡಲು ಹೊರಟಾಗ ಇದ್ದ ಮರ್ಯಾದೆಯೂ ಹೊರಟುಹೋಗುತ್ತದೆ.॥ ೧೧೧ ॥

ತಾವನ್ಮಹತಾಂ ಮಹತೀ ಯಾವತ್ಕಿಮಪಿ ಹಿ ನ ಯಾಚತೇ ಲೋಕಮ್।
ಬಲಿಮನುಯಾಚನಸಮಯೇ ಶ್ರೀಪತಿರಪಿ ವಾಮನೋ ಜಾತಃ ॥ ೧೧೨

ಮನುಷ್ಯನು ಬೇಡಲು ಹೊರಟರೆ ಅವನ ಘನತೆಗೆ, ವ್ಯಕ್ತಿತ್ವಕ್ಕೆ ಕುಂದಾಗುತ್ತದೆ. ಆಳುದ್ದ ದೇಹವು ಗೇಣುದ್ದವಾಗಿಬಿಡುತ್ತದೆ. ಜಗದೀಶ್ವರನಾದ ವಿಷ್ಣುವೂ ಕೂಡ ಬಲಿಚಕ್ರವರ್ತಿಯ ಮುಂದೆ ಭೂಮಿಯನ್ನು ಬೇಡಲು ಹೋದಾಗ ವಾಮನನಾಗಿ ಅಂದರೆ ಕುಳ್ಳನಾಗಿಹೋದನು.

ಮುಖಂ ಪದ್ಮದಲಾಕಾರಂ ವಾಣೀ ಚಂದನಶೀತಲಾ ।
ಹೃದಯಂ ಕರ್ತರೀತುಲ್ಯಂ ತ್ರಿವಿಧಂ ಧೂರ್ತಲಕ್ಷಣಮ್ ॥ ೧೧೩ ॥

ವಂಚಕರ ಮುಖವು ತಾವರೆದಳದಂತೆ ಅಂದವಾಗಿರುತ್ತದೆ. ಮಾತು ಚಂದನದಂತೆ ತಂಪಾಗಿರುತ್ತದೆ. ಹೃದಯವು ಮಾತ್ರ ಕತ್ತರಿಯಂತಿರುತ್ತದೆ. ಅಂದರೆ ಕರುಳಲ್ಲಿ ಕತ್ತರಿ, ಬಾಯಲ್ಲಿ ಬೆಲ್ಲ, ಮೇಲೆ ಬ್ರಹ್ಮಜ್ಞಾನ ಒಳಗೆ ಗುಮ್ಮುವ ಜ್ಞಾನ, ಬಾಯಲ್ಲಿ ರಾಮನಾಮ, ಬಗಲಿನಲ್ಲಿ ಚೂರಿ— ಇದೇ ಧೂರ್ತರ ಲಕ್ಷಣ.

ಮನಸೈವ ಕೃತಂ ಪಾಪಂ ನ ಶರೀರಕೃತಂ ಕೃತಮ್ ।
ಯೇನೈವಾಲಿಂಗಿತಾ ಕಾಂತಾ ತೇನೈವಾಲಿಂಗಿತಾ ಸುತಾ ॥ ೧೧೪ ॥

ಮನಃಪೂರ್ವಕವಾಗಿ ಮಾಡಿದ ಪಾಪವೇ ಪಾಪ. ಕೇವಲ ದೇಹದಿಂದ ಮಾಡಿದ್ದು ಪಾಪವಾಗುವುದಿಲ್ಲ. ತಂದೆಯು ಹೆಂಡತಿಯನ್ನು ಆಲಿಂಗಿಸಿಕೊಳ್ಳುತ್ತಾನೆ. ಮಗಳನ್ನೂ ಆಲಿಂಗಿಸಿಕೊಳ್ಳುತ್ತಾನೆ. ಆಲಿಂಗನ ಕ್ರಿಯೆ ಒಂದೇ ಆದರೂ ಭಾವನೆ ಮಾತ್ರ ಬೇರೆ ಇರುತ್ತದೆ.

ತೇಜೀಯಸಾಂ ನ ದೋಷಾಯ ಅಗ್ನೇಃ ಸರ್ವಭುಜೋ ಯಥಾ ।
ಈಶ್ವರಾಣಾಂ ವಚಸ್ಸತ್ಯಂ ತಥೈವಾಚರಿತಂ ಕ್ವಚಿತ್ ॥ ೧೧೫ ॥

ತೇಜಶ್ಶಾಲಿಗಳು ಒಂದೊಂದು ಸಲ ವಿಧಿಯಲ್ಲದೆ ಅಕಾರ್ಯ ಮಾಡಿದರೂ ದೋಷವಾಗುವುದಿಲ್ಲ. ಅಗ್ನಿಯು ಶುಚಿ ಮತ್ತು ಅಶುಚಿಯಾದ ವಸ್ತುವನ್ನೂ ತಿಂದು ಸರ್ವಭಕ್ಷಕ ಎನ್ನಿಸಿಕೊಂಡರೂ ಗೌರವಕ್ಕೇನೂ ಚ್ಯುತಿ ಬಂದಿಲ್ಲ. ವಿಶ್ವಾಮಿತ್ರರು ನಾಯಿ ಮಾಂಸವನ್ನೇ ತಿಂದು ಜಯಿಸಿಕೊಂಡರು. ದೇವಮೂಲ ಋಷಿಮೂಲವನ್ನು ಶೋಧಿಸುತ್ತಾ ಹೋದರೆ ಏನಾದರೂ ಇದ್ದೇ ಇರುತ್ತದೆ. ಅವರು ಮಾಡಿದಂತೆ ಸಾಮಾನ್ಯರಾದ ನಾವು ಮಾಡಬಾರದು.

ಯಸ್ತು ಸಂಚರತೇ ದೇಶಾನ್ ಯಸ್ತು ಸೇವೇತ ಪಂಡಿತಾನ್ ।
ತಸ್ಯ ವಿಸ್ತಾರಿತಾ ಬುದ್ಧಿಸ್ತೈಲಬಿಂದುರಿವಾಂಭಸಿ ॥ ೧೧೬ ॥

ದೇಶಸಂಚಾರ ಮಾಡದವನ ಮತ್ತು ಪಂಡಿತರನ್ನು ಸೇವಿಸದವನ ಬುದ್ಧಿಯು ನೀರಿನ ಮೇಲೆ ಬಿದ್ದ ತುಪ್ಪದ ಬಿಂದುವಿನಂತೆ ಹೆಪ್ಪುಗಟ್ಟುತ್ತದೆ. ಸಂಕುಚಿತ ಬುದ್ಧಿಯುಳ್ಳವನಾಗುತ್ತಾನೆ. ವಿಶಾಲ ಭಾವನೆ ಬರುವುದಿಲ್ಲ.

ದ

ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ ।
ಭುಂಕ್ತೇ ಭೋಜಯತೇ ಚೈವ ಷಡ್ವಿಧಂ ಪ್ರೀತಿಲಕ್ಷಣಮ್ ॥ ೧೧೭ ॥

ಪ್ರೀತಿಯ ಲಕ್ಷಣ ಆರು ಎಂದು ಹೇಳುತ್ತಾರೆ. ಸಮಯಬಂದಾಗ ಕೊಡಬೇಕು (ಧನ ಮುಂತಾದವುಗಳನ್ನೂ) ಹಾಗೆಯೇ ತೆಗೆದುಕೊಳ್ಳ ಬೇಕು. ರಹಸ್ಯ ವಿಷಯಗಳನ್ನೂ ಹೇಳಬೇಕು ಮತ್ತು ಕೇಳಿ ತಿಳಿದುಕೊಳ್ಳ ಬೇಕು. ತಾನೂ ಊಟಮಾಡಬೇಕು ಮತ್ತು ಮಾಡಿಸಲೂ ಬೇಕು. (ಇದನ್ನೇ ಮಿತ್ರಲಕ್ಷಣವೆಂದು ಕೆಲವರು ಹೇಳುತ್ತಾರೆ)

ದುರ್ಜನದೂಷಿತಮನಸಾಂ ಪುಂಸಾಂ ಸುಜನೇಪ್ಯವಿಶ್ವಾಸಃ ।
ಪಾಯಸದಗ್ಧೋ ಬಾಲೋ ದಧ್ಯಪಿ ಫೂತ್ಕೃತ್ಯ ಭಕ್ಷಯತಿ ॥ ೧೧೮

ದುರ್ಜನರಿಂದ ವಂಚಿತನಾದ ಮನುಷ್ಯನು, ಸುಜನರ ವಿಷಯ ದಲ್ಲೂ ಅಪನಂಬಿಕೆಯುಳ್ಳವನಾಗುತ್ತಾನೆ. ಬಿಸಿ ಪಾಯಸದಿಂದ ನಾಲಿಗೆ ಯನ್ನು ಸುಟ್ಟುಕೊಂಡ ಬಾಲಕನು ತಣ್ಣಗಿರುವ ಗಟ್ಟಿ ಮೊಸರನ್ನೂ ಕೂಡ 'ಉಫ್' ಎಂದು ಆರಿಸಿಕೊಳ್ಳುತ್ತಾ ಕುಡಿಯುತ್ತಾನೆ. ಈ ಕಾಲದಲ್ಲಿ ಮನೆಗೆ ಬರುವವರನ್ನು ಪರಿಚಯವಿಲ್ಲದೆ ಒಳಕ್ಕೆ ಬಿಟ್ಟುಕೊಳ್ಳಬಾರದು. ವಿಶ್ವಾಸಘಾತುಕರು ಎಲ್ಲೆಲ್ಲೂ ತುಂಬಿಹೋಗಿದ್ದಾರೆ.

ಮಾತಾ ನಿಂದತಿ ನಾಭಿನಂದತಿ ಪಿತಾ ಭ್ರಾತಾ ನ ಸಂಭಾಷತೇ
ಭೃತ್ಯಃ ಕುಪ್ಯತಿ ನಾನುಗಚ್ಛತಿ ಸುತಃ ಕಾಂತಾ ಚ ನಾಲಿಂಗತೇ ।
ಅರ್ಥಪ್ರಾರ್ಥನಶಂಕಯಾ ನ ಕುರುತೇಪ್ಯಾಲಾಪಮಾತ್ರಂ ಸುಹೃತ್
ತಸ್ಮಾದ್ದ್ರವ್ಯಮುಪಾರ್ಜಯಾಶು ಸುಮತೇ ದ್ರವ್ಯೇಣ
ಸರ್ವೇ ವಶಾಃ ॥ ೧೧೯ ॥

ಇದು ಧನಹೀನನ ಸ್ಥಿತಿ. ಧನವಿಲ್ಲದವನನ್ನು ತಾಯಿಯೇ ನಿಂದಿಸು ತ್ತಾಳೆ. ತಂದೆಯು ಅಭಿನಂದಿಸುವುದಿಲ್ಲ. ಸಹೋದರರು ಮಾತೇ ಆಡುವು ದಿಲ್ಲ. ಸೇವಕನಿಗೆ ಏನಾದರೂ ಹೇಳಿದರೆ ಕೋಪ ಮಾಡಿಕೊಳ್ಳುತ್ತಾನೆ. ಮಗನೂ ಅನುಸರಿಸುವುದಿಲ್ಲ. ಹೆಂಡತಿಯೂ ಪ್ರೀತಿಯಿಂದ ಆಲಿಂಗಿಸುವು

ದಿಲ್ಲ. ದಾರಿಯಲ್ಲಿ ಸ್ನೇಹಿತನು ಕಾಣಿಸಿದರೂ, ಅವನೂ ಕೂಡ ನನ್ನನ್ನು ಇನ್ನೆಲ್ಲಿ ಹಣವನ್ನು ಕೇಳುವನೋ ಎಂಬ ಭಯದಿಂದ ಮಾತಾಡಿಸದೆ ಕಂಡರೂ ಕಾಣದವನಂತೆ ಅದೃಶ್ಯನಾಗಿಬಿಡುತ್ತಾನೆ. ಇದೆಲ್ಲಾ ನೆಟ್ಟಗಾಗ ಬೇಕಾದರೆ, ಎಲೈ ಮಿತ್ರನೇ ಆದಷ್ಟು ಬೇಗ ಧನಿಕನಾಗು. ಧನವೊಂದಿದ್ದರೆ ಎಲ್ಲರೂ ಹೇಳಿದಂತೆ ಕೇಳುತ್ತಾರೆ (ದೀಪಾವಳಿಯ ವಿಶೇಷ ಲಾಟರಿಯಲ್ಲಿ ಹತ್ತು ಲಕ್ಷ ಬಂದರೆ ಸಾಕು, ಆಗ ಎಲ್ಲಿಲ್ಲದ ಮಿತ್ರರೂ, ಬಂಧುಗಳೂ ಹುಟ್ಟಿಕೊಳ್ಳುತ್ತಾರೆ)

ಅಧೀತ್ಯ ಚತುರೋ ವೇದಾನ್ ಧರ್ಮಶಾಸ್ತ್ರಾಣ್ಯಶೇಷತಃ ।
ಪರಂ ತತ್ತ್ವಂ ನ ಜಾನಾತಿ ದರ್ವೀ ಪಾಕರಸಾನಿವ ॥ ೧೨೦ ॥

ಕೆಲವರು ನಾಲ್ಕು ವೇದಗಳನ್ನೂ ಓದಿ ಧರ್ಮಶಾಸ್ತ್ರವನ್ನೂ ಅನೇಕಸಲ ಓದಿರುತ್ತಾರೆ. ಆದರೂ ಪರತತ್ತ್ವದ ಅಂದರೆ ಪರಬ್ರಹ್ಮನ ವಿಷಯವನ್ನು ತಿಳಿದುಕೊಂಡಿರುವುದಿಲ್ಲ. ಅವರ ಜೀವನ ಪಾಯಸದ ಪಾತ್ರೆಯಲ್ಲೇ ಮುಳುಗಿರುವ ಸೌಟಿನಂತಿರುತ್ತದೆ. ಅಥವಾ ಪಾಕರಸವನ್ನರಿಯದ ಸೌಟಿನಂತೆ. ಅದರಿಂದಲೇ ಬಡಿಸುವುದು.

ದಾನಂ ಪ್ರಿಯವಾಕ್ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮ್ ।
ವಿತ್ತಂ ತ್ಯಾಗಸಮೇತಂ ದುರ್ಲಭಮೇತಚ್ಚತುರ್ವಿಧಂ ಭದ್ರಮ್ ॥ ೧೨೧

ಪ್ರಿಯ ವಾಕ್ಯದಿಂದ ಕೂಡಿದ ದಾನ, ಗರ್ವರಹಿತವಾದ ಜ್ಞಾನ, ಕ್ಷಮೆಯಿಂದ ಕೂಡಿದ ಶೌರ್ಯ, ತ್ಯಾಗಕ್ಕಾಗಿ ಮೀಸಲಿಟ್ಟ ಧನ, ಈ ವಿಧವಾದ ಕಲ್ಯಾಣಕಾರಿಗಳಾದ ನಾಲ್ಕು ಗುಣಗಳನ್ನು ಪಡೆದಿರುವ ಪುಣ್ಯಾತ್ಮರು ತುಂಬಾ ವಿರಳ

ಶಕ್ತಿಂ ಕರೋತಿ ಸಂಚಾರೇ ಶೀತೋಷ್ಣೇ ಮರ್ಷಯತ್ಯಪಿ ।
ದೀಪಯತ್ಯುದರೇ ವಹ್ನಿಂ ದಾರಿದ್ರ್ಯಂ ಪರಮೌಷಧಮ್ ॥ ೧೨೨ ॥

ಬಡತನವೆಂಬುದು ಅನೇಕ ರೋಗಗಳಿಗೆ ಸಿದ್ಧೌಷಧ. ವಿಧಿಯಿಲ್ಲದೆ ನಡೆಯುತ್ತಾರೆ. ಇದರಿಂದ ಅಂಗಾಂಗಗಳಲ್ಲಿ ಶಕ್ತಿ ಹೆಚ್ಚುತ್ತದೆ. ಶೀತೋಷ್ಣಗಳನ್ನು ಸಹಿಸಿಕೊಳ್ಳಬಲ್ಲರು. ದೇಹವನ್ನು ದಂಡಿಸಿ ಕೆಲಸವನ್ನೂ ಮಾಡುವುದರಿಂದ ಜಠರಾಗ್ನಿಯು ಪ್ರಜ್ವಲಿಸುತ್ತದೆ. ಅಜೀರ್ಣವೆಂಬ ರೋಗದ ಹೆಸರೇ ಅಡಗಿಹೋಗುತ್ತದೆ. ಈ ರೋಗಗಳೆಲ್ಲಾ ಬರುವುದು ಧನಿಕರಿಗೆ ಮತ್ತು ಬಾಣಂತಿಯಂತೆ ಬೆಚ್ಚಗೆ ಕುಳಿತಿರುವ ಮೈಗಳ್ಳರಿಗೆ.

ಐಶ್ವರ್ಯತಿಮಿರಂ ಚಕ್ಷುಃ ಪಶ್ಯನ್ನಪಿ ನ ಪಶ್ಯತಿ ।
ತಸ್ಯ ನಿರ್ಮಲತಾಯಾಂ ತು ದಾರಿದ್ರ್ಯಂ ಪರಮೌಷಧಮ್ ॥ ೧೨೩ ॥

ಐಶ್ವರ್ಯವೆಂಬ ಕತ್ತಲೆ ಕವಿದಿರುವಾಗ ಮನುಷ್ಯನು ಎದುರಿಗೇ ಓಡಾಡುತ್ತಿದ್ದರೂ ಕಾಣಿಸುವುದಿಲ್ಲ. ಆ ಕತ್ತಲೆಗೆ ಔಷಧಿಯೆಂದರೆ ಬಡತನವೊಂದೇ.

ವಯೋವೃದ್ಧಸ್ತಪೋವೃದ್ಧಾ ಜ್ಞಾನವೃದ್ಧಾ ಬಹುಶ್ರುತಾಃ ।
ಇತ್ಯೇತೇ ಧನವೃದ್ಧಸ್ಯ ದ್ವಾರೇ ತಿಷ್ಠಂತಿ ಕಿಂಕರಾಃ ॥ ೧೨೪ ॥

ವಯೋವೃದ್ಧರು, ತಪೋವೃದ್ಧರು, ಜ್ಞಾನವೃದ್ಧರು ಮತ್ತು ಅನೇಕ ವೇದಶಾಸ್ತ್ರ ಓದಿದ ವಿದ್ವಾಂಸರು ಇವರೆಲ್ಲಾ ಧನವೃದ್ಧನ ಮನೆಯ ಬಾಗಿಲಲ್ಲಿ ದಾಸರಂತೆ ಇರುತ್ತಾರೆ.

ಏಕೇನ ತಿಷ್ಠತಾಧಸ್ತಾದನ್ಯೇನೋಪರಿ ತಿಷ್ಠತಾ ।
ದಾತೃಯಾಚಕಯೋರ್ಭಾವಃ ಕರಾಭ್ಯಾಮೇವ ಸೂಚಿತಃ ॥ ೧೨೫ ॥

ದಾನ ಮಾಡುವವನ ಕೈ ಮೇಲಿರುತ್ತದೆ. ತೆಗೆದುಕೊಳ್ಳುವವನದು ಕೆಳಗಿರುತ್ತದೆ. ಕೊಡುವವನಾರು, ತೆಗೆದುಕೊಳ್ಳುವವನಾರು ಎಂಬುದನ್ನು ಕೈಗಳೇ ಹೇಳುತ್ತವೆ. ಯಾರನ್ನೂ ಕೇಳಬೇಕಾಗಿಲ್ಲ.

ದುರ್ಜನಂ ಪ್ರಥಮಂ ವಂದೇ ಸಜ್ಜನಂ ತದನಂತರಮ್ ।
ಮುಖಪ್ರಕ್ಷಾಲನಾತ್ಪೂರ್ವಂ ಗುದಪ್ರಕ್ಷಾಲನಂ ಯಥಾ ॥ ೧೨೬ ॥

''ಗುದಪ್ರಕ್ಷಾಳನವನ್ನು ಮೊದಲು ಮಾಡಿ ಅನಂತರ ಮುಖಪ್ರಕ್ಷಾಳನೆ ಮಾಡಿಕೊಳ್ಳುವಂತೆ ಒಂದು ಸಭೆಯಲ್ಲಿ ಮೊದಲು ದುರ್ಜನರನ್ನು ವಂದಿಸಿ ಆಮೇಲೆ ಸಜ್ಜನರನ್ನು ವಂದಿಸುತ್ತೇನೆ'' ಎಂದು ಒಬ್ಬ ಮಹನೀಯನು ಹೇಳಿಕೊಂಡಿದ್ದಾನೆ.

ಕೃತೇ ಪ್ರತಿಕೃತಿಂ ಕುರ್ಯಾತ್ ಹಿಂಸಿತೇ ಪ್ರತಿಹಿಂಸನಮ್ ।
ನ ತತ್ರ ದೋಷಂ ಪಶ್ಯಾಮಿ ದುಷ್ಟೇ ದುಷ್ಟಂ ಸಮಾಚರೇತ್ ॥ ೧೨೭

ನಮಗೆ ಯಾರಾದರೂ ಕೆಟ್ಟದ್ದನ್ನು ಮಾಡಿದರೆ ಅದಕ್ಕೆ ಪ್ರತಿಯಾಗಿ ನಾವೂ ಕೆಟ್ಟದ್ದನ್ನು ಮಾಡಬೇಕು. ಹಿಂಸಿಸಿದವನಿಗೆ ಹಿಂಸೆಯನ್ನು ಕೊಡಬೇಕು. ಅಲ್ಲೇನೂ ದೋಷ ಕಾಣದು. ದುಷ್ಟರಿಗೆ ದುಷ್ಟತನವೇ ಸರಿ.

ದೂರಸ್ಥಾಃ ಪರ್ವತಾ ರಮ್ಯಾ ಬಂಧೂ ರಮ್ಯಃ ಪರಸ್ಪರಮ್ ।
ಯುದ್ಧಸ್ಯ ವಾರ್ತಾ ರಮ್ಯಾ ಚ ತ್ರೀಣಿ ರಮ್ಯಾಣಿ ದೂರತಃ ॥ ೧೨೮

ಪರ್ವತಗಳು ದೂರದಲ್ಲಿದ್ದರೆ ಚೆನ್ನ. ಬಂಧುಗಳೂ ಕೂಡ ದೂರದಲ್ಲಿದ್ದು ಪರಸ್ಪರ ಹೊಂದಿಕೊಂಡಿದ್ದರೆ ಚೆನ್ನ (ಹತ್ತಿರವಿದ್ದರೆ ಹಡುಕು ನಾತ ಎಂದೂ, ನೆಂಟರಿಗೆ ದೂರದಲ್ಲೂ, ನೀರಿಗೆ ಹತ್ತಿರದಲ್ಲೂ ಇರಬೇಕೆಂಬ ಗಾದೆಗಳಿವೆ.) ಯುದ್ಧದ ವಾರ್ತೆಯನ್ನು ಕೇಳುತ್ತಿದ್ದರೆ ಚೆನ್ನ. ನೋಡುತ್ತಿದ್ದರೆ ಅಶಾಂತಿ. ಆದುದರಿಂದ ಈ ಮೂರೂ ದೂರದಲ್ಲಿದ್ದರೇ ಚೆನ್ನ.

ಮಹಾನದೀಪ್ರತರಣಂ ಮಹಾಪುರುಷವಿಗ್ರಹಮ್ ।
ಮಹಾಜನವಿರೋಧಂ ಚ ದೂರತಃ ಪರಿವರ್ಜಯೇತ್ ॥ ೧೨೯ ॥

ಮಹಾನದಿಯನ್ನು ದಾಟುವುದು (ಈಜಿಕೊಂಡು), ಮಹಾಪುರುಷರ ಸಂಗಡ ಯುದ್ಧ ಅಥವಾ ಕಲಹವು, ಮಹಾಜನಗಳಿಗೆ ವಿರುದ್ಧವಾಗಿ ವರ್ತಿಸುವುದು— ಈ ಮೂರನ್ನೂ ದೂರದಿಂದಲೇ ವರ್ಜಿಸಬೇಕು.

ಅಶ್ವಪ್ಲುತಂ ವಾಸವಗರ್ಜಿತಂ ಚ
ಸ್ತ್ರೀಣಾಂ ಚ ಚಿತ್ತಂ ಪುರುಷಸ್ಯ ಭಾಗ್ಯಮ್ ।
ಅವರ್ಷಣಂ ಚಾಪ್ಯತಿವರ್ಷಣಂ ಚ
ದೇವೋ ನ ಜಾನಾತಿ ಕುತೋ ಮನುಷ್ಯಃ ॥ ೧೩೦ ॥

ಕುದುರೆಯ ಓಟ, ಸಿಡಿಲಿನ ಗರ್ಜನೆ, ಸ್ತ್ರೀಯರ ಮನಸ್ಸು, ಪುರುಷನ ಭಾಗ್ಯ, ಅತಿವೃಷ್ಟಿ ಅನಾವೃಷ್ಟಿ ಇವು ಯಾವಾಗ ಉಂಟಾಗುತ್ತವೆ? ಎಂಬ ಜ್ಞಾನ—ಇವನ್ನು ದೇವತೆಗಳೇ ಅರಿಯರು. ಇನ್ನು ಮನುಷ್ಯರ ಪಾಡೇನು?

ಅರ್ಚಕಸ್ಯ ತಪೋಯೋಗಾದರ್ಚನಸ್ಯಾತಿಶಾಯನಾತ್ ।
ಆಭಿಮುಖ್ಯಾಚ್ಚ ಮೂರ್ತೀನಾಂ ದೇವಃ ಸಾನ್ನಿಧ್ಯಮೃಚ್ಛತಿ ॥ ೧೩೧ ॥

ಅರ್ಚಕನು ಮಾಡುವ ತಪಸ್ಸಿನ ಬಲದಿಂದಲೂ, ಅತಿಶಯವಾದ ಪೂಜೆಯಿಂದಲೂ, ಭಕ್ತರು ವಿಗ್ರಹಗಳ ಎದುರಿಗೆ ನಿಂತು ಭಕ್ತಿಯಿಂದ ಅತಿಶಯವಾಗಿ ಧ್ಯಾನಿಸುತ್ತಾ ದೇವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವುದರಿಂದಲೂ, ಅವನ ಸಾನ್ನಿಧ್ಯವು ವಿಗ್ರಹದಲ್ಲಿ ಉಂಟಾಗುತ್ತದೆ. ಒಟ್ಟಿನಲ್ಲಿ ಅರ್ಚಕನ ಪ್ರಯತ್ನವೇ ಮುಖ್ಯ.

ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ।
ಸಮುದ್ರಮಥನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಮ್ ॥ ೧೩೨ ॥

ಇಷ್ಟಾನಿಷ್ಟ ಫಲಗಳ ಪ್ರಾಪ್ತಿ ವಿಷಯದಲ್ಲಿ ದೈವದ ಪಾತ್ರವೇ ದೊಡ್ಡದು. ವಿದ್ಯೆಯಾಗಲೀ ಪೌರುಷವಾಗಲೀ ಕೆಲಸಕ್ಕೆ ಬರುವುದಿಲ್ಲ.

ಸಮುದ್ರ ಮಥನದಿಂದ ಹರಿಗೆ ಲಕ್ಷ್ಮಿಯೂ ಹರನಿಗೆ ವಿಷವೂ ಸಿಕ್ಕಿತು.

ಕಾಂತಂ ವಕ್ತಿ ಕಪೋತಿಕಾಕುಲತಯಾ ನಾಥಾಂತಕಾಲೋಧುನಾ
ವ್ಯಾಧೋಽಧೋ ಧೃತಚಾಪಸಜ್ಜಿತಶರಃ ಶ್ಯೇನಃ ಪರಿಭ್ರಾಮ್ಯತಿ ।
ಇತ್ಥಂ ಸತ್ಯಹಿನಾ ಸ ದಷ್ಟ ಇಷುಣಾ ಶ್ಯೇನೋಽಪಿ ತೇನಾಹತಃ
ತೂರ್ಣಂ ತೌ ತು ಯಮಾಲಯಂ ಪ್ರತಿಗತೌ ದೈವೀ ವಿಚಿತ್ರಾ ಗತಿಃ ॥

ದೈವದ ಒಲುಮೆಯೊಂದಿದ್ದರೆ ಎಂತಹ ವಿಪತ್ತಿನಿಂದಲಾದರೂ ಪಾರಾಗಬಹುದು. ಒಂದು ಹೆಣ್ಣು ಪಾರಿವಾಳವು ಮರದ ಮೇಲೆ ಕುಳಿತಿದ್ದ ಎರಡು ಕಡೆಯಿಂದ ಮರಣ ಭಯವನ್ನು ಎದುರಿಸುತ್ತಿದ್ದ, ತನ್ನ ಗಂಡನಾದ ಪಾರಿವಾಳಕ್ಕೆ ''ಕಾಂತ, ಮರದ ಕೆಳಗೆ ಧನುರ್ಬಾಣಗಳಿಂದ ಹೊಡೆಯಲು ಸಜ್ಜಾಗಿರುವ ವ್ಯಾಧನಿದ್ದಾನೆ. ಆಕಾಶಕ್ಕೆ ಹಾರಿಬಿಡೋಣ ಎಂದರೆ ಗಿಡುಗನು ಹೊಂಚು ಹಾಕುತ್ತಿದೆ, ಏನು ಮಾಡೋಣ'' ಎಂದು ಚಿಂತಿಸುತ್ತಿರುವಾಗ ದೈವಪ್ರೇರಣೆಯಿಂದ, ಸರ್ಪವು ವ್ಯಾಧನನ್ನು ಕಚ್ಚಲು ಅವನು ನೆಲದ ಮೇಲೆ ಬಿದ್ದು ಮಡಿದನು. ಬಿಲ್ಲಲ್ಲಿ ಹೂಡಿದ್ದ ಬಾಣವು ನುಸುಳಿಕೊಂಡು ಹೋಗಿ ಮೇಲೆ ಹಾರಾಡುತ್ತಿದ್ದ ಗಿಡುಗನಿಗೆ ತಗುಲಿ, ಅದೂ ಸತ್ತು ಹೋಯಿತು. ಹೀಗೆ ದೈವಾನುಗ್ರಹದಿಂದ ಎರಡೂ ಕಡೆಯಿದ್ದ ಅಪಾಯ ದಿಂದ ಆ ಪಾರಿವಾಳಗಳು ಪಾರಾದವು. ಇದನ್ನೇ ದೈವಬಲವೆನ್ನುವುದು.

ಧ

ಯುಧಿಷ್ಠಿರಃ ಕಸ್ಯ ಪುತ್ರೋ ಗಂಗಾ ವಹತಿ ಕೀದೃಶೀ ।
ಹಂಸಸ್ಯ ಶೋಭಾ ಕಾವಾಸ್ತೇ ಧರ್ಮಸ್ಯ ತ್ವರಿತಾ ಗತಿಃ ॥ ೧೩೪ ॥

ಇದೊಂದು ಚಿತ್ರಾಲಂಕಾರವುಳ್ಳ ಚಮತ್ಕಾರದ ಶ್ಲೋಕ. ಮೊದಲ ಮೂರು ಪಾದಗಳಲ್ಲಿ ಮೂರು ಪ್ರಶ್ನೆ ಮತ್ತು ಕೊನೆಯ ಪಾದದಲ್ಲಿ

ಆ ಮೂರು ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರವಿದೆ. ಮೊದಲನೆಯದು ಯುಧಿಷ್ಠಿರನು ಯಾರ ಮಗ? ಎರಡನೆಯದು ಗಂಗೆಯು ಹೇಗೆ ಹರಿಯುತ್ತಾಳೆ? ಮೂರನೆಯದು ಹಂಸಕ್ಕೆ ಶೋಭಾಜನಕವಾದದ್ದು ಯಾವುದು? ಅವಕ್ಕೆ ಉತ್ತರ—ಧರ್ಮಸ್ಯ–ಯುಧಿಷ್ಠಿರನು ಧರ್ಮನ ಮಗ; ತ್ವರಿತಾ–ಗಂಗೆಯು ವೇಗವಾಗಿ ಹರಿಯುತ್ತಾಳೆ; ಗತಿಃ–ಹಂಸದ ಗಮನವು ಶೋಭಾಯಮಾನವಾಗಿರುತ್ತವೆ.

ಸನ್ಮಿತ್ರಂ ಸಧನಂ ಸ್ವಯೋಷಿತಿ ರತಿಶ್ಚಾಜ್ಞಾಪರಾಃ ಸೇವಕಾಃ
ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾ ಮನೋಹಾರಿಣೀ ।
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ ॥

ಇದು ಒಬ್ಬ ಮಹಾಶಯನ ಕಲ್ಪನೆ ಅಥವಾ ಕನಸು ಎಂದರೂ ತಪ್ಪಿಲ್ಲ. ಗೃಹಸ್ಥಾಶ್ರಮವೇ ಶ್ರೇಷ್ಠ ಎಂದು ಆತನ ಅಭಿಪ್ರಾಯ. ಅದರ ಸಮರ್ಥನೆ ಹೀಗೆ—ಗೃಹಸ್ಥನಿಗೆ ಒಳ್ಳೆಯ ಮಿತ್ರರಿರುತ್ತಾರೆ. ಧನವಿರುತ್ತದೆ. ಸ್ವಭಾರ್ಯಾರತಿಗೆ ಅಡ್ಡಿಯಿಲ್ಲ. ವಿಧೇಯರಾದ ಸೇವಕರಿರುತ್ತಾರೆ. ಮನೆಯು ಆನಂದಕರವಾಗಿರುತ್ತದೆ. ಮಕ್ಕಳೂ ಬುದ್ಧಿವಂತರು, ಹೆಂಡತಿಯು ಸುಂದರಿ. ಅತಿಥಿಸತ್ಕಾರ ಮಾಡಬಹುದು. ಮನೆಯಲ್ಲಿ ದಿನವೂ ಶಿವಪೂಜೆ ಮಾಡಿ ಮೃಷ್ಟಾನ್ನಪಾನ ಪಡೆಯಬಹುದು. ಸಜ್ಜನರ ಸಹವಾಸ ಬೇರೆ ದೊರಕುವುದರಿಂದ ಗೃಹಸ್ಥಾಶ್ರಮವೇ ಶ್ರೇಷ್ಠ. (ಇಂತಹ ಗೃಹಸ್ಥನು ಲಕ್ಷಕ್ಕೆ ಒಬ್ಬ ಸಿಗುವನೋ ಏನೋ ತಿಳಿಯದು.) ॥ ೧೩೫ ॥

ಕ್ಷಣಂ ಚಿತ್ತಂ ಕ್ಷಣಂ ವಿತ್ತಂ ಕ್ಷಣಂ ಜೀವತಿ ಮಾನವಃ ।
ಯಮಸ್ಯ ಕರುಣಾ ನಾಸ್ತಿ ಧರ್ಮಸ್ಯ ತ್ವರಿತಾ ಗತಿಃ ॥ ೧೩೬ ॥

ಮನಸ್ಸು ಚಂಚಲ. ಒಂದು ನಿಮಿಷವಿದ್ದಂತೆ ಇನ್ನೊಂದು ನಿಮಿಷ

ವಿರುವುದಿಲ್ಲ. ಧನವೂ ಅಸ್ಥಿರ. ಮನುಷ್ಯನ ಬಾಳೂ ಕ್ಷಣಿಕ. ಎಲ್ಲವನ್ನೂ ನಿಧಾನವಾಗಿ ಅನುಭವಿಸೋಣವೆಂದರೆ ಯಮನು ಯಾವಾಗ ಎಳೆದು ಕೊಂಡು ಹೋಗುವನೋ ತಿಳಿಯದು. ಅವನಿಗೆ ಕರುಣೆಯೇ ಇಲ್ಲ. ಆದುದರಿಂದ ಬೇಗ ಧರ್ಮಕಾರ್ಯವನ್ನು ಮಾಡಬೇಕು.

ನ

ಅಲಂಕಾರಪ್ರಿಯೋ ವಿಷ್ಣುರಭಿಷೇಕಪ್ರಿಯಃ ಶಿವಃ ।
ನಮಸ್ಕಾರಪ್ರಿಯೋ ಭಾನುರ್ಬ್ರಾಹ್ಮಣೋ ಭೋಜನಪ್ರಿಯಃ ॥ ೧೩೭॥

ವಿಷ್ಣುವಿಗೆ ಅಲಂಕಾರವು ಇಷ್ಟ. ಶಿವನಿಗೆ ಅಭಿಷೇಕವು ಇಷ್ಟ. ಸೂರ್ಯನಿಗೆ ನಮಸ್ಕಾರವು ಇಷ್ಟ. ಬ್ರಾಹ್ಮಣನಿಗೆ ಭೋಜನವು ಇಷ್ಟ. ಈ ಕೊನೆಯ ಪಾದವನ್ನು ಕೆಲವರು ಒಪ್ಪುವುದಿಲ್ಲ. ಅವರ ಅರ್ಥ ಭೋಃ = ಸ್ವಾಮಿ, ಬ್ರಾಹ್ಮಣನು ಜನಪ್ರಿಯ. ತನ್ನ ವಿದ್ಯಾದಿ ಸದ್ಗುಣಗಳಿಂದ ಜನಗಳಿಗೆ ಪ್ರಿಯನಾಗಿದ್ದಾನೆ. ಹಿಂದೆ ಬ್ರಾಹ್ಮಣನಿಲ್ಲದೆ ಯಾವ ಕಾರ್ಯವೂ ಆಗುತ್ತಿರ ಲಿಲ್ಲ. ಇನ್ನು ಕೆಲವರು ''ಭೋಜನಪ್ರಿಯ ಎಂದೇ ಇರಲಿ, ತಪ್ಪೇನು? ವಿಷ್ಣು ಶಿವ ಸೂರ್ಯರ ಸಾಲಿಗೆ ಬ್ರಾಹ್ಮಣನು ಸೇರಬೇಕಾದರೆ ಎಷ್ಟು ಯೋಗ್ಯತೆ ಇರಬೇಕು?'' ಎಂದು ಅವರ ವಾದ. ಒಟ್ಟಿನಲ್ಲಿ ಇದು ಭಾವನಾಪ್ರಧಾನ ವಾದುದು. ಸದ್ಯದಲ್ಲಿ ಇವರು ಜನಪ್ರಿಯರೂ ಅಲ್ಲ. ಭೋಜನಪ್ರಿಯರೂ ಅಲ್ಲ.

ಶಾಂತಿತುಲ್ಯಂ ತಪೋ ನಾಸ್ತಿ ಸಂತೋಷಾನ್ನ ಸುಖಂ ಪರಮ್ ।
ನಾಸ್ತಿ ತೃಷ್ಣಾಸಮೋ ವ್ಯಾಧಿರ್ನ ಚ ಧರ್ಮೋ ದಯಾಪರಃ ॥ ೧೩೮

ಶಾಂತಿಗೆ ಸಮನಾದ ತಪಸ್ಸಿಲ್ಲ. ಸಂತೋಷಕ್ಕೆ ಸಮನಾದ ಸುಖವಿಲ್ಲ. ದುರಾಸೆಗೆ ಸಮನಾದ ರೋಗವಿಲ್ಲ. ದಯೆಗಿಂತ ದೊಡ್ಡ ಧರ್ಮವಿಲ್ಲ.

ನ ಚ ವಿದ್ಯಾಸಮೋ ಬಂಧುರ್ನ ಚ ವ್ಯಾಧಿಸಮೋ ರಿಪುಃ ।
ನ ಚಾಪತ್ಯಸಮಃ ಸ್ನೇಹೀ ನ ಚ ಧರ್ಮೋ ದಯಾಪರಃ ॥೧೩೯॥

ವಿದ್ಯೆಗೆ ಸಮನಾದ ಬಂಧುವಿಲ್ಲ. ರೋಗಕ್ಕೆ ಸಮನಾದ ಶತ್ರುವಿಲ್ಲ. ಸಂತತಿಗೆ ಸಮಾನವಾದ ಸ್ನೇಹಿತರಿಲ್ಲ. ದಯೆಗಿಂತ ದೊಡ್ಡ ಧರ್ಮವಿಲ್ಲ.

ನಾನ್ನೋದಕಸಮಂ ದಾನಂ ನ ತಿಥಿರ್ದ್ವಾದಶೀಸಮಾ ।
ನ ಗಾಯತ್ರ್ಯಾ ಸಮೋ ಮಂತ್ರೋ ನ ಮಾತುಃ ಪರದೈವತಮ್
೧೪೦

ಬೇರೆ ಯಾವ ದಾನದಿಂದಲೂ ತೃಪ್ತಿಯಾಗುವುದಿಲ್ಲ. ಆದುದರಿಂದ ಅನ್ನೋದಕಕ್ಕೆ ಸಮಾನವಾದ ದಾನವಿಲ್ಲ. ಇದರಲ್ಲಿ ತೃಪ್ತಿಯಾಗುತ್ತದೆ. ದ್ವಾದಶಿಗೆ ಸಮಾನವಾದ ತಿಥಿಯಿಲ್ಲ. (ಅಂದರೆ ಉಪವಾಸದ ಕಷ್ಟವೂ ಇರುವುದಿಲ್ಲ.) ಅದು ವಿಷ್ಣುವಿನ ಪೂಜೆಗೂ ಶ್ರೇಷ್ಠವಾದುದು. ಗಾಯತ್ರಿಗೆ ಸಮನಾದ ಮಂತ್ರವಿಲ್ಲ. ಇದು ಸುಲಭ ಮತ್ತು ಪಾಪನಾಶಕ. ತಾಯಿಗಿಂತ ದೊಡ್ಡ ದೇವರಿಲ್ಲ. ಇದು ತಿಳಿದ ವಿಷಯವೇ.

ಶುನಃಪುಚ್ಛಮಿವ ವ್ಯರ್ಥಂ ವಿದ್ಯಾಹೀನಸ್ಯ ಜೀವಿತಮ್ ।
ನ ಗುಹ್ಯಗೋಪನೇ ದಕ್ಷಂ ನ ವಾ ದಂಶನಿವಾರಣೇ ॥ ೧೪೧ ॥

ವಿದ್ಯೆಯಿಲ್ಲದವನ ಬಾಳು ನಾಯಿಯ ಬಾಲದಂತೆ ವ್ಯರ್ಥ. ಬಾಲಕ್ಕೆ ಎರಡು ಪ್ರಯೋಜನವುಂಟು. ಗುಹ್ಯಸ್ಥಳವನ್ನು ಮುಚ್ಚಿಕೊಳ್ಳುವುದು, ಮತ್ತು ನೊಣ ಮುಂತಾದವುಗಳನ್ನು ಓಡಿಸುವುದು. ಹಸು ಎತ್ತುಗಳ ಬಾಲವು ಈ ಕೆಲಸ ಮಾಡುತ್ತದೆ. ನಾಯಿಯ ಬಾಲವು ಮಾಡುವುದಿಲ್ಲ. (ಆದರೆ ಸ್ವಾಮಿಭಕ್ತಿಯನ್ನು ತೋರಿಸಬಹುದು)

ಪುನರ್ವಿತ್ತಂ ಪುನರ್ಮಿತ್ರಂ ಪುನರ್ಭಾರ್ಯಾ ಪುನರ್ಮಹೀ ।
ಏತತ್ಸರ್ವಂ ಪುನರ್ಲಭ್ಯಂ ನ ಶರೀರಂ ಪುನಃ ಪುನಃ ॥ ೧೪೨ ॥

ಹಣ, ಮಿತ್ರ, ಹೆಂಡತಿ, ಭೂಮಿ ಎಲ್ಲವೂ ಮತ್ತೆ ಸಿಗಬಲ್ಲವು. ದೇಹ ಮಾತ್ರ ಮತ್ತೆ ಸಿಗಲಾರದು. ಆದುದರಿಂದ ಇದನ್ನು ಎಚ್ಚರಿಕೆಯಿಂದ ರಕ್ಷಿಸಿಕೊಂಡು ಧರ್ಮಕಾರ್ಯವನ್ನು ಮಾಡಬೇಕು.

ಆಯುರ್ವಿತ್ತಂ ಗೃಹಚ್ಛಿದ್ರಂ ರಹಸ್ಯಂ ಮಂತ್ರಮೌಷಧಮ್ ।
ತಪೋ ದಾನಾವಮಾನೌ ಚ ನವ ಗೋಪ್ಯಾನಿ ಕಾರಯೇತ್ ೧೪೩

ಮುಂದೆ ಹೇಳುವ ಒಂಬತ್ತು ವಿಷಯಗಳನ್ನು ಗುಟ್ಟಾಗಿಟ್ಟರಬೇಕು. ಯಾವುವೆಂದರೆ ತನ್ನ ಆಯುಸ್ಸು, ಧನ, ಮನೆಯಲ್ಲಿರುವ ಒಡಕು, ರಹಸ್ಯ ವಿಷಯ, ಮಂತ್ರ, ಔಷಧ, ತಪಸ್ಸು, ದಾನ ಮತ್ತು ಅವಮಾನ. ಕೆಲವು ಪ್ರಾಣಕ್ಕೇ ಅಪಾಯ ತರುತ್ತವೆ. ಕೆಲವು ನೀತಿಶಾಸ್ತ್ರಕ್ಕೆ ವಿರುದ್ಧವಾದುದು, ಕೆಲವನ್ನು ಹೇಳಿ ಕೊಂಡರೆ ಪುಣ್ಯಕ್ಷಯ.

ಯಸ್ಮಿನ್ ದೇಶೇ ನ ಸಂಮಾನೋ ನ ಪ್ರೀತಿರ್ನ ಚ ಬಾಂಧವಾಃ ।
ನ ಚ ವಿದ್ಯಾಗಮಃ ಕಶ್ಚಿತ್ ನ ತತ್ರ ದಿವಸಂ ವಸೇತ್ ॥ ೧೪೪ ॥

ಯಾವ ಸ್ಥಳದಲ್ಲಿ ಸಂಮಾನ, ಪ್ರೀತಿ, ಬಂಧುಗಳು ಮತ್ತು ವಿದ್ಯೆ ಕಲಿಯಲು ಅವಕಾಶವಿಲ್ಲವೋ ಅಲ್ಲಿ ಒಂದು ದಿನವೂ ಇರಬಾರದು.

ಕೃಪಣೇನ ಸಮೋ ದಾತಾ ನ ಭೂತೋ ನ ಭವಿಷ್ಯತಿ ।
ಅಸ್ಪೃಶನ್ನೇವ ವಿತ್ತಾನಿ ಪರೇಭ್ಯೋ ಯಃ ಪ್ರಯಚ್ಛತಿ ॥ ೧೪೫ ॥

ಜಿಪುಣನಂತಹ ದಾನಿ ಹಿಂದೆ ಇರಲಿಲ್ಲ, ಮುಂದೆ ಇರುವುದಿಲ್ಲ. ಏಕೆಂದರೆ ದಾನ ಮಾಡಬೇಕಾದರೆ ಕೈಯಿಂದಲೇ ಮಾಡಬೇಕು. ಇವನು ಕೈಯಿಂದಲೂ ಮುಟ್ಟದೆ ಹಾಗೆಯೇ ಬಿಟ್ಟುಹೋಗುತ್ತಾನೆ. ದಾನದ ಪುಣ್ಯವೇ ಬರುವುದಿಲ್ಲ, ಜಿಪುಣತನ ಕೂಡದು ಎಂದು ತಾತ್ಪರ್ಯ.

ನ ಜಾತು ಕಾಮಃ ಕಾಮಾನಾಂ ಉಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥ ೧೪೬ ॥

ಉಪಭೋಗದಿಂದ ಆಸೆ ಅಭಿಲಾಷೆಗಳು ಕಡಿಮೆಯಾಗುವುದಿಲ್ಲ. ಅಗ್ನಿಗೆ ತುಪ್ಪ ಹಾಕುತ್ತಿದ್ದರೆ ಜ್ವಾಲೆ ಹೆಚ್ಚುತ್ತದೆಯೇ ವಿನಾ ಕಡಿಮೆಯಾಗದು. ಜ್ವಾಲೆಯು ಕಡಿಮೆಯಾಗಬೇಕಾದರೆ ತುಪ್ಪ ಹಾಕುವುದನ್ನು ನಿಲ್ಲಿಸಬೇಕು. ಆಸೆ ಕಡಿಮೆಯಾಗಬೇಕಾದರೆ ಅನುಭವಿಸುವುದನ್ನು ನಿಲ್ಲಿಸಬೇಕು.

ನ ವಿಷಂ ವಿಷಮಿತ್ಯಾಹುರ್ಬ್ರಹ್ಮಸ್ವಂ ವಿಷಮುಚ್ಯತೇ ।
ವಿಷಮೇಕಾಕಿನಂ ಹಂತಿ ಬ್ರಹ್ಮಸ್ವಂ ಪುತ್ರಪೌತ್ರಕಮ್ ॥ ೧೪೭ ॥

ವಿಷವನ್ನು ವಿಷವೆಂದು ಹೇಳುವುದಿಲ್ಲ. ಬ್ರಾಹ್ಮಣನ ಸ್ವತ್ತೇ ವಿಷ. ವಿಷವು ಒಬ್ಬನನ್ನು ಕೊಂದರೆ, ಬ್ರಾಹ್ಮಣರ ಸ್ವತ್ತು ಪುತ್ರಪೌತ್ರರನ್ನು ಕೊಲ್ಲುತ್ತದೆ.

ಭಾರ್ಗವೇಣ ಹತಾ ಮಾತಾ ಏಕಜಾಯಾಶ್ಚ ಪಾಂಡವಾಃ ।
ಪರದಾರರತಃ ಕೃಷ್ಣೋ ನ ದೇವಚರಿತಂ ಚರೇತ್ ॥ ೧೪೮ ॥

ಪರಶುರಾಮನು ತಾಯಿಯನ್ನು ಕೊಂದವನು. ಪಾಂಡವರು ಏಕ ಪತ್ನಿಯುಳ್ಳವರು. ಕೃಷ್ಣನು ಪರದಾರಾಸಕ್ತನು. ಹೀಗೆಂದು ದೇವರಂತೆ ನಾವು ನಡೆಯಬಾರದು. ನಾವು ಮಾನವರು. ಅವರಲ್ಲಿ ವಿಶೇಷ ಮಹಿಮೆಯುಂಟು. ಕಾರಣಾಂತರದಿಂದ ವಿಧಿಯಿಲ್ಲದೆ ಹಾಗೆ ಮಾಡಿರುತ್ತಾರೆ.

ಯದಿ ಸಂತಿ ಗುಣಾಃ ಪುಂಸಾಂ ವಿಕಸಂತ್ಯೇವ ತೇ ಸ್ವಯಮ್ ।
ನ ಹಿ ಕಸ್ತೂರಿಕಾಮೋದಃ ಶಪಥೇನ ವಿಭಾವ್ಯತೇ ॥ ೧೪೯ ॥

ಮನುಷ್ಯರಲ್ಲಿ ಗುಣವಿದ್ದರೆ ತಾನೇ ಪ್ರಕಾಶಕ್ಕೆ ಬರುತ್ತದೆ. ನಮ್ಮ ಬಳಿ ಕಸ್ತೂರಿಯಿದ್ದರೆ ಅದರ ಪರಿಮಳವು ತಾನಾಗಿ ಬರುತ್ತದೆ. ಇಲ್ಲದಿದ್ದಾಗ

ಇದೆಯೆಂದು ಆಣೆ ಪ್ರಮಾಣ ಮಾಡಿದರೂ ಸುವಾಸನೆ ಬರುವುದಿಲ್ಲ.

ವ್ಯಾಧೇಸ್ತತ್ವಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ ।
ಏತದ್ವೈದ್ಯಸ್ಯ ವೈದ್ಯತ್ವಂ ನ ವೈದ್ಯಃ ಪ್ರಭುರಾಯುಷಃ ॥ ೧೫೦ ॥

ರೋಗದ ಮೂಲವನ್ನು ಪತ್ತೆ ಮಾಡುವುದು, ನೋವನ್ನು ನಿವಾರಿಸುವುದು ಈ ಎರಡೇ ವೈದ್ಯನ ಹೊಣೆಗಾರಿಕೆ. ಆಯುಸ್ಸಿಗೆ ವೈದ್ಯನು ಹೊಣೆಗಾರನಲ್ಲ.

ನ ವಿಶ್ವಸೇತ್ಕುಮಿತ್ರಂ ಚ ಮಿತ್ರಂ ಚಾಪಿ ನ ವಿಶ್ವಸೇತ್ ।
ಕದಾಚಿತ್ಕುಪಿತಂ ಮಿತ್ರಂ ಸರ್ವಂ ಗುಪ್ತಂ ಪ್ರಕಾಶಯೇತ್ ॥೧೫೧ ॥

ಮಿತ್ರನನ್ನೂ ನಂಬಬಾರದು. ಕಪಟ ಮಿತ್ರನನ್ನಂತೂ ನಂಬಲೇ ಬಾರದು. ಎಂದಾದರೂ ಕೋಪ ಬಂದಾಗ ಗುಟ್ಟನ್ನೆಲ್ಲಾ ರಟ್ಟುಮಾಡಿ ಬಿಡುವನು.

ಘೃಷ್ಟಂ ಘೃಷ್ಟಂ ಪುನರಪಿ ಪುನಶ್ಚಂದನಂ ಚಾರುಗಂಧಮ್
ಛಿನ್ನ ಛಿನ್ನಂ ಪುನರಪಿ ಪುನಃ ಸ್ವಾದು ಚೈವೇಕ್ಷುದಂಡಮ್ ।
ದಗ್ಧಂ ದಗ್ಧಂ ಪುನರಪಿ ಪುನಃ ಕಾಂಚನಂ ಕಾಂತವರ್ಣಮ್
ನ ಪ್ರಾಣಾಂತೇ ಪ್ರಕೃತಿವಿಕೃತಿರ್ಜಾಯತೇ ಚೋತ್ತಮಾನಾಮ್ ॥ ೧೫೨

ಉತ್ತಮರ ಸ್ವಭಾವವು ಏನಾದರೂ ಬದಲಾಗುವುದಿಲ್ಲ. ಅವರನ್ನು ಪೀಡಿಸಿದರೂ ಒಳ್ಳೆಯದನ್ನೇ ಮಾಡುತ್ತಾರೆ. ಗಂಧದ ಕೊರಡನ್ನು ತೇಯ್ದರೂ ಪರಿಮಳವನ್ನೇ ಕೊಡುತ್ತದೆ. ಕಬ್ಬಿನ ಜಲ್ಲೆಯನ್ನು ಎಷ್ಟು ಕತ್ತರಿಸಿದರೂ ತನ್ನ ಮಾಧುರ್ಯವನ್ನೇ ಕೊಡುತ್ತದೆ. ಚಿನ್ನವನ್ನು ಎಷ್ಟು ಸಾರಿ ಅಗ್ನಿಯಲ್ಲಿ ಹಾಕಿದರೂ ಹೊಳಪು ಹೆಚ್ಚುತ್ತದೆ. ಸಜ್ಜನರ ಸ್ವಭಾವವೇ ಹೀಗೆ.

ಪುಸ್ತಕಪ್ರತ್ಯಯಾಧೀತಂ ನಾಧೀತಂ ಗುರುಸಂನಿಧೌ ।
ನ ಶೋಭತೇ ಸಭಾಮಧ್ಯೇ ಜಾರಗರ್ಭ ಇವ ಸ್ತ್ರಿಯಃ ॥ ೧೫೩ ॥

ಕ್ರಮವಾಗಿ ಗುರುಸನ್ನಿಧಿಯಲ್ಲಿ ಅಧ್ಯಯನ ಮಾಡದೆ, ಪುಸ್ತಕವನ್ನೇ ಅವಲಂಬಿಸಿರುವವನ ವಿದ್ಯೆಯು ಸಭಾಮಧ್ಯದಲ್ಲಿ, ಸ್ತ್ರೀಯ ಜಾರಗರ್ಭದಂತೆ ಶೋಭಿಸುವುದಿಲ್ಲ. (ಜಾರ=ಎಂದರೆ ಉಪಪತಿ. ನಿಜವಾದ ಪತಿಯಲ್ಲ)

ನಾನೃಷಿಃ ಕುರುತೇ ಕಾವ್ಯಂ ನಾರುದ್ರಃ ಕ್ರಮಪಾಠಕಃ ।
ನಾದೇವಾಂಶೋ ದದಾತ್ಯನ್ನಂ ನಾವಿಷ್ಣುಃ ಪೃಥಿವೀಪತಿಃ ॥ ೧೫೪ ॥

ಋಷಿಗಳ ಅಂಶವಿಲ್ಲದೆ ಕಾವ್ಯ ಬರೆಯುವುದಕ್ಕಾಗುವುದಿಲ್ಲ. ರುದ್ರಾಂಶವಿಲ್ಲದೆ ಕ್ರಮಾಂತ ಅಧ್ಯಯನ ಮಾಡಲು ಸಾಧ್ಯವಿಲ್ಲ. ದೇವಾಂಶವಿಲ್ಲದೆ ಅನ್ನದಾನ ಮಾಡಲಾಗುವುದಿಲ್ಲ. ವಿಷ್ಣುವಿನ ಅಂಶವಿಲ್ಲದೆ ರಾಜನಾಗುವುದಿಲ್ಲ.

ಭೋಜ್ಯಂ ಭೋಜನಶಕ್ತಿಶ್ಚ ರತಿಶಕ್ತಿರ್ವರಸ್ತ್ರಿಯಃ ।
ವಿಭವೋ ದಾನಶಕ್ತಿಶ್ಚ ನಾಲ್ಪಸ್ಯ ತಪಸಃ ಫಲಮ್ ॥ ೧೫೫ ॥

ಭೋಜನದ ವಸ್ತು ಮತ್ತು ಊಟ ಮಾಡುವ ಶಕ್ತಿ, ರತಿಸುಖವನ್ನು ಅನುಭವಿಸುವ ಶಕ್ತಿ ಮತ್ತು ಅದಕ್ಕೆ ತಕ್ಕ ಶ್ರೇಷ್ಠ ಸ್ತ್ರೀಯರು, ಸಂಪತ್ತು ಮತ್ತು ದಾನಮಾಡುವ ಶಕ್ತಿ —ಇವು ಸ್ವಲ್ಪತಪಸ್ಸಿನ ಫಲವಲ್ಲ. ಅಂದರೆ ತುಂಬಾ ತಪಸ್ಸು ಮಾಡಿರಬೇಕು ಎಂದರ್ಥ.

ಸತ್ಯಂ ಸತ್ಯಂ ಮನೋರ್ವಾಕ್ಯಂ ನಾದತ್ತಮುಪತಿಷ್ಠತೇ ।
ಅಂಬುಭಿಃ ಪೂರಿತಾ ಪೃಥ್ವೀ ಚಾತಕಸ್ಯ ಮರುಸ್ಥಲೀ ॥ ೧೫೬ ॥

ಮನುವಿನ ಮಾತು ಪೂರ್ಣಸತ್ಯವಾದುದು. ಹಿಂದಿನ ಜನ್ಮದಲ್ಲಿ ದಾನ

ಮಾಡಿದ್ದರೇ ಈ ಜನ್ಮದಲ್ಲಿ ದೊರೆಯುವುದು. ಭೂಮಂಡಲವೆಲ್ಲಾ ನೀರೇ ಆದರೂ ಚಾತಕಪಕ್ಷಿಯ ಪಾಲಿಗೆ ಮರುಭೂಮಿಯೇ ಸರಿ. ಅದು ನೆಲದ ಮೇಲೆ ಬಿದ್ದ ನೀರನ್ನು ಕುಡಿಯುವುದಿಲ್ಲ.

ಪಿತಾ ರತ್ನಾಕರೋ ಯಸ್ಯ ಲಕ್ಷ್ಮೀರ್ಯಸ್ಯ ಸಹೋದರೀ ।
ಶಂಖೋ ಭಿಕ್ಷಾಟನಂ ಕುರ್ಯಾನ್ನಾದತ್ತಮುಪತಿಷ್ಠತೇ ॥ ೧೫೭ ॥

ಶಂಖದ ತಂದೆ ರತ್ನಾಕರ ಅಂದರೆ ರತ್ನದ ಗಣಿ. ಸಹೋದರಿಯು ಲಕ್ಷ್ಮೀದೇವಿ. ಹೀಗಿದ್ದರೂ ಭಿಕ್ಷೆ ಬೇಡಬೇಕಾದರೆ ಜನ್ಮಾಂತರದಲ್ಲಿ ದಾನ ಮಾಡಿಲ್ಲವೆಂದು ತಿಳಿಯಬೇಕು. ದಾಸಯ್ಯಗಳು ಭಿಕ್ಷೆಗೆ ಬಂದಾಗ ಶಂಖವನ್ನು ಊದುವುದರಿಂದ ಕವಿಯು ಹೀಗೆ ಹೇಳುತ್ತಾನೆ.

ನ ಪುತ್ರಾತ್ಪರಮೋ ಲಾಭೋ ನ ಭಾರ್ಯಾಯಾಃ ಪರಂ ಸುಖಮ್
ನ ಧರ್ಮಾತ್ಪರಮಂ ಮಿತ್ರಂ ನಾನೃತಾತ್ಪಾತಕಂ ಪರಮ್ ॥ ೧೫೮ ॥

ಪುತ್ರಲಾಭಕ್ಕಿಂತ ದೊಡ್ಡ ಲಾಭವಿಲ್ಲ. ಭಾರ್ಯೆಗೆ ಸಮನಾದ ಸುಖವಿಲ್ಲ. ಧರ್ಮಕ್ಕಿಂತ ದೊಡ್ಡ ಮಿತ್ರನಿಲ್ಲ. ಸುಳ್ಳಿಗಿಂತ ದೊಡ್ಡ ಪಾಪವಿಲ್ಲ.

ದರ್ಶನಾದ್ಧರತೇ ಚಿತ್ತಂ ಸ್ಪರ್ಶನಾದ್ಧರತೇ ಬಲಮ್ ।
ಸಂಭೋಗಾದ್ಧರತೇ ವೀರ್ಯಂ ನಾರೀ ಪ್ರತ್ಯಕ್ಷರಾಕ್ಷಸೀ ॥ ೧೫೯ ॥

ನೋಟದಿಂದ ಮನಸ್ಸನ್ನು ಅಪಹರಿಸುತ್ತಾಳೆ. ಸ್ಪರ್ಶದಿಂದ ಬಲವನ್ನೂ ಸಂಭೋಗದಿಂದ ವೀರ್ಯವನ್ನೂ ಅಪಹರಿಸುವುದರಿಂದ ನಾರಿಯು ಪ್ರತ್ಯಕ್ಷರಾಕ್ಷಸಿಯೇ.

ಗರ್ಭಸ್ಥೋ ಹರತೇ ದುಗ್ಧಂ ಜನ್ಮತಃ ಸ್ನೇಹಮಾಹರೇತ್ ।
ಪಶ್ಚಾದ್ಧನವಿಭಾಗೇನ ನಾಸ್ತಿ ಬಂಧುಸಮೋ ರಿಪುಃ ॥ ೧೬೦ ॥

ಇದು ಕವಿಯ ಚಮತ್ಕಾರವನ್ನು ತೋರಿಸುತ್ತದೆ. ಸ್ವಾಭಾವಿಕವಾದು

ದನ್ನು ಹೀಗೆ ಹೇಳುತ್ತಾನೆ. ಬಂಧು ಎಂದರೆ ತಮ್ಮ ಎಂದು ಇಲ್ಲಿ ಅರ್ಥ. ಗರ್ಭದಲ್ಲಿ ಮುಂದಿನ ಮಗು ಬೆಳೆಯಲು ಆರಂಭವಾದ ಮೇಲೆ ಹಾಲು ನಿಲ್ಲುವುದು ಸಹಜ. ಇವನು ಹುಟ್ಟಿದ ಮೇಲೆ ಸ್ನೇಹವೂ ಭಾಗವಾಗುವುದು ಸಹಜ. ಆಮೇಲೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ. ಆದುದರಿಂದ ಗರ್ಭದಿಂದಲೇ ಕಷ್ಟ ಕೊಡಲಾರಂಭಿಸುವುದರಿಂದ ಇವನಿಗೆ ಸಮನಾದ ಶತ್ರುವಿಲ್ಲವೆಂದು ಹೇಳುತ್ತಾನೆ.

ನಾಸ್ತಿ ಕ್ಷುಧಾ ಸಮಂ ದುಃಖಂ ನಾಸ್ತಿ ರೋಗಃ ಕ್ಷುಧಾಸಮಃ ।
ನಾಸ್ತ್ಯಾಹಾರಸಮಂ ಸೌಖ್ಯಂ ನಾಸ್ತಿ ಕ್ರೋಧಸಮೋ ರಿಪುಃ ॥ ೧೬೧

ಹಸಿವಿಗೆ ಸಮನಾದ ದುಃಖವಿಲ್ಲ. ಹಸಿವಿಗೆ ಸಮನಾದ ರೋಗವೂ ಇಲ್ಲ. ಆಹಾರಕ್ಕೆ ಸಮನಾದ ಸೌಖ್ಯವೂ ಇಲ್ಲ. ಕೋಪಕ್ಕೆ ಸಮನಾದ ಶತ್ರುವಿಲ್ಲ.

ನಾಗುಣೀ ಗುಣಿನಂ ವೇತ್ತಿ ಗುಣೀ ಗುಣಿಷು ಮತ್ಸರೀ ।
ಗುಣೀ ಚ ಗುಣಿರಾಗೀ ಚ ವಿರಲಸ್ಸರಲೋ ಜನಃ ॥ ೧೬೨ ॥

ಸ್ವಯಂ ಗುಣವಂತನಲ್ಲದವನಿಗೆ ಗುಣವಂತನ ಬೆಲೆ ತಿಳಿಯುವುದಿಲ್ಲ. ಒಂದುವೇಳೆ ಗುಣವಂತನಾಗಿದ್ದರೆ, ಗುಣವಂತನನ್ನು ದ್ವೇಷಿಸುತ್ತಾನೆ. ಗುಣವಂತನೂ ಆಗಿದ್ದು ಗುಣವಂತರಲ್ಲಿ ಆದರಗೌರವವನ್ನೂ ಹೊಂದಿರುವ ಉದಾರಿಗಳು ತುಂಬಾ ಕಡಿಮೆ.

ಅನುಷ್ಠಿತಂ ತು ಯದ್ದೇವೈಃ ಋಷಿಭಿರ್ಯದನುಷ್ಠಿತಮ್ ।
ನಾನುಷ್ಠೇಯಂ ಮನುಷ್ಯೈಸ್ತು ತದುಕ್ತಂ ಕರ್ಮ ಆಚರೇತ್ ॥ ೧೬೩ ॥

ಇಂದ್ರಾದಿ ದೇವತೆಗಳಿಂದಲೂ, ಪರಾಶರಾದಿ ಋಷಿಗಳಿಂದಲೂ ಆಚರಿಸಲ್ಪಟ್ಟಂತೆ ನಾವು ಮನುಷ್ಯಮಾತ್ರರು ಆಚರಿಸಬಾರದು. ಅವರು ಹೇಳಿರುವ ಕರ್ಮಗಳನ್ನು ಆಚರಿಸಬೇಕು.

ಸಂತಪ್ತಾಯಸಿ ಸಂಸ್ಥಿತಸ್ಯ ಪಯಸೋ ನಾಮಾಪಿ ನ ಶ್ರೂಯತೇ ।
ಮುಕ್ತಾಕಾರತಯಾ ತದೇವ ನಲಿನೀಪತ್ರಸ್ಥಿತಂ ರಾಜತೇ ।
ಸ್ವಾತ್ಯಾಂ ಸಾಗರಶುಕ್ತಿಮಧ್ಯಪತಿತಂ ತನ್ಮೌಕ್ತಿಕಂ ಜಾಯತೇ ।
ಪ್ರಾಯೇಣಾಧಮಮಧ್ಯಮೋತ್ತಮಜುಷಾಮೇವಂ ವಿಧಾ ವೃತ್ತಯಃ ॥ ೧೬೪

ಸ್ವಾತೀ ಮಳೆಯ ಹನಿಗಳು ಕಾದ ಕಬ್ಬಿಣದ ಮೇಲೆ ಬಿದ್ದರೆ ತಾವೇ ನಾಶವಾಗುತ್ತವೆ. ತಾವರೆಯ ಎಲೆಗಳ ಮೇಲೆ ಬಿದ್ದರೆ ಮುತ್ತಿನಂತೆ ಕ್ಷಣಕಾಲ ಶೋಭಿಸುತ್ತವೆ. ಸಮುದ್ರದ ಮಧ್ಯದಲ್ಲಿ ಬಾಯಿ ಬಿಟ್ಟುಕೊಂಡಿರುವ ಕಪ್ಪೆ ಚಿಪ್ಪಿನಲ್ಲಿ ಬಿದ್ದರೆ ಮುತ್ತಾಗುತ್ತವೆ. ಉತ್ತಮ ಮಧ್ಯಮಾಧಮರ ಸ್ವಭಾವ ಹೀಗೆಯೇ ಇರುತ್ತದೆ. ಇಲ್ಲಿ ಕಪ್ಪೆಚಿಪ್ಪು ಉತ್ತಮ, ತಾವರೆ ಎಲೆ ಮಧ್ಯಮ, ಕಾದ ಕಬ್ಬಿಣ ಅಧಮವೆಂದು ತಿಳಿಯಬೇಕು. (ಇದರಂತೆಯೇ ಹಿರಿಯರು ಮಾಡಿದ ಉಪದೇಶದ ಪರಿಣಾಮವೂ ಆಗುತ್ತದೆಯೆಂದು ತಿಳಿಯ ಬೇಕು.)

ಉದಾರಸ್ಯ ತೃಣಂ ವಿತ್ತಂ ಶೂರಸ್ಯ ಮರಣಂ ತೃಣಮ್ ।
ವಿರಕ್ತಸ್ಯ ತೃಣಂ ಭಾರ್ಯಾ ನಿಃಸ್ಪೃಹಸ್ಯ ತೃಣಂ ಜಗತ್ ॥ ೧೬೫ ॥

ಉದಾರ ಸ್ವಭಾವದವನಿಗೆ ಹಣವು ಹುಲ್ಲುಕಡ್ಡಿಗೆ ಸಮಾನ. ಶೂರನಿಗೆ ಮರಣವೂ, ವಿರಕ್ತನಿಗೆ ಹೆಂಡತಿಯೂ ಹಾಗೆಯೇ. ಒಟ್ಟಿನಲ್ಲಿ ನಿಃಸ್ಪೃಹನಿಗೆ ಅಂದರೆ ಆಸೆಯಿಲ್ಲದವನಿಗೆ ಜಗತ್ತೇ ತೃಣಕ್ಕೆ ಸಮ.

ಕೂಷ್ಮಾಂಡಂ ಮಹಿಷೀಕ್ಷೀರಂ ಬಿಲ್ವಪತ್ರಮಥ ದ್ವಿಜಾಃ
ಶ್ರಾದ್ಧಕಾಲೇ ಸೇವಿತಾಶ್ಚೇನ್ನಿರಾಶಾಃ ಪಿತರೋ ಗತಾಃ ॥೧೬೬॥

ಶ್ರಾದ್ಧದಲ್ಲಿ ಬೂದುಗುಂಬಳಕಾಯಿ, ಎಮ್ಮೆಯ ಹಾಲು, ಬಿಲ್ವಪತ್ರೆ ಗಳನ್ನು ಬಳಸಬಾರದು. ಶ್ರಾದ್ಧಕ್ಕೆ ನಿಮಂತ್ರಿಸಲ್ಪಟ್ಟಿರುವ ಬ್ರಾಹ್ಮಣರನ್ನು ಬಿಟ್ಟು

ಬೇರೆಯವರನ್ನು ಪೂಜಿಸಿದಲ್ಲಿ ಪಿತೃಗಳು ನಿರಾಶೆಯಿಂದ ಹೊರಟು ಹೋಗುತ್ತಾರೆ.

ವನೇಷು ದೋಷಾಃ ಪ್ರಭವಂತಿ ರಾಗಿಣಾಂ
ಗೃಹೇಷು ಪಂಚೇಂದ್ರಿಯನಿಗ್ರಹಸ್ತಪಃ ।
ಅಕುತ್ಸಿತೇ ಕರ್ಮಣಿ ಯಃ ಪ್ರವರ್ತತೇ
ನಿವೃತ್ತರಾಗಸ್ಯ ಗೃಹಂ ತಪೋವನಮ್ ॥ ೧೬೭ ॥

ಸಂಸಾರಾಸಕ್ತನಿಗೆ ವನದಲ್ಲೂ ತಪಸ್ಸಿಗೆ ವಿಘ್ನಗಳು ಉಂಟಾಗುತ್ತವೆ. ಹಾಗೆಯೇ ಮನೆಯಲ್ಲಿಯೇ ಪಂಚೇಂದ್ರಿಯಗಳ ನಿಗ್ರಹವು ತಪಸ್ಸಾಗುತ್ತದೆ. ಒಳ್ಳೆಯ ಕಾರ್ಯದಲ್ಲಿ ತೊಡಗಿರುವ ರಾಗರಹಿತನಿಗೆ ಮನೆಯೇ ತಪೋವನವಾಗುತ್ತದೆ.

ಭೇದಾಭೇದೌ ಸಪದಿ ಗಲಿತೌ ಪುಣ್ಯಪಾಪೇ ವಿಶೀರ್ಣೇ
ಮಾಯಾಮೋಹೌ ಕ್ಷಯಮುಪಗತೌ ನಷ್ಟಸಂದೇಹವೃತ್ತೇಃ ।
ಶಬ್ದಾದೀನಾಂ ತ್ರಿಗುಣರಹಿತಂ ಪ್ರಾಪ್ಯ ತತ್ವಾವಬೋಧಂ
ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ ॥ ೧೬೮ ॥

ತ್ರಿಗುಣಾತೀತನೂ ಬ್ರಹ್ಮಜ್ಞನೂ ಆದ ಮಾನವನು ಏನು ಮಾಡಿದರೂ ಸರಿ. ಅವನಿಗೆ ಭೇದಾಭೇದ, ಪುಣ್ಯಪಾಪ ಮಾಯಾಮೋಹಗಳಿರುವುದಿಲ್ಲ. ಮತ್ತು ಸಂದೇಹರಹಿತನಾದ, ಸತ್ವರಜಸ್ತಮೋಗುಣಗಳನ್ನು ಬಿಟ್ಟ ಇಂತಹ ಜ್ಞಾನಿಗೆ, ವಿಧಿ ಅಂದರೆ ನಿಯಮ, ನಿಷೇಧ ಅಂದರೆ ಇಂತಹ ಕಾರ್ಯವನ್ನು ಮಾಡಬಾರದು ಎಂಬ ನಿಯಮ ಇವುಗಳಲ್ಲಿ ಏನು ಮಾಡಿದರೂ, ಅದು ನೀರು ತಾವರೆಎಲೆಗೆ ಅಂಟದಂತೆ ಅವನಿಗೆ ಅನ್ವಯವಾಗುವುದಿಲ್ಲ.

ದೋಷಾಕರೋಽಪಿ ಕುಟಿಲೋಽಪಿ ಕಲಂಕಿತೋಽಪಿ
ಮಿತ್ರಾವಸಾನಸಮಯೇ ವಿಹಿತೋಽದಯೋಽಪಿ ।
ಚಂದ್ರಸ್ತಥಾಪಿ ಹರವಲ್ಲಭತಾಮುಪೈತಿ
ನೈವಾಶ್ರಿತೇಷು ಗುಣದೋಷವಿಚಾರಣಾ ಸ್ಯಾತ್ ॥ ೧೬೯ ॥

ಈ ಶ್ಲೋಕದಲ್ಲಿ ಶ್ಲೇಷಾರ್ಥದ ಚಮತ್ಕಾರವೇ ಮುಖ್ಯವಾಗಿದೆ. ಹರನಂತಹ ಮಹಾತ್ಮರು ಆಶ್ರಿತರಲ್ಲಿ ದೋಷವನ್ನು ಹುಡುಕದೆ ಗೌರವಿಸುತ್ತಾರೆ. ತಲೆಯಲ್ಲಿ ಚಂದ್ರನನ್ನು ಧರಿಸಿರುವುದೇ ಸಾಕ್ಷಿ. ಇವನು ದೋಷಗಳಿಗೆ ಆಕರ=ಗಣಿ. ದೋಷಾ=ರಾತ್ರಿಯನ್ನು ಕರ=ಉಂಟುಮಾಡುವವನು ಚಂದ್ರ. ಕುಟಿಲ=ಕಪಟ ಬುದ್ಧಿಯುಳ್ಳವನು. ಡೊಂಕಾಗಿರುವವನು. ಕಲಂಕಿತ=ಕಳಂಕವುಳ್ಳವನು, ಗುರುತುಳ್ಳವನು. ಮಿತ್ರ=ಸೂರ್ಯ ಮತ್ತು ಸ್ನೇಹಿತ. ಅವಸಾನ=ಅಸ್ತ, ಸಾವು, ವಿಹಿತೋದಯ-ಉದಯ=ಹುಟ್ಟುವುದು ಮತ್ತು ಏಳಿಗೆ ಅಥವಾ ಅಭಿವೃದ್ಧಿ. ಹರವಲ್ಲಭ=ಹರನಿಗೆ ಪ್ರಿಯನಾದವನು. ವಲ್ಲಭ ಎಂದರೆ 'ಪ್ರಿಯ' ಎಂದರ್ಥ. ಕವಿಯ ಪಾಂಡಿತ್ಯ ಗೋಚರವಾಗುತ್ತದೆ.

ಯತ್ರಾಸ್ತಿ ಲಕ್ಷ್ಮೀರ್ವಿನಯೋ ನ ತತ್ರ
ಅಭ್ಯಾಗತೋ ಯತ್ರ ನ ತತ್ರ ಲಕ್ಷ್ಮೀಃ ।
ಉಭೌ ಚ ತೌ ಯತ್ರ ದರಿದ್ರತಾ ಚ
ನೈಕತ್ರ ಸರ್ವೋ ಗುಣಸಂನಿಪಾತಃ ॥ ೧೭೦ ॥

ಸಂಪತ್ತಿರುವ ಕಡೆ ವಿನಯವಿರುವುದಿಲ್ಲ. ಅತಿಥಿ ಅಭ್ಯಾಗತರು ಬರುತ್ತಿರುವ ಮನೆಯಲ್ಲಿ ಸತ್ಕರಿಸಲು ಸಂಪತ್ತಿರುವುದಿಲ್ಲ. ಅಭ್ಯಾಗತರು ಮತ್ತು ವಿನಯ ಎರಡು ಒಂದು ಕಡೆ ಇದ್ದರೂ ಲಕ್ಷ್ಮಿಯು ಇರುವುದಿಲ್ಲ. ಎಲ್ಲ ಗುಣಗಳೂ ಒಂದು ಕಡೆ ಇರುವುದು ಅಸಾಧ್ಯ.

ಪ

ಪಾರ್ವತೀಫಣಿಬಾಲೇಂದುಭಸ್ಮಮಂದಾಕಿನೀಯುತಾ ।
ಪವರ್ಗರಚಿತಾಮೂರ್ತಿರಪವರ್ಗಪ್ರದಾಯಿನೀ ॥ ೧೭೧ ॥

ಪವರ್ಗದಿಂದ ರಚಿಸಲ್ಪಟ್ಟ ದೇಹವು ಅಪವರ್ಗವನ್ನು ಕೊಡುತ್ತದೆ ಎಂದು ವಿರೋಧ. ಅಪವರ್ಗ ಎಂದರೆ ಮೋಕ್ಷ. ಪವರ್ಗದಲ್ಲಿ ಪ ಫ ಬ ಭ ಮ ಇರುತ್ತವೆ. ಇಲ್ಲೂ ಪಾರ್ವತೀ, ಫಣಿ=ಸರ್ಪ. ಬಾಲಚಂದ್ರ, ಭಸ್ಮ=ವಿಭೂತಿ, ಮಂದಾಕಿನೀ=ದೇವಗಂಗೆ. ಇಲ್ಲೂ ಕವಿಯ ಚಮತ್ಕಾರ ಮುಖ್ಯವಾಗಿದೆ.

ವಿರಲಾ ಜಾನಂತಿ ಗುಣಾನ್ವಿರಲಾಃ ಕುರ್ವಂತಿ ನಿರ್ಧನಸ್ನೇಹಮ್ ।
ವಿರಲಾ ರಣೇಷು ಧೀರಾಃ ಪರದುಃಖೇನಾಪಿ ದುಃಖಿತಾ ವಿರಲಾಃ ೧೭೨

ಗುಣಗ್ರಾಹಿಗಳೂ, ಬಡವರಲ್ಲಿಸ್ನೇಹ ಮಾಡುವವರೂ, ಯುದ್ಧದಲ್ಲಿ ಶೂರರಾಗಿರುವವರೂ, ಪರದುಃಖದಲ್ಲಿ ತಾವೂ ದುಃಖಪಡುವ ಸಜ್ಜನರೂ, ಕಡಿಮೆ.

ಪರೋಪದೇಶಪಾಂಡಿತ್ಯಂ ಸರ್ವೇಷಾಂ ಸುಕರಂ ನೃಣಾಮ್ ।
ಧರ್ಮೇ ಸ್ವೀಯಮನುಷ್ಠಾನಂ ಕಸ್ಯಚಿತ್ತು ಮಹಾತ್ಮನಃ ॥ ೧೭೩ ॥

ಮತ್ತೊಬ್ಬರಿಗೆ ಉಪದೇಶಮಾಡುವ ಕೆಲಸ ಎಲ್ಲರಿಗೂ ಸುಲಭ. ಸ್ವತಃ ಅನುಷ್ಠಾನ ಮಾಡುವವನು ಯಾವನೋ ಒಬ್ಬ ಮಹಾತ್ಮನು ಮಾತ್ರ.

ಪರೋಪದೇಶಸಮಯೇ ಜನಾಃ ಸರ್ವೇಽಪಿ ಪಂಡಿತಾಃ ।
ತದನುಷ್ಠಾನಸಮಯೇ ಮುನಯೋಽಪಿ ನ ಪಂಡಿತಾಃ ॥ ೧೭೪ ॥

ಪರೋಪದೇಶ ಮಾಡುವಾಗ ಎಲ್ಲರೂ ಪಂಡಿತರೇ. ಅದನ್ನು ಸ್ವತಃ ಆಚರಿಸಬೇಕಾದಾಗ ಮುನಿಗಳೂ ಮೂರ್ಖರಾಗುತ್ತಾರೆ.

ಮೂಲೇ ಭುಜಂಗೈಃ ಶಿಖರೇ ವಿಹಂಗೈಃ
ಶಾಖಾಃ ಪ್ಲವಂಗೈಃ ಕುಸುಮಾನಿ ಭೃಂಗೈಃ ।
ಆಶ್ಚರ್ಯಮೇತತ್ಖಲು ಚಂದನಸ್ಯ
ಪರೋಪಕಾರಾಯ ಸತಾಂ ವಿಭೂತಯಃ ॥ ೧೭೫ ॥

ಪರೋಪಕಾರಕ್ಕಾಗಿಯೇ ಸಜ್ಜನರ ಸಂಪತ್ತು ಮೀಸಲು ಎಂದು ಕವಿಯು ಶ್ರೀಗಂಧದಮರದ ಹೋಲಿಕೆಯಿಂದ ತಿಳಿಸುತ್ತಾನೆ. ಅದು ತಂಪಾಗಿರುತ್ತದೆಯೆಂದು ಬುಡದಲ್ಲಿ ಹಾವುಗಳು ಸುತ್ತಿಕೊಂಡಿರುತ್ತವೆ. ತುದಿಯಲ್ಲಿ ಪಕ್ಷಿಗಳು ಕೂತಿರುತ್ತವೆ. ಕೊಂಬೆಗಳಲ್ಲಿ ಕೋತಿಗಳು ಕುಳಿತಿರುತ್ತವೆ. ಪುಷ್ಪಗಳಲ್ಲಿ ದುಂಬಿಗಳು ವಿಹರಿಸುತ್ತವೆ. ಇದು ಅಚ್ಚರಿಯನ್ನುಂಟು ಮಾಡತಕ್ಕ ವಿಷಯವಾಗಿದೆ. ಸಜ್ಜನರ ಸಂಪತ್ತಿರುವುದೇ ಪರರಿಗಾಗಿ. ಇದು ಕವಿಸಮಯವೆಂದು ನನ್ನ ಎಣಿಕೆ. ಪದ್ಯವು ಪ್ರಾಸಬದ್ಧವಾಗಿ ಕೇಳಲು ಚೆನ್ನಾಗಿದೆ. ಗಂಧದಮರವು ಇಷ್ಟು ಎತ್ತರವಾಗಿ ಬೆಳೆಯುವುದಿಲ್ಲ. ಹೂವಿಗೆ ದುಂಬಿ ಮುತ್ತುವುದೂ ಹಾವು ಸುತ್ತಿಕೊಳ್ಳುವುದೂ ಕವಿಯ ಕಲ್ಪನೆ ಎಂದು ಅನ್ನಿಸುತ್ತದೆ.

ಖಲಃ ಸರ್ಷಪಮಾತ್ರಾಣಿ ಪರಚ್ಛಿದ್ರಾಣಿ ಪಶ್ಯತಿ ।
ಆತ್ಮನೋ ಬಿಲ್ವಮಾತ್ರಾಣಿ ಪಶ್ಯನ್ನಪಿ ನ ಪಶ್ಯತಿ ॥ ೧೭೬ ॥

ದುಷ್ಟರು ಮತ್ತೊಬ್ಬರ ದೋಷವು ಸಾಸಿವೆಯಷ್ಟಿದ್ದರೂ ದೊಡ್ಡದಾಗಿ ಬಣ್ಣ ಕಟ್ಟಿ ಹೇಳುತ್ತಾರೆ. ತಮ್ಮದು ಬಿಲ್ವಫಲದಷ್ಟು ದೊಡ್ಡದಾಗಿದ್ದರೂ ತೋರಿಸಿಕೊಳ್ಳದೆ, ಕಂಡರೂ ಕಾಣದಂತೆ ವರ್ತಿಸುತ್ತಾರೆ.

ಪರಸೇವಾ ಸುಖಂ ಹಂತಿ ಪ್ರಾಣಾನ್ ಹನ್ತ್ಯುಃ ಪರಸ್ತ್ರಿಯಃ ।
ಪರಾನ್ನಂ ಸುಕೃತಂ ಹಂತಿ ಬ್ರಹ್ಮದ್ವೇಷಃ ಕುಲಾನಿ ಚ ॥ ೧೭೭ ॥

ಪರಸೇವೆಯು ಸುಖನಾಶಕ. ಪರಸ್ತ್ರೀಯರು ಪ್ರಾಣನಾಶಕರು. ಪರಾನ್ನವು ಪುಣ್ಯನಾಶಕ. ಬ್ರಹ್ಮದ್ವೇಷವು ವಂಶನಾಶಕ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಸ್ಸಮದರ್ಶಿನಃ ॥ ೧೭೮ ॥

ವಿದ್ವಾಂಸರು ಅಥವಾ ಜ್ಞಾನಿಗಳು, ವಿದ್ಯಾವಿನಯಸಂಪನ್ನನಾದ ವಿಪ್ರನನ್ನು, ಗೋವನ್ನು, ಆನೆಯನ್ನು, ನಾಯಿಯನ್ನು, ಮತ್ತು ಚಂಡಾಲನನ್ನೂ ಒಂದೇ ಭಾವನೆಯಿಂದ ನೋಡುತ್ತಾರೆ. ಮೇಲು ಕೀಳು ಎಂಬ ಭಾವನೆ ಅವರಿಗಿರುವುದಿಲ್ಲ. ಸಮದರ್ಶಿಗಳಾಗಿರುತ್ತಾರೆ.

ಅಯಮಮೃತನಿಧಾನಂ ನಾಯಕೋಽಪ್ಯೋಷಧೀನಾಂ
ಅಮೃತಮಯಶರೀರಃ ಕಾಂತಿಯುಕ್ತೋಽಪಿ ಚಂದ್ರಃ ।
ಭವತಿ ವಿಗತರಶ್ಮಿರ್ಮಂಡಲಂ ಪ್ರಾಪ್ಯ ಭಾನೋಃ
ಪರಸದನನಿವಿಷ್ಟಃ ಕೋ ಲಘುತ್ವಂ ನ ಯಾತಿ ॥ ೧೭೯ ॥

ಚಂದ್ರನು ಅಮೃತ ಶರೀರನು. ಅವನಲ್ಲೇ ಅಮೃತವು ತುಂಬಿರುತ್ತದೆ. ಓಷಧಿವನಸ್ಪತಿಗಳ ಒಡೆಯನೂ, ಕಾಂತಿಯುಕ್ತನೂ ಆಗಿರುತ್ತಾನೆ. ಹೀಗಿದ್ದರೂ ಸೂರ್ಯಮಂಡಲವನ್ನು ಪ್ರವೇಶಿಸಿದರೆ ಮಂಕಾಗುತ್ತಾನೆ. ಕಾಂತಿಹೀನನಾಗುತ್ತಾನೆ. ಪರಗೃಹವಾಸದಿಂದ ಯಾರು ತಾನೆ ಹಗುರ (ಬೆಲೆ ಇಲ್ಲದವರು)ವಾಗುವುದಿಲ್ಲ? ಸೂರ್ಯ ಚಂದ್ರರು ಅಮಾವಾಸ್ಯೆಯ ದಿನ ಒಟ್ಟಿಗೆ ಸೇರಲೇಬೇಕು. ಇದು ಪ್ರಕೃತಿ ನಿಯಮ. ದೊಡ್ಡ ಬೆಳಕಿನಲ್ಲಿ ಚಿಕ್ಕ ಬೆಳಕು ಮಾಯವಾಗುವುದೂ ಸಹಜ. ಸೂರ್ಯನ ಬೆಳಕೇ ಚಂದ್ರನಲ್ಲಿ ಪ್ರತಿಫಲಿಸುತ್ತದೆಯೆಂದು ಶಾಸ್ತ್ರವಿದೆ. ಆದರೂ ಲೋಕಕ್ಕೆ ಒಂದು ನೀತಿ ಹೇಳಲು ಉಪಯೋಗಿಸಿಕೊಂಡರೆ ತಪ್ಪೇನೂ ಇಲ್ಲ.

ಉಪಕಾರೋಽಪಿ ನೀಚಾನಾಮಪಕಾರೋ ಹಿ ಜಾಯತೇ ।
ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಮ್ ॥೧೮೦॥

ನೀಚರಿಗೆ ಉಪಕಾರ ಮಾಡಿದರೆ ಅದು ನಮ್ಮ ಅಪಕಾರಕ್ಕೇ ಕಾರಣವಾಗುತ್ತದೆ. ಹಾವಿಗೆ ಹಾಲು ಕುಡಿಸಿದರೆ ವಿಷವು ವೃದ್ಧಿಯಾಗುತ್ತದೆ.

(ಇದೂ ಒಂದು ಕವಿಕಲ್ಪನೆಯೆಂದು ನನ್ನ ಎಣಿಕೆ. ಹಾವುಗಳಿಗೆ ಉಪಕಾರ ಸ್ಮರಣೆಯುಂಟು. ಮನುಷ್ಯನಿಗಿರುವುದಿಲ್ಲ. ಇವನು ಹಾವಿಗಿಂತ ಅತ್ತತ್ತ.)

ರಾಜಪತ್ನೀ ಗುರೋಃ ಪತ್ನೀ ಮಿತ್ರಪತ್ನೀ ತಥೈವ ಚ
ಪತ್ನೀಮಾತಾ ಸ್ವಸ್ಯ ಮಾತಾ ಪಂಚೈತಾಮಾತರಃಸ್ಮೃತಾಃ ॥ ೧೮೧॥

ರಾಜಭಾರ್ಯೆ, ಗುರುಭಾರ್ಯೆ, ಮಿತ್ರಭಾರ್ಯೆ, ತನ್ನ ಹೆಂಡತಿಯ ತಾಯಿ (ಅತ್ತೆ), ತನ್ನ ತಾಯಿ. ಈ ಐದು ಮಂದಿಯರೂ ತಾಯಂದಿರೆಂದು ಹೇಳುತ್ತಾರೆ.

ಜನಿತಾ ಚೋಪನೀತಾ ಚ ಯಶ್ಚ ವಿದ್ಯಾಂ ಪ್ರಯಚ್ಛತಿ ।
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥ ೧೮೨ ॥

ಜನ್ಮಕೊಟ್ಟವನು, ಉಪನಯನ ಮಾಡಿದವನು, ವಿದ್ಯಾದಾನ ಮಾಡಿದವನು, ಅನ್ನದಾತನು, ಭಯದಿಂದ ರಕ್ಷಿಸಿದವನು ಈ ಐದು ಮಂದಿಯೂ ತಂದೆಯವರೇ ಎಂದು ನೀತಿಶಾಸ್ತ್ರ ಹೇಳುತ್ತದೆ.

ಸ್ವಗೃಹೇ ಪೂರ್ಣ ಆಚಾರಃ ಪರಗೇಹೇ ತದರ್ಧತಃ ।
ಪತ್ತನೇ ಪಾದ ಆಚಾರಃ ಪಥಿ ಶೂದ್ರವದಾಚರೇತ್ ॥ ೧೮೩ ॥

ಸ್ವಗೃಹದಲ್ಲಿ ಆಚಾರವನ್ನು ಪೂರ್ಣವಾಗಿ ಆಚರಿಸಬೇಕು. ಪರಗೃಹದಲ್ಲಿ ಅದರಲ್ಲರ್ಧ ಆಚರಿಸಿದರೆ ಸಾಕು. ಪಟ್ಟಣದಲ್ಲಿ ಕಾಲುಭಾಗ ಆಚರಿಸಿದರೆ ಸಾಕು. ಮಾರ್ಗಮಧ್ಯದಲ್ಲಿ ಶೂದ್ರನಂತೆ ಇರಬಹುದು. ಇದಕ್ಕೆ ಆಪದ್ಧರ್ಮವೆನ್ನುತ್ತಾರೆ. ಮನೆಗೆ ಬಂದ ಮೇಲೆ ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದು.

ಪಿಬಂತಿ ನದ್ಯಃ ಸ್ವಯಮೇವ ನಾಂಭಃ
ಸ್ವಯಂ ನ ಖಾದಂತಿ ಫಲಾನಿ ವೃಕ್ಷಾಃ ।
ಪಯೋಮುಚಾಂಭಃ ಕ್ವಚಿದಸ್ತಿ ಪಾಸ್ಯಮ್
ಪರೋಪಕಾರಾಯ ಸತಾಂ ವಿಭೂತಯಃ ॥ ೧೮೪ ॥

ನದಿಗಳು ನೀರನ್ನು ತಾವೇ ಕುಡಿಯುವುದಿಲ್ಲ. ವೃಕ್ಷಗಳು ಫಲಗಳನ್ನು ತಾವೇ ತಿನ್ನುವುದಿಲ್ಲ. ಮೇಘಗಳೂ ನೀರನ್ನು ತಾವೇ ಕುಡಿಯುವುದಿಲ್ಲ. ಸಜ್ಜನರ ಸಂಪತ್ತು ಅನ್ಯರಿಗಾಗಿಯೇ.

ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಮ್ ।
ಪ್ರತಿಮಾಸ್ವಲ್ಪಬುದ್ಧೀನಾಂ ಸರ್ವತ್ರ ಸಮದರ್ಶಿನಾಮ್ ॥ ೧೮೫ ॥

ವಿಪ್ರರಿಗೆ ಅಗ್ನಿಯೇ ದೇವರು. ಮುನಿಗಳಿಗೆ ಹೃದಯದಲ್ಲೇ ದೇವರು. ಅಜ್ಞರಿಗೆ ಪ್ರತಿಮೆಗಳಲ್ಲಾದರೆ, ಸಮದರ್ಶಿಗಳಿಗೆ ಎಲ್ಲಾ ಕಡೆಯಲ್ಲೂ ದೇವರು ಕಾಣಿಸುತ್ತಾನೆ.

ಧರ್ಮಾರ್ಥಂ ಯಸ್ಯ ವಿತ್ತೇಹಾ ವರಾ ತಸ್ಯ ನಿರೀಹತಾ ।
ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಮ್ ॥ ೧೮೬ ॥

ಧರ್ಮಕಾರ್ಯಕ್ಕಾಗಿಯಾದರೂ ಧನವನ್ನು ಬಯಸಬಾರದು. ಅದರ ಸಹವಾಸವೇ ಕೂಡದು. ಕೆಸರನ್ನು ಮುಟ್ಟಿ ಕೈ ತೊಳೆದುಕೊಳ್ಳುವುದಕ್ಕಿಂತ ಮುಟ್ಟದೇ ದೂರದಲ್ಲಿರುವುದೇ ಮೇಲು. (ಜನಗಳು ಅಪಾರ್ಥ ಕಲ್ಪಿಸುತ್ತಾರೆ ಎಂದರ್ಥ).

ಅಜಾಯುದ್ಧಂ ಋಷಿಶ್ರಾದ್ಧಂ ಪ್ರಭಾತೇ ಮೇಘಡಂಬರಮ್ ।
ದಂಪತ್ಯೋಃ ಕಲಹಶ್ಚೈವ ಪರಿಣಾಮೇ ನ ಕಿಂಚನ ॥ ೧೮೭ ॥

ಮೇಕೆಗಳ ಕಾಳಗ, ಋಷಿಗಳು ಮಾಡುವ ಶ್ರಾದ್ಧ, ಪ್ರಭಾತಕಾಲದ ಮೇಘಾಡಂಬರ, ದಂಪತಿಗಳ ಜಗಳ, ಪರಿಣಾಮದಲ್ಲಿ ಏನೂ ಆಗಲಾರದು. ಮೇಕೆಗಳ ಯುದ್ಧ ಜೋರಿರುವುದಿಲ್ಲ. ಋಷಿಗಳ ಶ್ರಾದ್ಧದಲ್ಲಿ ರುಚಿಕರವಾದ ಭೋಜನವಿರುವುದಿಲ್ಲ. ಬೆಳಗಿನ ಮೋಡ ಮಳೆ ಸುರಿಸುವುದಿಲ್ಲ. ದಂಪತಿಗಳು ಜಗಳವಾಡಿದರೂ ಮತ್ತೆ ಒಂದಾಗುತ್ತಾರೆ.

ನಿರ್ವಾಣದೀಪೇ ಕಿಮು ತೈಲದಾನಮ್
ಚೋರೇ ಗತೇ ವಾ ಕಿಮು ಸಾವಧಾನಮ್ ।
ವಯೋಗತೇ ಕಿಂ ವನಿತಾವಿಲಾಸಃ
ಪಯೋಗತೇ ಕಿಂ ಖಲು ಸೇತುಬಂಧಃ ॥ ೧೮೮ ॥

ದೀಪ ಆರಿದ ಮೇಲೆ ಎಣ್ಣೆ ಹಾಕಿದರೇನು ಪ್ರಯೋಜನ? ಕಳ್ಳನು ಕದ್ದುಕೊಂಡು ಓಡಿಹೋದಮೇಲೆ ಎಚ್ಚರಿಕೆ ವಹಿಸುವುದು ವ್ಯರ್ಥ. ವಯಸ್ಸಾದ ಮೇಲೆ ವನಿತೆಯರ ತಂಟೆಯೂ ಕೂಡದು. ನೀರೆಲ್ಲಾ ಹೋದ ಮೇಲೆ ಅಡ್ಡಗಟ್ಟೆ ಕಟ್ಟುವುದೂ ವ್ಯರ್ಥ.

ಪ್ರಥಮೇ ನಾರ್ಜಿತಾ ವಿದ್ಯಾ ದ್ವಿತೀಯೇ ನಾರ್ಜಿತಂ ಧನಮ್ ।
ತೃತೀಯೇ ನ ತಪಸ್ತಪ್ತಂ ಚತುರ್ಥೇ ಕಿಂ ಕರಿಷ್ಯಸಿ ॥ ೧೮೯ ॥

ಎಪ್ಪತ್ತಾರು ವರ್ಷದ ವೃದ್ಧನೊಬ್ಬನನ್ನು ಕುರಿತು ಹೇಳುವ ಮಾತು. ಮೊದಲನೆಯ ವಯಸ್ಸಿನಲ್ಲಿ (೧-೨೫) ವಿದ್ಯೆಯನ್ನು ಕಲಿಯಲಿಲ್ಲ, ದ್ವಿತೀಯ ವಯಸ್ಸಿನಲ್ಲಿ (೨೫-೫೦) ಧನವನ್ನು ಸಂಪಾದಿಸಲಿಲ್ಲ, ತೃತೀಯ ವಯಸ್ಸಿನಲ್ಲಿ (೫೦-೭೫) ತಪಸ್ಸನ್ನು ಆಚರಿಸಲಿಲ್ಲ, ಈಗ ನಾಲ್ಕನೆಯ ವಯಸ್ಸಿನಲ್ಲಿ ವೃದ್ಧನಾಗಿರುವಾಗ ಏನು ಮಾಡುವೆ? ಏನೂ ಆಗುವುದಿಲ್ಲ, ಸುಮ್ಮನಿರು. ಯಾವ ಕಾರ್ಯಕ್ಕೂ ಒಂದು ವಯೋಮಿತಿಯುಂಟು. ಇದನ್ನೇ ಮಹಾಕವಿ ಕಾಳಿದಾಸನು 'ಯಥಾಕಾಲಪ್ರಬೋಧಿನಾಂ' ಎಂದು ಹೇಳಿರುವುದು.

ಪ್ರಯೋಜನಮನುದ್ದಿಶ್ಯ ನ ಮಂದೋऽಪಿ ಪ್ರವರ್ತತೇ ।
ಕರಿಷ್ಯತಿ ವಿನಾ ಲಾಭಂ ಕಥಂ ಯತ್ನಂ ಕೃತೀ ನರಃ ॥ ೧೯೦ ॥

ಪ್ರಯೋಜನವಿಲ್ಲದೆ ಮೂರ್ಖನೂ ಕೂಡ ಯಾವ ಕೆಲಸವನ್ನೂ ಮಾಡುವುದಿಲ್ಲ, ಹೀಗಿರುವಾಗ ಜಾಣನಾದವನು ಲಾಭವಿಲ್ಲದೆ ಏನಾದರೂ

ಕೆಲಸವನ್ನು ಮಾಡಿಯಾನೇ? (ಚಾಣಕ್ಯನಂತಹವರು ಪ್ರಯೋಜನವಿಲ್ಲದೆ ಕನಸಿನಲ್ಲೂ ಪ್ರಯತ್ನಿಸುವುದಿಲ್ಲ.)

ನ ವಿದ್ಯಾ ಕಾರಣಂ ಪುಂಸಾಂ ದೈವಮೇವಾತ್ರ ಕಾರಣಮ್ ।
ಪಾಷಾಣಸ್ಯ ಕುತೋ ವಿದ್ಯಾ ಕೇನ ದೇವತ್ವಮಾಪ್ನುಯಾತ್ ॥ ೧೯೧

ಭೋಗ ಸುಖ ವೈಭವಾದಿಗಳನ್ನು ಪಡೆಯಲು ವಿದ್ಯೆಯೇನೂ ಬೇಕಿಲ್ಲ. ಅದೃಷ್ಟವೇ ಕಾರಣ. ಕಲ್ಲಿಗೆ ವಿದ್ಯೆಯೆಲ್ಲಿಂದ ಬಂತು? ಆದರೂ ದೇವರಾಗಿ ಪೂಜಿಸಲ್ಪಡುತ್ತದೆ. (ನೆಲದ ಮೇಲೆ ಹಾಸಲ್ಪಟ್ಟ ಎಷ್ಟೋ ಕಲ್ಲುಗಳಿಗೆ ನಿರಂತರ ಪಾದಸೇವೆಯಾಗುತ್ತಿರುತ್ತದೆ. ದೇವರಂತೆ ಪೂಜಿಸಲ್ಪಡುವ ಕಲ್ಲುಗಳಾಗುವುದಕ್ಕೆ ದೈವಬಲವೊಂದಿದ್ದರೆ ಸಾಕು. ವಿದ್ಯೆಯೇ ಬೇಡ.)

ಪ್ರಾಪ್ತವ್ಯಮರ್ಥಂ ಲಭತೇ ಮನುಷ್ಯೋ
ದೇವೋಽಪಿ ತಂ ಲಂಘಯಿತುಂ ನ ಶಕ್ತಃ ।
ತಸ್ಮಾನ್ನ ಶೋಚಾಮಿ ನ ವಿಸ್ಮಯೋ ಮೇ
ಯದಸ್ಮದೀಯಂ ನ ಹಿ ತತ್ಪರೇಷಾಮ್ ॥ ೧೯೨ ॥

"ಪಡೆಯಬೇಕಾದಷ್ಟು ಧನವನ್ನು ಮನುಷ್ಯನು ಪಡೆದೇ ಪಡೆಯುತ್ತಾನೆ. ಇದನ್ನು ಮೀರಲು ದೇವರಿಗೂ ಸಾಧ್ಯವಿಲ್ಲ. ಆದುದರಿಂದ ನಮ್ಮ ವಸ್ತುವು ಎಂದಿಗೂ ಪರರದಾಗುವುದೆಂದು ನಾನು ಚಿಂತಿಸುವುದಿಲ್ಲ, ಆಶ್ಚರ್ಯಪಡುವುದೂ ಇಲ್ಲ" ಎಂದು ಒಬ್ಬ ವಿವೇಕಿಯು ಹೇಳುತ್ತಾನೆ.

ಖಲ್ವಾಟೋ ದಿವಸೇಶ್ವರಸ್ಯ ಕಿರಣೈಸ್ಸಂತಾಪಿತೋ ಮಸ್ತಕೇ
ವಾಂಛನ್ದೇಶಮನಾತಪಂ ವಿಧಿವಶಾತ್ತಾಲಸ್ಯಮೂಲಂ ಗತಃ ।
ತತ್ರಾಪ್ಯೇಕಫಲೇನ ಮೂರ್ಧ್ನಿ ಪತತಾ ಭಗ್ನಂ ಸಶಬ್ದಂ ಶಿರಃ
ಪ್ರಾಯೋ ಗಚ್ಛತಿ ಯತ್ರ ದೈವಹತಕಸ್ತತ್ರೈವ ಯಾಂತ್ಯಾಪದಃ ॥

ಒಬ್ಬ ಬೊಕ್ಕ ತಲೆಯವನು ಬಿಸಿಲನ್ನು ತಡೆಯಲಾರದೆ ನೆರಳಿರುವ ಜಾಗವನ್ನು ಬಯಸುತ್ತಾ ವಿಧಿವಶದಿಂದ ಒಂದು ತಾಳೆಯ ಮರದ ಬುಡಕ್ಕೆ ಬಂದನು. ಕೂಡಲೆ ಒಂದು ತಾಳೆಯ ಹಣ್ಣು ಅವನ ತಲೆಯ ಮೇಲೆ ಬಿದ್ದು ತಲೆಯು ಒಡೆದುಹೋಯಿತು. ಸಾಮಾನ್ಯವಾಗಿ ಅದೃಷ್ಟಹೀನನು ಹೋದೆಡೆಗೇ ಆಪತ್ತೂ ಹುಡುಕಿಕೊಂಡು ಹೋಗುತ್ತದೆ. (ಇದರಂತೆಯೇ ಅದೃಷ್ಟಶಾಲಿಯನ್ನು ಸಂಪತ್ತೂ ಹುಡುಕಿಕೊಂಡು ಹೋಗುತ್ತದೆಯೆಂದು ಊಹಿಸಬಹುದು)

ಕುಟಿಲಾ ಲಕ್ಷ್ಮೀರ್ಯತ್ರ ಪ್ರಭವತಿ ನ ಸರಸ್ವತೀ ವಸತಿ ತತ್ರ ।
ಪ್ರಾಯಃ ಶ್ವಶ್ರೂಸ್ನುಷಯೋರ್ನ ದೃಶ್ಯತೇ ಸೌಹೃದಂ ಲೋಕೇ ॥ ೧೯೪

ಚಂಚಲಳಾದ ಲಕ್ಷ್ಮಿಯಿರುವ ಕಡೆ ಸ್ಥಿರವಾದ ಸರಸ್ವತಿಯು ಇರುವುದಿಲ್ಲ. ಲೋಕದಲ್ಲಿ ಸಾಮಾನ್ಯವಾಗಿ ಅತ್ತೆ ಸೊಸೆಯರಿಗೆ ಹೊಂದಿಕೆಯಿರುವುದು ವಿರಳ. ಲಕ್ಷ್ಮಿ ಅತ್ತೆ, ಸರಸ್ವತಿ ಸೊಸೆಯೆಂದು ಪ್ರಸಿದ್ಧಿ.

ಪಾತ್ರಾಪಾತ್ರವಿವೇಕೋಽಸ್ತಿ ಧೇನುಪನ್ನಗಯೋರಿವ ।
ತೃಣಾತ್ಸಂಜಾಯತೇ ಕ್ಷೀರಂ ಕ್ಷೀರಾತ್ಸಂಜಾಯತೇ ವಿಷಮ್ ॥ ೧೯೫

ಹಸು ಮತ್ತು ಹಾವಿನ ಹಾಗೆ ಸತ್ಪಾತ್ರ ಅಪಾತ್ರ ಎಂಬ ಭೇದ ಸ್ಪಷ್ಟ. ಹಸುವಿನ ದೇಹದಲ್ಲಿ ಹುಲ್ಲಿನಿಂದ ಹಾಲಾದರೆ, ಹಾವಿನ ದೇಹದಲ್ಲಿ ಹಾಲಿನಿಂದ ವಿಷವು ಹುಟ್ಟುತ್ತದೆ.

ಪುಸ್ತಕೇಷು ಚ ಯಾ ವಿದ್ಯಾ ಪರಹಸ್ತೇಷು ಯದ್ಧನಮ್ ।
ಕಾರ್ಯಕಾಲೇ ಸಮುತ್ಪನ್ನೇ ನ ಸಾ ವಿದ್ಯಾ ನ ತದ್ಧನಮ್ ॥ ೧೯೬

ಪುಸ್ತಕದಲ್ಲಿರುವ ವಿದ್ಯೆಯೂ, ಪರರ ಕೈಯ್ಯಲ್ಲಿರುವ ಧನವೂ ಕೂಡ, ಆವಶ್ಯಕತೆ ಬಂದಾಗ ಒದಗುವುದಿಲ್ಲ.

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಮ್ ।
ಯದಿ ಚೇತ್ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥೧೯೭॥

ಪುಸ್ತಕ, ಸ್ತ್ರೀ, ಧನ ಇವು ಅನ್ಯರ ಕೈಗೆ ಹೋದರೆ ಮತ್ತೆ ಹಿಂದಕ್ಕೆ ಬರುವುದು ಕಷ್ಟ. ಒಂದುವೇಳೆ ಬಂದರೆ, ಪುಸ್ತಕವು ಹರಿದುಹೋಗಿರುತ್ತದೆ. ಸ್ತ್ರೀಯು ಕೆಟ್ಟು ಹೋಗಿರುತ್ತಾಳೆ. ಹಣವು ಚಿಲ್ಲರೆ ಚಿಲ್ಲರೆಯಾಗಿ ಎಂದೋ ಬರುತ್ತದೆ.

ಪಾತ್ರೇ ತ್ಯಾಗೀ ಗುಣೇ ರಾಗೀ ಸಂವಿಭಾಗೀ ಚ ಬಂಧುಷು ।
ಶಾಸ್ತ್ರೇ ಬೋದ್ಧಾ ರಣೇ ಯೋದ್ಧಾ ಪುರುಷಃ ಪಂಚಲಕ್ಷಣಃ ॥ ೧೯೮

ಸತ್ಪಾತ್ರದಲ್ಲಿ ದಾನ ಮಾಡುವುದು, ಗುಣವಂತನ ಬಗ್ಗೆ ಅನುರಾಗ ವಿಡುವುದು ಸಹೋದರರಿಗೆ ಆಸ್ತಿಯನ್ನು ಹಂಚಿಕೊಡುವುದು, ಶಾಸ್ತ್ರವನ್ನು ಬೋಧಿಸುವುದು, ಯುದ್ಧದಲ್ಲಿ ನಿಷ್ಠೆಯಿಂದ ಯುದ್ಧ ಮಾಡುವುದು ಈ ಐದೂ ಪುರುಷನ ಲಕ್ಷಣಗಳು. ಒಂದಾದರೂ ಇಲ್ಲದಿದ್ದರೆ ಪುರುಷನು ಹೇಗಾಗುತ್ತಾನೆ?

ಫ

ಕರ್ತವ್ಯೋಪ್ಯಾಶ್ರಯಃ ಶ್ರೇಯಾನ್ ಫಲಂ ಭಾಗ್ಯಾನುಸಾರತಃ ।
ನೀಲಕಂಠಸ್ಯ ಕಂಠೇಽಪಿ ವಾಸುಕಿರ್ವಾಯುಭಕ್ಷಕಃ ॥ ೧೯೯ ॥

ನಮಗೆ ತಿಳಿದಮಟ್ಟಿಗೆ ಉತ್ತಮರನ್ನು ಆಶ್ರಯಿಸಬೇಕು. ಫಲವು ನಮ್ಮ ಭಾಗ್ಯಕ್ಕೆ ತಕ್ಕಂತೆ ಒದಗುವುದು. ವಾಸುಕಿಯು ಈಶ್ವರನ ಕೊರಳಿನಲ್ಲಿದ್ದರೂ ಅವನಿಗೆ ಗಾಳಿಯೇ ಆಹಾರ. ಈಶ್ವರನೇ ಭಿಕ್ಷೆ ಎತ್ತುತ್ತಾನೆಯೆಂದು ಕಲ್ಪನೆ.

ಬ

ಸ್ವಯಂ ಮಹೇಶಃ ಶ್ವಶುರೋ ನಗೇಶಃ
ಸಖಾ ಧನೇಶಸ್ತನಯೋ ಗಣೇಶಃ ।
ತಥಾಪಿ ಭಿಕ್ಷಾಟನಮೇವ ಶಂಭೋಃ
ಬಲೀಯಸೀ ಕೇವಲಮೀಶ್ವರೇಚ್ಛಾ ॥ ೨೦೦ ॥

ಶಂಭುವು ಸ್ವಯಂ ಮಹೇಶ, ಮಾವನು ಪರ್ವತೇಶ, ತನಯನು ಗಣೇಶ, ಸ್ನೇಹಿತನು ಧನೇಶನಾದ ಕುಬೇರನು. ಆದರೂ ಭಿಕ್ಷೆ ಬೇಡುವುದು ತಪ್ಪಲಿಲ್ಲ ಎಂದರೆ ಈಶ್ವರೇಚ್ಛೆಯೇ ಬಲವಾದದ್ದು ಎಂದು ಹೇಳಬೇಕು. ಇಲ್ಲಿ ಈಶ್ವರ ಎಂದರೆ 'ವಿಧಿ'ಯೆಂದು ತಿಳಿಯಬೇಕು.

ವಹ್ನೌ ವಿಶುದ್ಧಾಮಪಿ ಜಾನಕೀಂ ತಾಂ
ಜಹೌ ವನಾಂತೇ ಕಿಲ ರಾಮಚಂದ್ರಃ ।
ಸಾ ಕಿಂ ನ ಶುದ್ಧಾ ಸ ಚ ಕಿಂ ನ ವೇತ್ತಾ
ಬಲೀಯಸೀ ಕೇವಲಮೀಶ್ವರೇಚ್ಛಾ ॥ ೨೦೧ ॥

ಅಗ್ನಿಯಲ್ಲಿ ಶುದ್ಧವಾಗಿದ್ದರೂ ಸೀತಾದೇವಿಯನ್ನು ಶ್ರೀರಾಮಚಂದ್ರನು ವನಾಂತದಲ್ಲಿ ಬಿಟ್ಟುಬಿಟ್ಟನು. ಅವಳು ಶುದ್ಧಳಾಗಿರಲಿಲ್ಲವೇ? ಅಥವಾ ರಾಮನಿಗೆ ತಿಳುವಳಿಕೆಯಿರಲಿಲ್ಲವೇ? ಕೇವಲ ಈಶ್ವರೇಚ್ಛೆಯೇ ಕಾರಣ. ಅದೇ ಬಲವಾದದ್ದು.

ಆಪ್ತದ್ವೇಷಾದ್ಭವೇನ್ಮೃತ್ಯುಃ ಪರದ್ವೇಷಾದ್ಧನಕ್ಷಯಃ ।
ರಾಜದ್ವೇಷಾದ್ಭವೇನ್ನಾಶೋ ಬ್ರಹ್ಮದ್ವೇಷಾತ್ಕುಲಕ್ಷಯಃ ॥ ೨೦೨ ॥

ಆಪ್ತರಲ್ಲಿ ದ್ವೇಷ ಕಟ್ಟಿಕೊಂಡರೆ ಪ್ರಾಣಕ್ಕೆ ಸಂಚಕಾರ, ಪರದ್ವೇಷದಿಂದ ಧನನಾಶ, ರಾಜದ್ವೇಷದಿಂದ ಸರ್ವನಾಶ. ಬ್ರಹ್ಮದ್ವೇಷದಿಂದ ಕುಲವೇ ನಾಶವಾಗುವುದು.

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನಾವಿವಿಕ್ತಾಸನೋ ಭವೇತ್ ।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥ ೨೦೩ ॥

ತಾಯಿಯಾಗಲೀ ತಂಗಿಯಾಗಲೀ ಮಗಳಾಗಲೀ ಏಕಾಂತಸ್ಥಲದಲ್ಲಿ ಇವರ ಸಂಗಡ ಕುಳಿತುಕೊಳ್ಳಬಾರದು. ಇಂದ್ರಿಯಗಳ ಸಮೂಹವು ಬಲಿಷ್ಠವಾದುದು. ವಿದ್ವಾಂಸನನ್ನೂ ತನ್ನ ಬಲೆಗೆ ಹಾಕಿಕೊಂಡುಬಿಡುತ್ತದೆ.

ದುರ್ಬಲಸ್ಯ ಬಲಂ ರಾಜಾ ಬಾಲಾನಾಂ ರೋದನಂ ಬಲಮ್ ।
ಬಲಂ ಮೂರ್ಖಸ್ಯ ಮೌನಿತ್ವಂ ಚೋರಾಣಾಮನೃತಂ ಬಲಮ್ ॥ ೨೦೪ ॥

ಸ್ವತಃ ಬಲವಿಲ್ಲದವನಿಗೆ ರಾಜನೇ ಬಲ. ಬಾಲಕರಿಗೆ ಅಳುವೇ ಬಲ. ಮೂರ್ಖನಿಗೆ ಮಾತಾಡದಿರುವುದೇ ಬಲ. ಕಳ್ಳರಿಗೆ ಸುಳ್ಳೇ ಬಲ.

ಅಸ್ಮಾಕಂ ಬದರೀಚಕ್ರಂ ಯುಷ್ಮಾಕಂ ಬದರೀತರುಃ ।
ಬಾದರಾಯಣಸಂಬಂಧಾದ್ಯೂಯಂ ಯೂಯಂ ವಯಂ ವಯಮ್

ಒಬ್ಬ ಗೃಹಸ್ಥನು ಒಂದು ಹಳ್ಳಿಯಲ್ಲಿ ಎಳಚೀ ಮರವಿರುವ ಗೃಹಸ್ಥನ ಮನೆಗೆ ಬಂದು ''ನಿಮ್ಮ ಸಂಬಂಧಿಯೆಂದೂ ಊಟಹಾಕಬೇಕೆಂದೂ'' ಕೇಳಿಕೊಂಡನು. ಎತ್ತಿನ ಬಂಡಿಯಿಂದ ಬಂದಿದ್ದನು. ಮಧ್ಯಾಹ್ನಕಾಲವಾದುದರಿಂದ ಗೃಹಸ್ಥನು ಸಂಬಂಧವನ್ನು ಸರಿಯಾಗಿ ವಿಚಾರಿಸದೆ ಭೋಜನ ಮಾಡಿಸಿ ಆಮೇಲೆ ಸಂಬಂಧವನ್ನು ಕೇಳಲು ಆತ ಹೀಗೆ ಹೇಳಿದನು— ''ಸ್ವಾಮಿ, ನನ್ನ ಬಂಡಿಯ ಚಕ್ರವು ಎಳಚೀ ಮರದಿಂದ ಮಾಡಲ್ಪಟ್ಟಿದೆ. ನಿಮ್ಮ ಮನೆಯ ಮುಂದೆ ಎಳಚೀ ಮರವಿದೆ. ಎಳಚಿಗೆ ಸಂಸ್ಕೃತದಲ್ಲಿ ಬದರೀ ಎಂದು ಹೆಸರು. ಅದರಿಂದ ಹುಟ್ಟಿದ್ದು ಬಾದರಾಯಣ. ನನಗೂ ನಿಮಗೂ ಬಾದರಾಯಣ ಸಂಬಂಧ. ವಸ್ತುತಃ ನಾವು ನಾವೇ, ನೀವು ನೀವೇ, ತುಂಬ ವಂದನೆ ''ಎಂದು ಹೇಳಿ ಗಾಡಿಕಟ್ಟಿಕೊಂಡು ಹೊರಟನಂತೆ. ಈಗಿನ ಕಾಲದಲ್ಲಿ ಆಸ್ತಿಗೆ ಹಕ್ಕುದಾರರಾಗಿ ಹೀಗೂ ಜನರು ಬರುತ್ತಾರೆ.

ಏಕಂ ಹನ್ಯಾನ್ನ ಹನ್ಯಾದ್ವಾ ಶರೋ ಮುಕ್ತೋ ಧನುಷ್ಮತಾ ।
ಬುದ್ಧಿರ್ಬುದ್ಧಿಮತೋತ್ಸೃಷ್ಟಾ ಹನ್ಯಾದ್ರಾಷ್ಟ್ರಂ ಸರಾಜಕಮ್ ॥೨೦೬॥

ಧನುಸ್ಸಿನಿಂದ ಬಿಡಲ್ಪಟ್ಟ ಬಾಣವು ಒಬ್ಬನನ್ನು ಕೊಂದರೂ ಕೊಲ್ಲಬಹುದು, ಕೊಲ್ಲದಿದ್ದರೂ ಇರಬಹುದು. ಆದರೆ ಬುದ್ಧಿವಂತನು ಬಿಟ್ಟ ಬುದ್ಧಿಯೆಂಬ ಬಾಣವು ರಾಜನ ಸಮೇತ ರಾಷ್ಟ್ರವನ್ನೇ ನಾಶಮಾಡಬಲ್ಲದು. ಚಾಣಕ್ಯನಂತಹವರು ಇದಕ್ಕೆ ಉದಾಹರಣೆ.

ಜಾಗರ್ತಿ ಲೋಕೋ ಜ್ವಲತಿ ಪ್ರದೀಪಃ
ಸಖೀಜನಃ ಪಶ್ಯತಿ ಕೌತುಕಂ ಮೇ ।
ಮುಹೂರ್ತಮಾತ್ರಂ ಕುರು ಕಾಂತ ಧೈರ್ಯಂ
ಬುಭುಕ್ಷಿತಃ ಕಿಂ ದ್ವಿಕರೇಣ ಭುಂಕ್ತೇ ॥ ೨೦೭ ॥

ಒಬ್ಬ ಕಾಮಾತುರನನ್ನು ಕುರಿತು ಅವನ ಪ್ರೇಯಸಿಯು ಹೇಳುವ ಮಾತು—ಎಲೈ ಪ್ರಿಯನೇ, ಆತುರಪಡಬೇಡ. ಜನಗಳಿನ್ನೂ ಎದ್ದಿದ್ದಾರೆ. ದೀಪವು ಉರಿಯುತ್ತಿದೆ. ನನ್ನ ಸಖಿಯರು ಕುತೂಹಲದಿಂದ ತಮಾಷೆಯನ್ನು ನೋಡುತ್ತಿದ್ದಾರೆ. ಒಂದು ಮುಹೂರ್ತ ತಾಳು. ಹಸಿವಾಗಿದೆ ಎಂದು ಎರಡು ಕೈಗಳಿಂದಲೂ ಊಟ ಮಾಡುತ್ತಾರೆಯೇ ?

ಭ

ಭವಿತವ್ಯಂ ಭವತ್ಯೇವ ನಾರಿಕೇಲಫಲಾಂಬುವತ್ ।
ಗಂತವ್ಯಂ ಗತಮಿತ್ಯಾಹುರ್ಗಜಭುಕ್ತಕಪಿತ್ಥವತ್ ॥ ೨೦೮ ॥

ತೆಂಗಿನಕಾಯಿಯೊಳಗೆ ನೀರು ಬರುವಂತೆ, ನಮಗೆ ಭಾಗ್ಯವು ಬರುವ ಯೋಗವಿದ್ದರೆ ಬಂದೇ ಬರುತ್ತದೆ. ಗಜ ಎಂಬ ಕ್ರಿಮಿಯು ಒಳಗೇ ತಿಂದು ಬರಿದು ಮಾಡಿದ ಬೇಲದ ಹಣ್ಣಿನಂತೆ, ಹೋಗಬೇಕಾಗಿದ್ದರೆ ಇದ್ದಕಡೆಯೇ ಹೋಗುವುದು. ಇಲ್ಲಿ 'ಗಜ' ಎಂದರೆ ಆನೆಯಲ್ಲ, ಒಂದು ಜಾತಿಯ ಕ್ರಿಮಿ.

ಭಿಕ್ಷೋ ಮಾಂಸನಿಷೇವಣಂ ಕಿಮುಚಿತಂ ಕಿಂ ತೇನ ಮದ್ಯಂ ವಿನಾ
ಮದ್ಯಂ ಚಾಪಿ ತವ ಪ್ರಿಯಂ, ಪ್ರಿಯಮಹೋ ವಾರಾಂಗನಾಭಿಸ್ಸಹ ।
ವಾರಸ್ತ್ರೀರತಯೇ ಕುತಸ್ತವ ಧನಂ ದ್ಯೂತೇನ ಚೌರ್ಯೇಣ ವಾ
ಚೌರ್ಯದ್ಯೂತಪರಿಶ್ರಮೋಽಪಿ ಭವತೋ ಭ್ರಷ್ಟಸ್ಯ ಕಾ ವಾ ಗತಿಃ ॥

ಒಬ್ಬ ಕಪಟ ಸನ್ಯಾಸಿಯು ಮಾಂಸವನ್ನು ಕೊಳ್ಳುತ್ತಿದ್ದನು. ಅವನನ್ನು ನೋಡಿ ಒಬ್ಬನು ''ಭಿಕ್ಷುವೇ ನೀನು ಮಾಂಸ ತಿನ್ನುವುದು ಸರಿಯೇ?'' ಎಂದು ಕೇಳಲು ''ಮದ್ಯವಿಲ್ಲದ ಬರಿಯ ಮಾಂಸದಿಂದೇನು ಪ್ರಯೋಜನ?'' ಎಂದನು. ''ಮದ್ಯವೂ ಇಷ್ಟವೇ?'' ಎಂದಾಗ ''ವೇಶ್ಯಾಸ್ತ್ರೀಯರು ಸಂಗಡವಿದ್ದರೆ ಇಷ್ಟ'' ಎಂದನು. ''ವೇಶ್ಯೆಯರಿಗೆ ಕೊಡಲು ಹಣವೆಲ್ಲಿಂದ ಬರುತ್ತದೆ?'' ಎಂದಾಗ ''ಜೂಜು ಅಥವಾ ಕಳ್ಳತನದಿಂದ'' ಎಂದನು. ''ಜೂಜು ಕಳ್ಳತನಗಳ ಪರಿಚಯವೂ ಇದೆಯೇ'' ಎಂದಾಗ, ''ಭ್ರಷ್ಟನಿಗೆ ಬೇರೆ ದಾರಿ ಯಾವುದುಂಟು?''ಎಂದನು ಹೀಗೆಯೇ ಸಮಾಜವು ಕೆಡುತ್ತಿರುವುದು. ಒಂದು ದುರಭ್ಯಾಸಕ್ಕೂ ಇನ್ನೊಂದಕ್ಕೂ ನಂಟಿರುತ್ತದೆ.

ಋಣಕರ್ತಾ ಪಿತಾ ಶತ್ರುಃ ಮಾತಾ ಚ ವ್ಯಭಿಚಾರಿಣೀ ।
ಭಾರ್ಯಾ ರೂಪವತೀ ಶತ್ರುಃ ಪುತ್ರಶ್ಶತ್ರುರಪಂಡಿತಃ ॥ ೨೧೦ ॥

ಸಾಲ ಮಾಡಿದ ತಂದೆ, ವ್ಯಭಿಚಾರ ಮಾಡಿದ ತಾಯಿ, ರೂಪವತಿಯಾದ ಹೆಂಡತಿ, ಅವಿದ್ಯಾವಂತನಾದ ಮಗ ಇವರು ಶತ್ರುಗಳಾಗುತ್ತಾರೆ.

ಭಾಗ್ಯವಂತಂ ಪ್ರಸೂಯೇಥಾ ಮಾ ಶೂರಂ ಮಾ ಚ ಪಂಡಿತಮ್ ।
ಶೂರಾಶ್ಚ ಕೃತವಿದ್ಯಾಶ್ಚ ಮಮ ಪುತ್ರಾ ವನಂ ಗತಾಃ ॥ ೨೧೧ ॥

ನಮಸ್ಕಾರ ಮಾಡಿದ ಗರ್ಭಿಣಿಗೆ ಕುಂತಿಯ ಆಶೀರ್ವಚನ ಹೀಗಿತ್ತು. ಭಾಗ್ಯಶಾಲಿಯಾದ ಮಗನಿಗೆ ಜನ್ಮ ಕೊಡು. ಅವನು ಶೂರನಾಗುವುದೂ

ಬೇಡ, ಪಂಡಿತನಾಗುವುದೂ ಬೇಡ. ಶೂರರೂ ವಿದ್ವಾಂಸರೂ ಆದ ನನ್ನ ಪುತ್ರರು ಭಾಗ್ಯಹೀನರಾದುದರಿಂದ ಅರಣ್ಯದ ಪಾಲಾದರು.

ಭಾರತೇ ಸಾರ ಉದ್ಯೋಗಃ ತತ್ರಾಪಿ ವಿದುರೋಕ್ತಯಃ ।
ಸನತ್ಸುಜಾತಂ ತತ್ರಾಪಿ ತತ್ರ ಶ್ಲೋಕಚತುಷ್ಟಯಮ್ ॥ ೨೧೨ ॥

ಮಹಾಭಾರತದಲ್ಲಿ ಉದ್ಯೋಗಪರ್ವವು ಸಾರಭೂತವಾದದ್ದು. ಅದರಲ್ಲೂ ವಿದುರನ ಮಾತುಗಳು. ಅದರಲ್ಲೂ ಸನತ್ಸುಜಾತರ ಮಾತು. ಅದರಲ್ಲೂ ನಾಲ್ಕು ಶ್ಲೋಕಗಳು.

ಅಥಾಂಗರಾಜಾದವತಾರ್ಯ ಚಕ್ಷು-
ರ್ಯಾಹೀತಿ ಜನ್ಯಾಮವದತ್ಕುಮಾರೀ ।
ನಾಸೌ ನ ಕಾಮ್ಯೋ ನ ಚ ವೇದ ಸಮ್ಯಕ್
ದ್ರಷ್ಟುಂ ನ ಸಾ ಭಿನ್ನರುಚಿರ್ಹಿ ಲೋಕಃ ॥ ೨೧೩ ॥

ಇಂದುಮತಿಯು ಅಂಗರಾಜನನ್ನು ನೋಡಿದಮೇಲೆ ದೃಷ್ಟಿಯನ್ನು ಬೇರೆ ಕಡೆ ತಿರುಗಿಸಿ ಸಖಿಗೆ 'ಮುಂದೆ ಸಾಗು' ಎಂದಳು. ಅಂಗರಾಜನು ಚೆನ್ನಾಗಿಯೂ ಇದ್ದನು. ಇವಳಿಗೆ ಒರೆಹಚ್ಚುವ ಕಲೆಯೂ ಗೊತ್ತಿತ್ತು. ಆದರೂ ಒಪ್ಪಿಗೆಯಾಗಲಿಲ್ಲವೆಂದರೆ ಲೋಕವು (ಜನವು) ಭಿನ್ನ ರುಚಿಯುಳ್ಳದ್ದು. ಇವಳಿಗೆ ಹಿಡಿಸಲಿಲ್ಲ ಅಷ್ಟೆ. 'ಲೋಕೋ ಭಿನ್ನರುಚಿಃ' ಎಂದು ಇದು ಗಾದೆಯಾಗಿದೆ.

ಪ್ರತಿಕ್ಷಣೇ ಮೃತ್ಯುಹರಂ ನಿಜಾಯು-
ರ್ನ ವೇದ ಮೂಢೋ ವಿಷಯೇಷು ಸಕ್ತಃ ।
ಭೇಕೋ ಯಥಾ ವ್ಯಾಲಮುಖೇ ಪ್ರವಿಷ್ಟಃ
ಸ ಮಕ್ಷಿಕಾಂ ದ್ವೇಷ್ಟಿ ವಿನಷ್ಟಬುದ್ಧಿಃ ॥ ೨೧೪ ॥

ಪ್ರತಿಕ್ಷಣದಲ್ಲೂ ಮೃತ್ಯುವು ಆಯುಸ್ಸನ್ನು ಅಪಹರಿಸುತ್ತಿರುತ್ತದೆ.

ಭೋಗಾಸಕ್ತನಾದ ಮೂರ್ಖನು ಗಮನಿಸುವುದಿಲ್ಲ. ಹಾವಿನ ಬಾಯೊಳಗೆ ಬಿದ್ದಿರುವ ಕಪ್ಪೆಯು ನೊಣವನ್ನು ತಿನ್ನಲು ಪ್ರಯತ್ನಿಸುತ್ತದೆ.

ಮಂತ್ರಹೀನಾ ತು ಯಾ ಸಂಧ್ಯಾ ತಿಲಹೀನಂ ತು ತರ್ಪಣಮ್ ।
ಸಂಕಲ್ಪೇನ ವಿನಾ ಕರ್ಮ ಭೋಜನಂ ದಕ್ಷಿಣಾಂ ವಿನಾ ॥ ೨೧೫ ॥

ಮಂತ್ರವಿಲ್ಲದ ಸಂಧ್ಯಾಕಾರ್ಯ, ಎಳ್ಳಿಲ್ಲದ ತರ್ಪಣ, ಸಂಕಲ್ಪ ರಹಿತ ಕರ್ಮ, ದಕ್ಷಿಣಾರಹಿತ ಭೋಜನ ಸಾರ್ಥಕವಾಗುವುದಿಲ್ಲ.

ಮ

ಮನೋ ಮಧುಕರೋ ಮೇಘೋ ಮಾನಿನೀ ಮದನೋ ಮರುತ್ ।
ಮಾ ಮದೋ ಮರ್ಕಟೋ ಮತ್ಸ್ಯೋ ಮಕಾರಾ ದಶ ಚಂಚಲಾಃ ॥

ಮನಸ್ಸು, ದುಂಬಿ, ಮೋಡ, ಸ್ತ್ರೀ, ಮನ್ಮಥ, ಗಾಳಿ, ಲಕ್ಷ್ಮೀ, ಮದ, ಮರ್ಕಟ, ಮೀನು ಈ ಹತ್ತು ಮಕಾರಗಳೂ ಚಂಚಲವಾದುವುಗಳು.

ಮನೋ ಹಿ ಹೇತುಸ್ಸರ್ವೇಷಾಮ್ ಇಂದ್ರಿಯಾಣಾಂ ಪ್ರವರ್ತನೇ ।
ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಮ್ ॥ ೨೧೭ ॥

ಇಂದ್ರಿಯಗಳು ಒಳ್ಳೆಯ ಅಥವಾ ಕೆಟ್ಟ ಕೆಲಸಗಳಲ್ಲಿ ತೊಡಗಲು ಮನಸ್ಸು ಮುಖ್ಯವಾಗಿರುತ್ತದೆ. ಎಲ್ಲ ಇಂದ್ರಿಯಗಳಲ್ಲಿ ಮನಸ್ಸೇ ಮುಖ್ಯ ವಾದುದು. ಅದು ನನ್ನ ಹಿಡಿತದಲ್ಲಿದೆ ಎಂದು ಆಂಜನೇಯಸ್ವಾಮಿಯು, ರಾತ್ರಿಯಲ್ಲಿ ಸ್ತ್ರೀಯರನ್ನು ನೋಡಿದಮೇಲೆ ಹೇಳಿಕೊಂಡಿರುತ್ತಾನೆ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಕ್ತಂ ಮೋಕ್ಷೇ ನಿರ್ವಿಷಯಂ ಮನಃ ॥೨೧೮॥

ಜೀವಿಯ ಬಂಧಮೋಕ್ಷಗಳಿಗೆ ಮನಸ್ಸೇ ಕಾರಣ. ವಿಷಯಸುಖಗಳಿಗೆ ವಶವಾದರೆ ಬಂಧನ. ಅದರಿಂದ ದೂರವಿದ್ದರೆ ಮೋಕ್ಷ. ವಿಷಯ ವೆಂದರೆ ರೂಪರಸಾದಿಗಳು.

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್ ।
ಶಾಸ್ತ್ರಪೂತಂ ವದೇದ್ವಾಣೀಂ ಮನಃಪೂತಂ ಸಮಾಚರೇತ್ ॥ ೨೧೯ ॥

ಕಣ್ಣುಗಳಿಂದ ನೋಡಿ ಶುದ್ಧವಾಗಿರುವ ಸ್ಥಳದಲ್ಲಿ ಹೆಜ್ಜೆಯನ್ನಿಡಬೇಕು. ವಸ್ತ್ರದಿಂದ ಶೋಧಿಸಲ್ಪಟ್ಟ ನೀರನ್ನು ಕುಡಿಯಬೇಕು. ವ್ಯಾಕರಣಶಾಸ್ತ್ರದಿಂದ ಶುದ್ಧವಾದ ಮಾತನ್ನು ಆಡಬೇಕು. ಮನಸ್ಸಿಗೆ ಒಪ್ಪಿಗೆಯಾಗುವಂತೆ ಧರ್ಮ ಕಾರ್ಯದಲ್ಲಿ ನಡೆಯಬೇಕು.

ಶ್ರುತಿರ್ವಿಭಿನ್ನಾಃ ಸ್ಮೃತಯಶ್ಚ ಭಿನ್ನಾಃ
ನೈಕೋ ಮುನಿರ್ಯಸ್ಯ ವಚಃ ಪ್ರಮಾಣಮ್ ।
ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನ ಗತಃ ಸ ಪಂಥಾಃ ॥ ೨೨೦ ॥

ಶ್ರುತಿಗಳು ಬೇರೆಬೇರೆ. ಸ್ಮೃತಿಗಳೂ ಹಾಗೆಯೇ. ಋಷಿಗಳು ಒಬ್ಬರಲ್ಲ. ಯಾರ ಮಾತನ್ನು ನಂಬೋಣ? ಆದುದರಿಂದ ಮಹಾಜನರು ಹೋದ ಮಾರ್ಗದಲ್ಲೇ ನಾವೂ ಹೋದರಾಯಿತು. ಧರ್ಮದ ಸ್ವರೂಪ ವನ್ನು ತಿಳಿದವರು ಯಾರೂ ಇಲ್ಲ.

ಮರಣಾಂತಾನಿ ವೈರಾಣಿ ನಿವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥ ೨೨೧

ರಾವಣನಿಗೆ ಸಂಸ್ಕಾರ ಮಾಡುವುದಿಲ್ಲವೆಂದು ವಿಭೀಷಣನು ಹೇಳಿ ದಾಗ ರಾಮನು ಹೇಳುವ ಮಾತಿದು. ''ವಿಭೀಷಣ, ವೈರಕ್ಕೆ ಮರಣವೇ ಅಂತ. ಸತ್ತಮೇಲೆ ದ್ವೇಷ ಸಾಧಿಸಬಾರದು. ನಾನು ಮಾಡಬೇಕಾಗಿದ್ದ ಕೆಲಸ

ವಾಯಿತು. ನನ್ನ ಕಾರ್ಯಸಿದ್ಧಿಯಾಯಿತು. ಈಗ ನೀನು ಹಕ್ಕುದಾರ. ಅಂತ್ಯ ಸಂಸ್ಕಾರ ಮಾಡಬೇಕಾಗಿದೆ. ನನಗೆ ಈಗ ರಾವಣ ನೀನು ಇಬ್ಬರೂ ನನ್ನವರೇ.

ಮರ್ಕಟಸ್ಯ ಸುರಾಪಾನಂ ತತೋ ವೃಶ್ಚಿಕದಂಶನಮ್ ।
ತನ್ಮಧ್ಯೇ ಭೂತಸಂಚಾರೋ ಯದ್ವಾ ತದ್ವಾ ಭವಿಷ್ಯತಿ ॥ ೨೨೨ ॥

ಮೊದಲೇ ಕೋತಿ, ಅದರ ಮೇಲೆ ಮದ್ಯಪಾನ, ಅನಂತರ ಚೇಳು ಕುಟುಕುವುದು. ಇದರ ಮೇಲೆ ಪಿಶಾಚಿಯೂ ಹಿಡಿದುಬಿಟ್ಟರೆ ಅದರ ಸ್ಥಿತಿಯು ಊಹಿಸಲಸಾಧ್ಯ.

ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಮ್ ।
ಮನಸ್ಯನ್ಯದ್ವಚಸ್ಯನ್ಯತ್ಕಾರ್ಯೇ ಚಾನ್ಯದ್ದುರಾತ್ಮನಾಮ್ ॥ ೨೨೩ ॥

ಸಜ್ಜನರ ಸ್ವಭಾವ—ಮನಸ್ಸು ಮಾತು, ಕೆಲಸ ಮೂರರಲ್ಲೂ ಒಂದೇ ವಿಧವಾಗಿರುತ್ತದೆ. ದುರ್ಜನರಿಗಾದರೋ ಮನಸ್ಸಿನಲ್ಲೇ ಬೇರೆ, ಮಾತಿ ನಲ್ಲೇ ಬೇರೆ, ಕೃತಿಯಲ್ಲೇ ಬೇರೆ.

ಅನಾಹೂತಾಃ ಸ್ವಯಂ ಯಾಂತಿ ರಸಾಸ್ವಾದವಿಲೋಲುಪಾಃ ।
ನಿವಾರಿತಾ ನ ಗಚ್ಛಂತಿ ಮಕ್ಷಿಕಾ ಇವ ಭಿಕ್ಷುಕಾಃ ॥ ೨೨೪ ॥

ರಸಾಸ್ವಾದನಕ್ಕೆ ಅಧೀನರಾದವರು ಆಹ್ವಾನವಿಲ್ಲದಿದ್ದರೂ ಒಡಿಸಲ್ಪಟ್ಟರೂ ನೊಣಗಳ ಹಾಗೆ ಮತ್ತೆ ಮತ್ತೆ ಭಿಕ್ಷುಕರು ಬರುತ್ತಿರುತ್ತಾರೆ.

ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ
ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ ।
ಸ ತು ಭವತಿ ದರಿದ್ರೋ ಯಸ್ಯ ತೃಷ್ಣಾ ವಿಶಾಲಾ
ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ ॥೨೨೫

ಇದು ಭರ್ತೃಹರಿಯ ಮಾತು—ಎಲೈ ಸಂಸಾರಾಸಕ್ತನೇ, ನೀನು ರೇಷ್ಮೆ ಬಟ್ಟೆಯುಟ್ಟು ಸಂತೋಷದಿಂದ ಇದ್ದೀಯೆ. ನಾವು ಅನಾಸಕ್ತರು, ನಾರು ಬಟ್ಟೆಗಳಿಂದಲೇ ಸಂತುಷ್ಟರಾಗಿದ್ದೇವೆ. ಒಟ್ಟಿನಲ್ಲಿ ಸಂತೋಷವು ಇಬ್ಬರಿಗೂ ಸಮಾನವಾಗಿದೆ. ವಿಶೇಷವಿಲ್ಲದಿರುವುದೇ ವಿಶೇಷ. ಯಾವನ ಆಸೆಯು ದೊಡ್ಡದೋ ಅವನೇ ದರಿದ್ರನು. ಮನಸ್ಸಿಗೆ ತೃಪ್ತಿಯಾದಮೇಲೆ ಧನಿಕನಿಗೂ, ದರಿದ್ರನಿಗೂ ಭೇದವೇನೂ ಕಾಣಿಸುವುದಿಲ್ಲ.

ಯೇಷಾಂ ನ ವಿದ್ಯಾ ನ ತಪೋ ನ ದಾನಂ
ಜ್ಞಾನಂ ನ ಶೀಲಂ ನ ಗುಣೋ ನ ಧರ್ಮಃ ।
ತೇ ಮರ್ತ್ಯಲೋಕೇ ಭುವಿ ಭಾರಭೂತಾಃ
ಮನುಷ್ಯರೂಪೇಣ ಮೃಗಾಶ್ಚರಂತಿ ॥ ೨೨೬ ॥

ಇದೂ ಭರ್ತೃಹರಿಯ ಮಾತೇ. ಯಾರಿಗೆ ವಿದ್ಯೆ, ತಪಸ್ಸು, ದಾನ, ಜ್ಞಾನ, ಸದ್‌ವೃತ್ತ, ಒಳ್ಳೆಯ ಗುಣ, ಧರ್ಮಬುದ್ಧಿ ಇಲ್ಲವೋ ಅಂತಹವರು ಮನುಷ್ಯಲೋಕದಲ್ಲಿ ಭೂಮಿಗೆ ಭಾರವಾಗಿ ಮನುಷ್ಯರೂಪದ ಮೃಗಗಳಾಗಿ ಓಡಾಡುತ್ತಿರುತ್ತಾರೆ.

ಅಧನಾ ಧನಮಿಚ್ಛಂತಿ ಧನಮಾನೌ ಚ ಮಧ್ಯಮಾಃ ।
ಉತ್ತಮಾ ಮಾನಮಿಚ್ಛಂತಿ ಮಾನೋ ಹಿ ಮಹತಾಂ ಧನಮ್ ॥

ಧನವಿಲ್ಲದವರು ಧನವನ್ನು ಬಯಸುತ್ತಾರೆ. ಮಧ್ಯಮರು ಧನ ಮತ್ತು ಮಾನಗಳನ್ನು ಬಯಸುತ್ತಾರೆ. ಉತ್ತಮರು ಮಾನವನ್ನು ಮಾತ್ರ ಬಯಸುತ್ತಾರೆ. ಮಾನವೇ ಮಹಾತ್ಮರ ಧನ.

ಮುಖವರ್ಜಂ ತು ಗೌಃ ಶುದ್ಧಾ ಮಾರ್ಜಾಲಶ್ಚಾಶ್ರಮೇ ಶುಚಿಃ ।
ಶಯ್ಯಾ ಭಾರ್ಯಾ ಶಿಶೋರ್ವಸ್ತ್ರಮುಪವೀತಂ ಕಮಂಡಲುಃ ॥ ೨೨೮

ಹಸುವಿನ ಹಿಂಭಾಗವು ಶುದ್ಧವಾಗಿರುತ್ತದೆ. ಆಶ್ರಮದಲ್ಲಿರುವ

ಹಾಸಿಗೆ, ಹೆಂಡತಿ, ಮಕ್ಕಳ ಬಟ್ಟೆಗಳು, ಉಪವೀತ, ಕಮಂಡಲು ಮತ್ತು ಅಲ್ಲೇ ವಾಸಿಸುವ ಬೆಕ್ಕೂ ಶುದ್ಧವಾಗಿರುತ್ತವೆ.

ಮುಖ್ಯಮೇಕಂ ಪುರಸ್ಕೃತ್ಯ ಶೂನ್ಯಾತ್ಮಾನೋಽಪಿ ಸಾಧಕಾಃ ।
ಭವಂತಿ ತಂ ವಿನಾ ನೈವ ಯಥಾಸಂಖ್ಯಾಂಕಬಿಂದವಃ ॥ ೨೭ ॥

ಲೋಕದಲ್ಲಿ ಮುಖ್ಯನನ್ನು ಮುಂದಿಟ್ಟುಕೊಂಡು ಅಮುಖ್ಯರೂ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ. ಹಾಗೆಯೇ ಗೌರವ ಮತ್ತು ಬೆಲೆಯನ್ನು ಪಡೆಯುತ್ತಾರೆ. ಸಂಖ್ಯೆಗಳನ್ನು ಎಣಿಸುವಾಗ ಬರೀ ಸೊನ್ನೆಗೆ ಬೆಲೆಯಿಲ್ಲ. ಪಕ್ಕದಲ್ಲಿ ಒಂದು ಸಂಖ್ಯೆ ಇದ್ದರೆ ಸಾಕು ಇದಕ್ಕೂ ಬಂತು ಬೆಲೆ.

ರೇ ರೇ ಚಾತಕ, ಸಾವಧಾನಮನಸಾ ಮಿತ್ರ ಕ್ಷಣಂ ಶ್ರೂಯತಾಂ
ಅಂಭೋದಾ ಬಹುಧಾ ಭವಂತಿ ಗಗನೇ ಸರ್ವೇಽಪಿ ನೈತಾದೃಶಾಃ ।
ಕೇಚಿದ್ವೃಷ್ಟಿಭಿರಾರ್ದ್ರಯಂತಿ ವಸುಧಾಂ ಗರ್ಜಂತಿ ಕೇಚಿತ್ ವೃಥಾ
ಯಂ ಯಂ ಪಶ್ಯಸಿ ತಸ್ಯ ತಸ್ಯ ಪುರತೋ ಮಾ ಬ್ರೂಹಿ ದೀನಂ ವಚಃ ॥

ಇದೊಂದು ಅನ್ಯೋಕ್ತಿ. ಚಾತಕವನ್ನು ಗುರಿ ಮಾಡಿಕೊಂಡು ಒಬ್ಬ ಯಾಚಕನಿಗೆ ಹೇಳುವ ಹಿತವಚನ. ಎಲೈ ಮಿತ್ರನಾದ ಚಾತಕನೇ! ಎಚ್ಚರಿಕೆಯಿಂದ ಆಲಿಸು; ಗಗನದಲ್ಲಿ ತುಂಬಾ ಮೋಡಗಳಿವೆ. ಆದರೆ ಎಲ್ಲವೂ ಒಂದೇ ತರಹ ಇರುವುದಿಲ್ಲ. ಕೆಲವು ಚೆನ್ನಾಗಿ ಸುರಿದು ಭೂಮಿಯನ್ನು ತಣಿಸಿ ಕೆರೆಕಟ್ಟೆಗಳನ್ನು ತುಂಬಿಸುತ್ತವೆ. ಕೆಲವು ಸುಮ್ಮನೆ ಗುಡುಗುತ್ತವೆ. ಮಳೆ ಮಾತ್ರ ಇಲ್ಲವೇ ಇಲ್ಲ. ಆದುದರಿಂದ ಕಂಡ ಕಂಡ ಮೋಡಗಳನ್ನೆಲ್ಲಾ ದೈನ್ಯದಿಂದ ಯಾಚಿಸಬೇಡ. ದಾನಿಗಳು ಮಾತಾಡದೆ ಕೊಡುತ್ತಾರೆ. ಜಿಪುಣರು ಸುಮ್ಮನೇ ನಿಂದಿಸಿ ಗಲಾಟೆ ಮಾಡುತ್ತಾರೆ.

ತಾವತ್ಸರ್ವಗುಣಾಶ್ರಯಃ ಪಟುಮತಿಃ ಸಾಧುಃ ಸತಾಂ ವಲ್ಲಭಃ
ಶೂರಃ ಸಚ್ಚರಿತಃ ಕಲಂಕರಹಿತೋ ಮಾನೀ ಕೃತಜ್ಞಃ ಕವಿಃ ।

ಯಾವನ್ನಿಷ್ಠುರವಜ್ರಪಾತಸದೃಶೋ ದೇಹೀತಿ ನೋ ಭಾಷತೇ
ತಸ್ಮಾದ್ವಾಕ್ಯಮಿದಂ ಮಮ ಶೃಣು ಸಖೇ
ಮಾ ಬ್ರೂಹಿ ದೀನಂ ವಚಃ ॥ ೨೩೧ ॥

ಬೇಡುವುದು ಅವಮಾನಕರವೆಂದು ಕವಿಯ ಆಶಯ. ಎಲೈ ಮಿತ್ರನೇ ! ನನ್ನ ಈ ಮಾತನ್ನು ಗಮನವಿಟ್ಟು ಕೇಳು. ದೈನ್ಯಭಾವದಿಂದ ಯಾರ ಮುಂದೆಯೂ ಕೈಚಾಚಬೇಡ. ಏಕೆಂದರೆ ಗೌರವವು ಯಾಚಿಸದೇ ಇರುವ ತನಕ ಇರುತ್ತದೆ. ಯಾಚಿಸದವನು ಒಳ್ಳೆಯ ಗುಣವಂತ, ಬುದ್ಧಿವಂತ, ಸಾಧುವು, ಸಜ್ಜನರಿಗೆ ಪ್ರಿಯನಾದವನು, ಶೂರ, ಸಚ್ಚಾರಿತ್ರ, ದೋಷರಹಿತ ಮಾನಿಯು, ಕವಿಯೂ ಆಗಿರುತ್ತಾನೆ. ವಜ್ರಪಾತಸದೃಶವಾದ 'ದೇಹಿ' ಎಂಬ ಶಬ್ದವು ಯಾಚಕನ ಮುಖದಿಂದ ಹೊರಟ ಕೂಡಲೇ ಎಲ್ಲ ಹೊಗಳಿಕೆಯೂ ನಿಂತುಹೋಗುತ್ತದೆ (ಎಲ್ಲ ಗುಣಗಳೂ ಮಾಯವಾಗುತ್ತವೆ.)

ಲುಬ್ಧಮರ್ಥೇನ ಗೃಹ್ಣೀಯಾತ್ಸಾಧುಮಂಜಲಿಕರ್ಮಣಾ ।
ಮೂರ್ಖಂ ಛಂದೋನುರೋಧೇನ ತತ್ತ್ವಾರ್ಥೇನ
ಚ ಪಂಡಿತಮ್ ॥ ೨೩೨ ॥

ಈ ಪದ್ಯದಲ್ಲಿ ಜನಗಳನ್ನು ವಶಮಾಡಿಕೊಳ್ಳುವ ರೀತಿ ಹೇಳಲ್ಪಟ್ಟಿದೆ. ಜಿಪುಣನನ್ನು ಧನದಿಂದಲೂ ಸಾಧುಗಳನ್ನು ಕೈಮುಗಿಯುವುದರಿಂದಲೂ, ಮೂರ್ಖನನ್ನು ಅವನ ಇಷ್ಟದಂತೆ ವರ್ತಿಸುವುದರಿಂದಲೂ, ವಿದ್ವಾಂಸ ನನ್ನು ಪಾಂಡಿತ್ಯದಿಂದಲೂ ವಶಮಾಡಿಕೊಳ್ಳಬೇಕು.

ಮೂರ್ಖತ್ವಂ ಹಿ ಸಖೇ ಮಮಾಪಿ ರುಚಿರಂ ತಸ್ಮಿನ್ನದಷ್ಟೌ ಗುಣಾಃ
ನಿಶ್ಚಿಂತೋ ಬಹುಭೋಜನೇಷ್ವಭಿರುಚೀ ರಾತ್ರೌ ದಿವಾ ಸುಪ್ಯತೇ ।
ಕಾರ್ಯಾಕಾರ್ಯವಿಚಾರಣಾಂಧಬಧಿರೋ ಮಾನಾವಮಾನೌ ಸಮೌ
ಕೃತ್ವಾ ಸರ್ವಜನಸ್ಯ ಮೂರ್ಧನಿ ಪದಂ
ಮೂರ್ಖಃ ಸುಖಂ ಜೀವತಿ ॥ ೨೩೩ ॥

ಮಿತ್ರನೇ, ಮೂರ್ಖತನವೇ ನನಗೂ ಬೇಕಾಗಿದೆ. ಅದರಲ್ಲಿ ಎಂಟು ಗುಣಗಳುಂಟು—ಯಾವುವೆಂದರೆ ನಿಶ್ಚಿಂತೆ, ಬಹುಭೋಜನಾಸಕ್ತಿ ಹಗಲು ರಾತ್ರಿ ನಿದ್ರೆ, ಕಾರ್ಯಾಕಾರ್ಯವಿವೇಕದಲ್ಲಿ ಕುರುಡುತನ ಮತ್ತು ಕಿವುಡನಂತಿರುವುದು, ಮಾನಾವಮಾನಗಳು ಸಮನಾಗಿರುವುದು. ಹೀಗೆ ಎಲ್ಲರ ತಲೆಯ ಮೇಲೆ ಕಾಲಿಟ್ಟು ಮೂರ್ಖನು ಸುಖವಾಗಿ ಬದುಕಿರುತ್ತಾನೆ.

ತೈಲಾದ್ರಕ್ಷೇಜ್ಜಲಾತ್ ರಕ್ಷೇದ್ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮ್ ಏವಂ ವದತಿ ಪುಸ್ತಕಮ್ ॥ ೨೩೪ ॥

ಪುಸ್ತಕವು ತನ್ನನ್ನು ಸಂರಕ್ಷಿಸುವ ವಿಧಾನವನ್ನು ಮನುಷ್ಯನಿಗೆ ಹೇಳುತ್ತದೆ. ಪುಸ್ತಕವನ್ನು ಎಣ್ಣೆ, ನೀರು, ಶಿಥಿಲವಾಗಿ ಕಟ್ಟಿಡುವುದು (ಹಿಂದೆ ಬೈಂಡ್ ಮಾಡುತ್ತಿರಲಿಲ್ಲ) ಮೂರ್ಖರ ಕೈಗೆ ಕೊಡದಿರುವುದು. ಹೀಗಿದ್ದರೆ ಬಾಳಿಕೆ ಮತ್ತು ಉಳಿಯುವಿಕೆ ಸಾಧ್ಯ. ಮೂರ್ಖರು ಸುಡುವುದಕ್ಕೂ ಸಿದ್ಧ.

ಮೂರ್ಖಸ್ಯ ಪಂಚಚಿಹ್ನಾನಿ ಗರ್ವೀ ದುರ್ವಚನೀ ತಥಾ ।
ಹಠೀ ಚಾಪ್ರಿಯವಾದೀ ಚ ಪರೋಕ್ತಂ ನೈವ ಮನ್ಯತೇ ॥ ೨೩೫ ॥

ಮೂರ್ಖರ ಲಕ್ಷಣಗಳು ಐದು. ಗರ್ವ, ದುರ್ವಚನ, ಹಠಮಾರಿ ತನ, ಅಪ್ರಿಯವಾದ ಮಾತಾಡುವುದು ಮತ್ತು ಬೇರೆಯವರ ಹಿತವಚನವನ್ನು ಕೇಳದಿರುವುದು.

ಶೈಲೇ ಶೈಲೇ ನ ಮಾಣಿಕ್ಯಂ ಮೌಕ್ತಿಕಂ ನ ಗಜೇ ಗಜೇ ।
ಸಾಧವೋ ನ ಹಿ ಸರ್ವತ್ರ ಚಂದನಂ ನ ವನೇ ವನೇ ॥ ೨೩೬ ॥

ಎಲ್ಲ ಪರ್ವತಗಳಲ್ಲಿ ಮಾಣಿಕ್ಯವೂ, ಎಲ್ಲ ಆನೆಗಳಲ್ಲಿ ಮುತ್ತೂ ಎಲ್ಲ ವನಗಳಲ್ಲೂ ಗಂಧದಮರವೂ ಹಾಗೆಯೇ ಎಲ್ಲ ಕಡೆಯಲ್ಲೂ ಸತ್ಪುರುಷರೂ ಇರುವುದಿಲ್ಲ. ಉತ್ತಮ ವಸ್ತುಗಳು ದೊರಕುವುದು ವಿರಳ.

ಮೌನೇ ಮೌನೀ ಗುಣಿನಿ ಗುಣವಾನ್ ಪಂಡಿತೇ ಪಂಡಿತೋಽಸೌ
ದೀನೇ ದೀನಃ ಸುಖಿನಿ ಸುಖವಾನ್ಭೋಗಿನಿ ಪ್ರಾಪ್ತಭೋಗಾಃ ।
ಮೂರ್ಖೇ ಮೂರ್ಖೋ ಯುವತಿಷು ಯುವಾ ವಾಗ್ಮಿಷು ಪ್ರೌಢವಾಗ್ಮೀ
ಧನ್ಯಃ ಕೋಽಪಿ ತ್ರಿಭುವನಜಯೀ ಯೋಽವಧೂತೇಽವಧೂತಃ ॥ ೨೩೭

ಮೂರು ಲೋಕಗಳನ್ನು ಗೆಲ್ಲಬಲ್ಲ ಅತ್ಯಂತ ವಿರಳವಾದ ಪುಣ್ಯಾತ್ಮನ ಗುಣಗಳು ಹೀಗಿರುತ್ತವೆ—ಆ ಮಹನೀಯನು ಮೌನಿಗಳಲ್ಲಿ ತಾನೂ ಮೌನಿಯಾಗಿಯೂ, ಗುಣಿಗಳಲ್ಲಿ ಗುಣವಂತನಾಗಿಯೂ, ಪಂಡಿತರಲ್ಲಿ ಪಂಡಿತನಂತೆಯೂ, ದೀನರಲ್ಲಿ ದೀನನಂತೆಯೂ, ಸುಖಿಗಳಲ್ಲಿ ಸುಖವಂತನಾಗಿಯೂ, ಭೋಗಿಗಳಲ್ಲಿ ಭೋಗಪಡುವವನಾಗಿಯೂ, ಮೂರ್ಖರಲ್ಲಿ ಮೂರ್ಖನಂತೆಯೂ, ಯುವತಿಯರಲ್ಲಿ ಯುವಕನಂತೆಯೂ, ವಾಗ್ಮಿಗಳಲ್ಲಿ ವಾಕ್ಪಟುವೂ, ಅವಧೂತರೆಂಬ ಸಂನ್ಯಾಸಿಗಳಲ್ಲಿ ಅವಧೂತರಂತೆಯೂ ಇರುತ್ತಾನೆ. ದೇಶಕಾಲಾದಿಗಳಿಗೆ ತಕ್ಕಂತೆ ಹೊಂದಿಕೊಳ್ಳುವವನೇ ಸಮರ್ಥ.

ಯ

ವಿವಾಹೋಽರ್ಥಶ್ಚ ಮರಣಂ ಅನ್ನಂ ಜನನಮೇವ ಚ ।
ಕಂಠೇ ಬಧ್ವಾ ದೃಢಂ ಸೂತ್ರಂ ಯತ್ರಸ್ಥಂ ತತ್ರ ನೀಯತೇ ॥೨೩೮॥

ವಿವಾಹ, ಧನ, ಮರಣ, ಅನ್ನ, ಜನನ ಇವು ಎಲ್ಲೆಲ್ಲಿ ಪ್ರಾಪ್ತವಾಗಬೇಕೋ ಅಲ್ಲಿಗೆ ಆ ವ್ಯಕ್ತಿಯನ್ನು ಕೊರಳಿಗೆ ಹಗ್ಗ ಹಾಕಿ ಎಳೆದು ಕರೆದುಕೊಂಡು ಹೋಗುತ್ತವೆ. (ಇದರ ಬಗ್ಗೆ ಬೇಕಾದಷ್ಟು ಬರೆಯಬಹುದು. ಇದಕ್ಕೆ ಅನುಭವವಿರಬೇಕು. ಅದನ್ನೆಲ್ಲಾ ಇಲ್ಲಿ ತಿಳಿಸಲು ಅವಕಾಶವಿಲ್ಲ.)

ಯಥಾ ಭೂಮಿಸ್ತಥಾ ತೋಯಂ ಯಥಾ ಬೀಜಂ ತಥಾಂಕುರಃ ।
ಯಥಾ ದೇಶಸ್ತಥಾ ಭಾಷಾ ಯಥಾ ರಾಜಾ ತಥಾ ಪ್ರಜಾಃ ॥೨೩೯

ಭೂಮಿಯ ಗುಣದಂತೆ ಸಿಹಿ ಉಪ್ಪು ನೀರೂ, ಬೀಜದಂತೆ ಮೊಳಕೆಯೂ, ದೇಶಕ್ಕೆ ತಕ್ಕಂತೆ ಭಾಷೆಯೂ ರಾಜನಂತೆ ಪ್ರಜೆಗಳೂ ಇರುತ್ತಾರೆ.

ಯದ್ಯದಾಚರತಿ ಶ್ರೇಷ್ಠಃಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ೨೪೦ ॥

ಶ್ರೇಷ್ಠವಾದ ವ್ಯಕ್ತಿಗಳು ಏನನ್ನು ಆಚರಿಸುತ್ತಾರೋ ಸಾಮಾನ್ಯ ಜನರೂ ಅದನ್ನೇ ಅನುಕರಿಸುತ್ತಾರೆ. ಚಿತ್ರನಟರು, ಕ್ರಿಕೆಟ್ ಆಟಗಾರರು ಯಾವ ವೇಷಭೂಷಣ ಧರಿಸುತ್ತಾರೋ ಸಾಮಾನ್ಯರೂ ಅದನ್ನೇ ಅನುಸರಿಸುತ್ತಾರೆ. ಈ ಕಾಲಕ್ಕೆ ಅವರ ಮಾತೇ ಜನರಿಗೆ ಹೆಚ್ಚು ಪ್ರಭಾವಕಾರಿ.

ಯಸ್ಯ ವರ್ಣಸ್ಯ ಯೋ ರಾಜಾ ಸ ವರ್ಣಃ ಸುಖಮೇಧತೇ ।
ಜಾಮದಗ್ನ್ಯೇನ ರಾಮೇಣ ಬ್ರಾಹ್ಮಣಾ ಭೂಭುಜಃ ಕೃತಾಃ ॥೨೪೧॥

ರಾಜನು ಯಾವ ಜಾತಿಯವನಾಗಿರುತ್ತಾನೋ ಆ ಜಾತಿಯವರಿಗೆ ಅವನ ಆಳ್ವಿಕೆಯಲ್ಲಿ ಅನುಕೂಲವಾಗುತ್ತದೆ. ಪರಶುರಾಮನು ರಾಜನಾದಾಗ ಬ್ರಾಹ್ಮಣರೂ ರಾಜರಾದರು. ಪರಶುರಾಮನು ಬ್ರಾಹ್ಮಣ. ಇದು ಈ ಕಾಲಕ್ಕೆ ಇನ್ನೂ ಚೆನ್ನಾಗಿ ಒಪ್ಪುತ್ತದೆ. ಅದಕ್ಕೇ ಎಲ್ಲರೂ ಜಾತಿಯ ಸಂಖ್ಯೆಯ ಆಧಾರದ ಮೇಲೆ ಮಂತ್ರಿಮಂಡಲ ರಚಿಸಲು ಒತ್ತಾಯಮಾಡುತ್ತಾರೆ.

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್ ।
ಯಜೇತ ವಾಶ್ವಮೇಧೇನ ನೀಲಂ ವಾ ವೃಷಮುತ್ಸೃಜೇತ್ ॥೨೪೨॥

ಹುಟ್ಟಿದ ಮಕ್ಕಳಲ್ಲಿ ಒಬ್ಬನಾದರೂ ಗಯಾಶ್ರಾದ್ಧ ಮಾಡಬಹುದೆಂಬ ಉದ್ದೇಶದಿಂದಲೂ, ಅಶ್ವಮೇಧಯಾಗ ಮಾಡಿಯಾನು ಎಂದೂ ಕಪ್ಪು ಬಣ್ಣದ ವೃಷಭೋತ್ಸರ್ಜನೆಯನ್ನು ಮಾಡಿಯಾನು ಎಂಬ ದೃಷ್ಟಿಯಿಂದಲೂ ಗೃಹಸ್ಥನು ಬಹುಮಂದಿ ಗಂಡುಮಕ್ಕಳನ್ನು ಪಡೆಯಬೇಕು. ಈ ಕಾರ್ಯಗಳೆಲ್ಲಾ ಪಿತೃಗಳಿಗೆ ತೃಪ್ತಿಕೊಡತಕ್ಕವುಗಳು. ಈ ಕಾಲದಲ್ಲಿ ಇದು ಕಷ್ಟ.

ಯಸ್ಮಿನ್ ದೇಶೇ ಯ ಆಚಾರಃ ಸ್ಥಾನೇ ಸ್ಥಾನೇ ಯಥಾ ಸ್ಥಿತಿಃ ।
ತಥೈವ ವ್ಯವಹರ್ತವ್ಯಂ ಪಾರಂಪರ್ಯಾಗತೋ ವಿಧಿಃ ॥ ೨೪೩ ॥

ಪರದೇಶಕ್ಕೆ ಹೋದಾಗ ನಮ್ಮ ಪ್ರಾಚೀನಾಚಾರಗಳನ್ನು ಆ ದೇಶ ಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಆಚರಿಸಬೇಕು. ದೇವಕಾರ್ಯ ಹಬ್ಬ ಹರಿದಿನಗಳನ್ನು ಮತ್ತು ಪಿತೃಕಾರ್ಯಗಳನ್ನು ಕಾಲದೇಶಗಳಿಗೆ ತಕ್ಕಂತೆ ಅಳವಡಿಸಿಕೊಳ್ಳಬೇಕು.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ
ದೈವಂ ಪ್ರಧಾನಮಿತಿ ಕಾಪುರುಷಾ ವದಂತಿ ।
ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ
ಯತ್ನೇ ಕೃತೇ ಯದಿ ನ ಸಿಧ್ಯತಿ ಕೋಽತ್ರ ದೋಷಃ ॥ ೨೪೪ ॥

ಲಕ್ಷ್ಮಿಯು ಕ್ರಿಯಾಶೀಲನಾದ ಪುರುಷನಿಗೆ ಒಲಿಯುತ್ತಾಳೆ. ಕೈಲಾಗದವರು ಅದೃಷ್ಟಶಕ್ತಿಯನ್ನೇ ನಂಬಿ ಕುಳಿತಿರುತ್ತಾರೆ. ದೈವವನ್ನು ಲಕ್ಷಿಸದೆ ಆತ್ಮಪೌರುಷಶಕ್ತಿಯನ್ನು ತೋರಿಸಬೇಕು. ಹೀಗೆ ಪ್ರಯತ್ನಿಸಿದರೂ ಫಲಿಸದಿದ್ದಲ್ಲಿ ಯಾರನ್ನೂ ದೂಷಿಸಬೇಕಾಗಿಲ್ಲ. ಇದು ತಪ್ಪೂ ಅಲ್ಲ. ಪುರುಷ ಪ್ರಯತ್ನವೂ ಮುಖ್ಯವೇ ಆಗಿರುತ್ತದೆ.

ಯಥೈಕೇನ ನ ಹಸ್ತೇನ ತಾಲಿಕಾ ಸಂಪ್ರಪದ್ಯತೇ ।
ತಥೋದ್ಯಮಪರಿತ್ಯಕ್ತಂ ಕರ್ಮ ನೋತ್ಪಾದಯೇತ್ಫಲಮ್ ॥ ೨೪೫

ಒಂದು ಕೈಯಿಂದ ಚಪ್ಪಾಳೆ ತಟ್ಟುವುದು ಹೇಗೆ ಅಸಾಧ್ಯವೋ ಹಾಗೆಯೇ ಪುರುಷಪ್ರಯತ್ನವಿಲ್ಲದೆ ಕರ್ಮವೂ ಫಲವನ್ನು ಕೊಡುವುದಿಲ್ಲ. ಉದ್ಯಮಿ ಎಂದರೆ ಉದ್ಯೋಗ ಎಂದರ್ಥ. ಉದ್ಯೋಗಿಯಲ್ಲದವನಿಗೆ ಇನ್ನೊಂದು ಕೈಯ್ಯನ್ನು ಜೋಡಿಸುವುದೂ ಉದ್ಯಮವೇ. ಇವನಿಗೆ ಕರ್ಮವೂ ಫಲವನ್ನು ಕೊಡುವುದಿಲ್ಲ.

ಮಂತ್ರೇ ತೀರ್ಥೇ ದ್ವಿಜೇ ದೇವೇ ದೈವಜ್ಞೇ ಭೇಷಜೇ ಗುರೌ ।
ಯಾದೃಶೀಂ ಭಾವನಾಂ ಕುರ್ಯಾತ್ಸಿದ್ಧಿರ್ಭವತಿ ತಾದೃಶೀ ॥೨೪೫॥

ಮಂತ್ರ, ತೀರ್ಥ, ಬ್ರಾಹ್ಮಣ, ದೇವರು, ಜ್ಯೋತಿಷಿಕರು, ವೈದ್ಯರು ಮತ್ತು ಗುರುಗಳಲ್ಲಿ ನಾವು ಇಡುವ ಭಾವನೆಗಳಿಗೆ ತಕ್ಕಂತೆ ಫಲ ದೊರಕುತ್ತದೆ.

ದೃಷ್ಟ್ವಾ ಯತಿರ್ಯತಿಂ ಸದ್ಯೋ ವೈದ್ಯೋ ವೈದ್ಯಂ ನಟಂ ನಟಃ ।
ಯಾಚಕೋ ಯಾಚಕಂ ದೃಷ್ಟ್ವಾ ಶ್ವಾನವದ್ಗುರ್ಗುರಾಯತೇ ॥ ೨೪೬

ಯತಿಯು ಬೇರೆ ಯತಿಯನ್ನೂ, ವೈದ್ಯನು ವೈದ್ಯನನ್ನೂ, ನಟನು ನಟನನ್ನೂ, ಯಾಚಕನು ಯಾಚಕನನ್ನೂ ಕಂಡೊಡನೆಯೇ ನಾಯಿಯಂತೆ ಗುರುಗುಟ್ಟುತ್ತಾನೆ. ಇದನ್ನೇ ವೃತ್ತಿದ್ವೇಷವೆನ್ನುವುದು. ಇದರಂತೆ ಸಂಗೀತ, ವೇದ, ಪೌರೋಹಿತ್ಯ ಮತ್ತು ಒಂದೇ ತರಹದ ವ್ಯಾಪಾರ ಇವುಗಳನ್ನೂ ಸೇರಿಸಿಕೊಳ್ಳಬಹುದು. ಇಬ್ಬರು ಒಂದು ವಸ್ತುವಿಗೆ ಆಸೆಪಟ್ಟರೂ ಹೀಗಾಗುತ್ತದೆ.

ಕನ್ಯಾಗತೇ ಸವಿತರಿ ತಿಷ್ಠಂತಿ ಪಿತರೋ ಗೃಹೇ ।
ಶೂನ್ಯಂ ಪ್ರೇತಪುರಂ ತತ್ರ ಯಾವದ್ವೃಶ್ಚಿಕದರ್ಶನಮ್ ॥೨೪೭॥

ಸೂರ್ಯನು ಕನ್ಯಾರಾಶಿಗೆ ಬಂದಾಗ ಪ್ರೇತಪುರದಲ್ಲಿರುವ ಪಿತೃಗಳೆಲ್ಲಾ ತಮ್ಮ ತಮ್ಮ ವಂಶಜರ ಮನೆಗೆ ಪ್ರವೇಶಿಸಿ ಬ್ರಾಹ್ಮಣಭೋಜನ ತರ್ಪಣಾದಿಗಳನ್ನು ನಿರೀಕ್ಷಿಸುತ್ತಾರೆ. ವೃಶ್ಚಿಕ ಮಾಸ ಹುಟ್ಟುವ ತನಕ

ಕಾದಿರುತ್ತಾರೆ. ಪಿತೃಕಾರ್ಯ ಮಾಡಿದರೆ, ಹರಸುತ್ತಾರೆಂದೂ, ಇಲ್ಲದಿದ್ದರೆ ಶಪಿಸುತ್ತಾರೆಂದೂ ಶಾಸ್ತ್ರ ಹೇಳುತ್ತದೆ.

ವ್ಯಾಘ್ರಸ್ಸುಷ್ಯತಿ ಕಾನನೇ ಸುಗಹನಾಂ ಸಿಂಹೋ ಗುಹಾಂ ಸೇವತೇ
ಹಂಸೋಽಷ್ನಾಯ ಚ ಪದ್ಮಿನೀಂ ಕುಸುಮಿತಾಂ ಗೃಧ್ರಃ ಶ್ಮಶಾನಸ್ಥಲೀ ।
ಸಾಧುಸ್ಸತ್ಕೃತಸಾಧುಮೇವ ಭಜತೇ ನೀಚೋಽಪಿ ನೀಚಂ ಜನಂ
ಯಾ ಯಸ್ಯ ಪ್ರಕೃತಿಃ ಸ್ವಭಾವಜನಿತಾ ಕೇನಾಪಿ ನ ತ್ಯಜ್ಯತೇ ॥ ೨೪೮

ಹುಲಿಯು ಗಹನವಾದ ಕಾಡನ್ನೂ ಸಿಂಹವು ಗುಹೆಯನ್ನೂ ಹಂಸವು ಹೂವಿರುವ ಪದ್ಮ ಸರೋವರವನ್ನೂ ಗೃಧ್ರವು (ಹದ್ದು) ಶ್ಮಶಾನಭೂಮಿಯನ್ನೂ ಸಾಧುಪುರುಷರು ಸಾಧುಜನಗಳನ್ನೂ ನೀಚರು ನೀಚರನ್ನೂ ಸೇರಲು ಬಯಸುತ್ತಾರೆ. ಅಂದರೆ ಎಲ್ಲರೂ ಅವರವರ ಸ್ವಭಾವಕ್ಕೆ ತಕ್ಕಂತೆ ವರ್ತಿಸುತ್ತಾರೆ. ಹುಟ್ಟುಗುಣವನ್ನು ಬಿಡಲಾಗುವುದಿಲ್ಲ.

ವಿಶಾಖಾಂತಾ ಗತಾ ಮೇಘಾಃ ಪ್ರಸೂತಾಂತಂ ಚ ಯೌವನಮ್ ।
ಪ್ರಣಾಮಾಂತಸ್ಸತಾಂ ಕೋಪೋ ಯಾಚನಾಂತಂ ಚ ಗೌರವಮ್ ॥

ವಿಶಾಖೆ ಮಳೆ ಕಳೆದರೆ ಮಳೆಗಾಲ ಮುಗಿಯುತ್ತದೆ. ಪ್ರಸವವಾದರೆ ತಾರುಣ್ಯವು ಹೋದಂತೆ (ಇದು ಅಷ್ಟು ವಿಶ್ವಸನೀಯವಲ್ಲ) ಸಜ್ಜನರ ಕೋಪವು ನಮಸ್ಕಾರ ಮಾಡಿದರೆ ಸಾಕು, ಶಮನವಾಗುತ್ತದೆ. ಬೇಡುವ ತನಕ ಗೌರವವಿರುತ್ತದೆ. ಬೇಡಿದರೆ ಹೋಯಿತು.

ಯುಕ್ತಿಯುಕ್ತವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ ।
ಅಯುಕ್ತಂ ತೃಣವತ್ತ್ಯಾಜ್ಯಮಪ್ಯುಕ್ತಂ ಪದ್ಮಜನ್ಮನಾ ॥ ೨೫೦ ॥

ನ್ಯಾಯ ಮತ್ತು ಯುಕ್ತಿಯುತವಾದ ಮಾತು ಬಾಲ ಮತ್ತು ಗಿಳಿಯ ಬಾಯಿಂದ ಬಂದರೂ ಅದನ್ನು ಸ್ವೀಕರಿಸಬೇಕು. ಸಾಕ್ಷಾತ್ ಬ್ರಹ್ಮನೇ ಹೇಳಿದರೂ ಅಯುಕ್ತವಾದುದನ್ನು ಹುಲ್ಲಿನಂತೆ ತಿರಸ್ಕರಿಸಬಹುದು.

ಘಟಂ ಭಿಂದ್ಯಾತ್ ಪಟಂ ಛಿಂದ್ಯಾತ್ ಕುರ್ಯಾದ್ರಾಸಭರೋಹಣಮ್
ಯೇನ ಕೇನ ಪ್ರಕಾರೇಣ ಪ್ರಸಿದ್ಧಪುರುಷೋ ಭವೇತ್ ॥ ೨೫೧ ॥

ಮಡಕೆಯನ್ನು ಒಡೆದರೂ ಸರಿ, ಬಟ್ಟೆಯನ್ನು ಹರಿದರೂ ಸರಿ, ಕತ್ತೆಯ ಮೇಲೆ ಸವಾರಿ ಮಾಡಿದರೂ ಸರಿ. ಯಾವುದಾದರೂ ಒಂದು ರೀತಿಯಿಂದ ಪ್ರಸಿದ್ಧಿಗೆ ಬರುವುದು ಮುಖ್ಯ. (ಈ ಕಾಲಕ್ಕೆ ಇದು ಚೆನ್ನಾಗಿ ಒಪ್ಪುತ್ತದೆ. ಪತ್ರಿಕೆ, ದೂರದರ್ಶನಗಳಲ್ಲಿ ಬರಬೇಕೆಂದು ಏನನ್ನಾದರೂ ಮಾಡಲು ಹಾತೊರೆಯುತ್ತಿರುತ್ತಾರೆ.)

ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್ ।
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್ ॥೨೫೨॥

ಇದು ಕಾಳಿದಾಸನ ಪದ್ಯ. ರಘುವಂಶದ ರಾಜರು ಬಾಲ್ಯದಲ್ಲಿ ವಿದ್ಯೆಗಳನ್ನೆಲ್ಲಾ ಕಲಿಯುತ್ತಿದ್ದರು. ತಾರುಣ್ಯದಲ್ಲಿ ವಿಷಯ ಸುಖಗಳನ್ನನುಭವಿಸುತ್ತಿದ್ದರು. ಮುಪ್ಪಿನಲ್ಲಿ ಮುನಿಗಳಂತೆ ಜೀವನ ನಡೆಸುತ್ತಿದ್ದರು. ಕೊನೆಯಲ್ಲಿ ದೇವರ ಧ್ಯಾನ ಮಾಡುತ್ತಾ (ಯೋಗಶಕ್ತಿಯಿಂದ) ದೇಹವನ್ನು ತ್ಯಜಿಸುತ್ತಿದ್ದರು. ನಾವೂ ಹಾಗೆಯೇ ಮಾಡಬೇಕೆಂದು ಅಭಿಪ್ರಾಯ.

ಅಮಂತ್ರಮಕ್ಷರಂ ನಾಸ್ತಿ ನಾಸ್ತಿ ಮೂಲಮನೌಷಧಮ್ ।
ಅಯೋಗ್ಯಃ ಪುರುಷೋ ನಾಸ್ತಿ ಯೋಜಕಸ್ತತ್ರ ದುರ್ಲಭಃ ॥೨೫೩॥

ಮಂತ್ರಕ್ಕೆ ಬಾರದ ಅಕ್ಷರವಿಲ್ಲ. ಔಷಧಕ್ಕೆ ಬಾರದ ಮೂಲಿಕೆಯಿಲ್ಲ. ಅಯೋಗ್ಯನಾದ ಮನುಷ್ಯನೂ ಇಲ್ಲ. ಅವನನ್ನು ಸರಿಯಾಗಿ ಬಳಸಿಕೊಳ್ಳಬಲ್ಲ ಜಾಣನು ವಿರಳ.

ಯೋ ಯತ್ರ ಕುಶಲಃ ಕಾರ್ಯೇ ತತ್ರ ತಂ ವಿನಿಯೋಜಯೇತ್ ।
ಕಾರ್ಯೇಷ್ವದೃಷ್ಟಕರ್ಮಾ ಯಃ ಶಾಸ್ತ್ರಜ್ಞೋಽಪಿ ವಿಮುಹ್ಯತಿ ॥ ೨೫೪

ಯಾವನು ಯಾವ ಕಲೆಯಲ್ಲಿ ನಿಪುಣನೋ ಅದಕ್ಕೇ ಅವನನ್ನು ನಿಯೋಜಿಸಬೇಕು. ಒಳ್ಳೆಯ ಶಾಸ್ತ್ರಜ್ಞನಾದರೂ ಸಣ್ಣ ಕೆಲಸವನ್ನೂ ಸಹ ಮಾಡಲಾರನು. (ಸಿಸ್ಟರ್ ಅವರು ಇಂಜಕ್ಷನ್ ಕೊಟ್ಟ ಹಾಗೆ ಡಾಕ್ಟರು ಕೊಡಲಾರರು. ಇವರು ಬರೆಯಬೇಕು, ಅವರು ಚುಚ್ಚಬೇಕು. ಎಲ್ಲದರಲ್ಲೂ ಹೀಗೆಯೇ.)

ಬಾಲತ್ವೇ ಚ ಮೃತಾ ಮಾತಾ ವೃದ್ಧತ್ವೇ ಚ ಮೃತಾಃ ಸುತಾಃ ।
ಯೌವನೇ ಚ ಮೃತಾ ಭಾರ್ಯಾ ಪಾತಕಃ ಕಿಮತಃ ಪರಂ ॥ ೨೫೫

ಬಾಲ್ಯದಲ್ಲಿ ತಾಯಿಯೂ ಯೌವನದಲ್ಲಿ ಹೆಂಡತಿಯೂ ಮುಪ್ಪಿನಲ್ಲಿ ಮಕ್ಕಳೂ ಸಾಯುವುದು ಮಹಾಪಾಪದ ಫಲವೆಂದೇ ತಿಳಿಯಬೇಕು.

ರ

ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ
ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ ।
ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ
ಹಾ ಮೂಲತಃ ಕಮಲಿನೀಂ ಗಜ ಉಜ್ಜಹಾರ ॥ ೨೫೬ ॥

ಒಂದು ಭ್ರಮರವು ಮಧುವನ್ನು ಹೀರುತ್ತಿರುವಾಗ ರಾತ್ರಿಯಾಗಿ ಅದು ಅಲ್ಲೇ ಬಂಧಿಸಲ್ಪಟ್ಟು, ಮನಸ್ಸಿನಲ್ಲಿ ''ರಾತ್ರಿಯು ಹೋಗುವುದು, ಸುಪ್ರಭಾತವುಂಟಾಗುವುದು, ಸೂರ್ಯನು ಉದಯಿಸುವನು, ತಾವರೆಗಳು ಅರಳುವುವು. ಆಗ ನನಗೆ ಬಂಧಮೋಕ್ಷವಾಗಿ ಸುಖವಾಗಿರುವೆನು'' ಎಂದು ಯೋಚಿಸುತ್ತಿರುವಷ್ಟರಲ್ಲಿ ಅಯ್ಯೋ ! ಪಾಪ ! ಒಂದು ಆನೆಯು ಬಂದು ಬೇರು ಸಹಿತ ಕಮಲವನ್ನು ಕಿತ್ತು ಹಾಕಿಬಿಟ್ಟಿತು. ಹೀಗೆಯೇ ನಮ್ಮ ಸಂಕಲ್ಪಗಳು ಈಡೇರುವಷ್ಟರಲ್ಲಿ ನಮ್ಮ ಆಯುಸ್ಸೇ ಮುಗಿದು ಹೋಗುವುದು.

ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಾಸ್ಸಮೇ ಸಮಾಃ ।
ಲೋಕಾಸ್ತಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥ ೨೫೭

ಪ್ರಜೆಗಳು ರಾಜನು ಧರ್ಮಿಷ್ಠನಾದರೆ ಧರ್ಮಿಷ್ಠರೂ, ಪಾಪಿಯಾದರೆ ಪಾಪಿಗಳೂ, ಸಮನಾಗಿದ್ದರೆ ಸಮನಾಗಿಯೂ ಇರುತ್ತಾರೆ. ಒಟ್ಟಿನಲ್ಲಿ ರಾಜನಂತೆ ಪ್ರಜೆಗಳಿರುತ್ತಾರೆ.

ಭಸ್ಮನಾ ಶುಧ್ಯತೇ ಕಾಂಸ್ಯಂ ತಾಮ್ರಮಾಮ್ಲೇನ ಶುಧ್ಯತಿ ।
ರಜಸಾ ಶುಧ್ಯತೇ ನಾರೀ ನದೀ ವೇಗೇನ ಶುಧ್ಯತಿ ॥ ೨೫೮ ॥

ಬೂದಿಯಿಂದ ಕಂಚೂ, ಹುಳಿಯಿಂದ ತಾಮ್ರವೂ, ರಜಸ್ವಲೆಯಾಗುವುದರಿಂದ ಹೆಂಗಸೂ, ವೇಗದಿಂದ ನದಿಯೂ ಶುದ್ಧವಾಗುತ್ತದೆ.

ರೂಪಯೌವನಸಂಪನ್ನಾ ವಿಶಾಲಕುಲಸಂಭವಾಃ ।
ವಿದ್ಯಾಹೀನಾ ನ ಶೋಭಂತೇ ನಿರ್ಗಂಧಾಃ ಕಿಂಶುಕಾ ಇವ ॥ ೨೫೯

ಒಳ್ಳೆಯ ಕುಲದಲ್ಲಿ ಹುಟ್ಟಿ ರೂಪಯೌವನಸಂಪನ್ನನಾಗಿದ್ದರೂ, ವಿದ್ಯೆಯಿಲ್ಲದಿದ್ದರೆ, ಮುತ್ತುಗದ ಹೂವಿನಂತೆ ಶೋಭಿಸುವುದಿಲ್ಲ. ಅದು ನೋಡಲು ಸುಂದರವಾಗಿರುತ್ತದೆ. ಸುವಾಸನೆ ಇರುವುದಿಲ್ಲ. ಸುಗಂಧವೇ ಮುಖ್ಯ. ಹಾಗೆಯೇ ಮನುಷ್ಯನಿಗೆ ವಿದ್ಯೆಯೇ ಮುಖ್ಯ.

ಉತ್ಸವೇ ವ್ಯಸನೇ ಚೈವ ದುರ್ಭಿಕ್ಷೇ ಶತ್ರುನಿಗ್ರಹೇ ।
ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾಂಧವಃ ॥೨೬೦॥

ಯಾವನು ಮದುವೆ ಹಬ್ಬ ಮುಂತಾದ ಹರ್ಷದ ದಿನಗಳಲ್ಲೂ ಆಪತ್ತಿನಲ್ಲೂ ದುರ್ಭಿಕ್ಷದಲ್ಲೂ, ಶತ್ರುವಿನ ಸಂಗಡ ಹೋರಾಡುವಾಗಲೂ ರಾಜಾನುಗ್ರಹವಾದಾಗಲೂ, ಶ್ಮಶಾನದಲ್ಲೂ ಭಾಗವಹಿಸುವನೋ ಅವನೇ ನಿಜವಾದ ಬಾಂಧವ. ಸುಖದಲ್ಲಿದ್ದು ಕಷ್ಟದಲ್ಲಿ ಕೈಬಿಡುವವರೇ ಹೆಚ್ಚು.

ರಾಜಾ ರಾಷ್ಟ್ರಕೃತಂ ಪಾಪಂ ರಾಜ್ಞಃ ಪಾಪಂ ಪುರೋಹಿತಃ ।
ಭರ್ತಾ ಚ ಸ್ತ್ರೀಕೃತಂ ಪಾಪಂ ಶಿಷ್ಯಪಾಪಂ ಗುರುಸ್ತಥಾ ॥ ೨೬೧ ॥

ರಾಷ್ಟ್ರವು ಮಾಡಿದ ಪಾಪವನ್ನು ರಾಜನೂ, ರಾಜನ ಪಾಪವನ್ನು ಪುರೋಹಿತನೂ, ಹೆಂಡತಿಯ ಪಾಪವನ್ನು ಗಂಡನೂ, ಶಿಷ್ಯನ ಪಾಪವನ್ನು ಗುರುವೂ ಭರಿಸಬೇಕಾಗುತ್ತದೆ. ಅಂದರೆ ಸರಿಯಾದ ಮಾರ್ಗದಲ್ಲಿ ನಡೆಸಬೇಕಾದ್ದು ಇವರ ಕರ್ತವ್ಯ.

ರಾಜಸೇವಾ ಮನುಷ್ಯಾಣಾಂ ಅಸಿಧಾರಾವಲೇಹನಮ್ ।
ಪಂಚಾನನಪರಿಷ್ವಂಗೋ ವ್ಯಾಳೀವದನಚುಂಬನಮ್ ॥೨೬೨॥

ಮಾನವರು ರಾಜಸೇವೆ (ಮೇಲ್ಪಟ್ಟ ಅಧಿಕಾರಿಗಳ ಸೇವೆ) ಮಾಡುವುದೆಂದರೆ, ಕತ್ತಿಯ ಅಲುಗನ್ನು ನೆಕ್ಕುವುದು, ಸಿಂಹವನ್ನು ತಬ್ಬಿಕೊಳ್ಳುವುದು, ಹಾವಿನ ಬಾಯಿಗೆ ಮುತ್ತಿಡುವುದು. ಅಂದರೆ ಅಷ್ಟು ಕಷ್ಟ. ಅನುಗ್ರಹ ಯಾವಾಗಲೋ ನಿಗ್ರಹ ಯಾವಾಗಲೋ ತಿಳಿಯದು.

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂತ್ ರಾಜಾ ಕಾಲಸ್ಯ ಕಾರಣಮ್ ॥

ಇದು ವ್ಯಾಸವಚನ. ಕಾಲವು ರಾಜನಿಗೆ ಕಾರಣವೇ? ರಾಜನೇ ಕಾಲಕೆಡಲು ಕಾರಣವೇ? ಎಂದು ಸಂಶಯಬೇಡ. ರಾಜನೇ ಕಾಲಕ್ಕೆ ಕಾರಣ. ರಾಜನು ಧರ್ಮಮಾರ್ಗದಲ್ಲಿದ್ದರೆ ಕಾಲವೂ ಚೆನ್ನಾಗಿರುತ್ತದೆ. ಪ್ರಜೆಗಳೂ ಅವನನ್ನೇ ಅನುಸರಿಸುತ್ತಾರೆ ಈ ಪ್ರಜಾಪ್ರಭುತ್ವದಲ್ಲಿ ರಾಜನೇ ಇಲ್ಲದಿರುವುದರಿಂದ ಪ್ರಜೆಗಳೇ ಕಾರಣ.

ವೃದ್ಧಾರ್ಕೋ ಹೋಮಧೂಮಶ್ಚ ಬಾಲಸ್ತ್ರೀ ನಿರ್ಝರೋದಕಮ್ ।
ಆಯುಷ್ಯವರ್ಧಕಂ ನಿತ್ಯಂ ರಾತ್ರೌ ಕ್ಷೀರಾನ್ನಭೋಜನಮ್ ॥೨೬೪॥

ಮುಳುಗುತ್ತಿರುವ (ಸಂಜೆಯ) ಸೂರ್ಯ, ಹೋಮಧೂಮ,

ಬಾಲಸ್ತ್ರೀ, ಹರಿಯುವ ಗಿರಿನದಿಯ ನೀರು, ರಾತ್ರಿಯಲ್ಲಿ ಕ್ಷೀರಾನ್ನ ಭೋಜನ ಇವು ಆಯುರ್ವರ್ಧಕಗಳು.

ಮಾತಾ ಯದಿ ವಿಷಂ ದದ್ಯಾತ್ಪಿತಾ ವಿಕ್ರೀಯತೇ ಸುತಮ್ ।
ರಾಜಾ ಹರತಿ ಸರ್ವಸ್ವಂ ಶರಣಂ ಕಂ ವ್ರಜೇತ್ತದಾ ॥ ೨೬೫ ॥

ತಾಯಿಯೇ ಮಗುವಿಗೆ ವಿಷ ಕೊಟ್ಟರೆ, ತಂದೆಯೇ ಮಗನನ್ನು ಮಾರಿಬಿಟ್ಟರೆ, ರಾಜನೇ ಸರ್ವಸ್ವವನ್ನೂ ಕಸಿದುಕೊಂಡರೆ ದಿಕ್ಕಾರು ?

ಆಪದ್ಗತಂ ಹಸಸಿ ಕಿಂ ದ್ರವಿಣಾಂಧ, ಮೂಢ,
ಲಕ್ಷ್ಮೀಃ ಸ್ಥಿರಾ ನ ಭವತೀತಿ ಕಿಮತ್ರ ಚಿತ್ರಮ್ ।
ಏತಾನ್ಪ್ರಪಶ್ಯಸಿ ಘಟಾನ್ ಜಲಯಂತ್ರಚಕ್ರೇ
ರಿಕ್ತಾ ಭವಂತಿ ಭರಿತಾ ಭರಿತಾಶ್ಚ ರಿಕ್ತಾಃ ॥ ೨೬೬ ॥

ಎಲೈ ಧನಾಂಧನಾದ ಮೂಢನೇ, ಕಷ್ಟದಲ್ಲಿರುವಾಗ ನೋಡಿ ನಗಬೇಡ. ಲಕ್ಷ್ಮಿಯು ಸ್ಥಿರವಲ್ಲ, ಇದು ಆಶ್ಚರ್ಯಕರವೂ ಅಲ್ಲ. ಏತವನ್ನು ಎತ್ತುವಾಗ ಘಟವು (ನೀರು ತುಂಬುವ ಪಾತ್ರೆಯು) ತುಂಬುತ್ತಿರುತ್ತದೆ. ಮತ್ತು ಬರಿದಾಗುತ್ತಿರುತ್ತದೆ. ಇಂದು ಕಷ್ಟ, ನಾಳೆ ಸುಖ; ನಾಳೆ ಸುಖ, ನಾಡಿದ್ದು ದುಃಖ; ಯಾವುದೂ ಸ್ಥಿರವಲ್ಲ, ಕಾಲಗತಿಯೇ ಹೀಗೆ.

ಲ

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ ।
ಲಲಾಟಲಿಖಿತಾ ರೇಖಾ ನ ಶಕ್ಯಾ ಪರಿಮಾರ್ಜಿತುಮ್ ॥ ೨೬೭

ಹರಿಯಾಗಲೀ, ಹರನಾಗಲೀ, ಬ್ರಹ್ಮನಾಗಲೀ, ದೇವತೆಗಳಾಗಲೀ ಹಣೆಯ ಬರಹವನ್ನು ತಪ್ಪಿಸಲಾರರು.

ಲೋಭಮೂಲಾನಿ ಪಾಪಾನಿ ವ್ಯಾಧಯೋ ರಸಮೂಲಕಾಃ ।
ಸ್ನೇಹಮೂಲಾನಿ ದುಃಖಾನಿ ತ್ರೀಣಿ ತ್ಯಕ್ತ್ವಾ ಸುಖೀ ಭವ ॥ ೨೬೮ ॥

ಲೋಭವೇ ಪಾಪಕ್ಕೆ ಮೂಲ, ರಸಗಳೇ ರೋಗಕ್ಕೆ ಮೂಲ (ಉಪ್ಪು ಹುಳಿ ಸಿಹಿ ಮುಂತಾದವು) ಸ್ನೇಹವೇ ದುಃಖಕ್ಕೆ ಮೂಲ. ಸುಖವಾಗಿರ ಬೇಕಾದರೆ ಈ ಮೂರನ್ನೂ ಬಿಡಬೇಕು. ''ಅತಿ ಸ್ನೇಹಃ ಪಾಪಶಂಕೀ'' ಎಂದು ಕಾಳಿದಾಸನು ಶಾಕುಂತಲ ನಾಟಕದಲ್ಲಿ ಹೇಳಿದ್ದಾನೆ. ಸ್ನೇಹವು ಹೆಚ್ಚಾದಾಗ ಎಲ್ಲಿ ಕೆಡುಕಾಗುವುದೋ ಎಂಬ ಭಯವಿರುತ್ತದೆ. ಈ ಕಾಲದಲ್ಲಿ ಸಕ್ಕರೆ ಉಪ್ಪುಗಳನ್ನು ಬಿಡುತ್ತಿರುವುದು ರೋಗವು ರಸಮೂಲ ಎನ್ನುವುದಕ್ಕೆ ಸಮರ್ಥಕ.

ಯದ್ಯಪಿ ಸ್ಯಾತ್ ಸ್ವಯಂ ಬ್ರಹ್ಮಾ ತ್ರೈಲೋಕ್ಯಾಕರ್ಷಣಕ್ಷಮಃ ।
ತಥಾಪಿ ಲೌಕಿಕಾಚಾರಂ ಮನಸಾಪಿ ನ ಲಂಘಯೇತ್ ॥ ೨೬೯ ॥

ಮೂರು ಲೋಕಗಳನ್ನೂ ಆಕರ್ಷಿಸಬಲ್ಲ ಸಾಕ್ಷಾತ್ ಬ್ರಹ್ಮನೇ ತಾನಾದರೂ ಕೂಡ, ಲೌಕಿಕಾಚಾರಗಳನ್ನು ಮೀರಬಾರದು.

ವ

ಕೈವರ್ತಕರ್ಕಶಕರಗ್ರಹಣಚ್ಯುತೋಽಪಿ
ಜಾಲಾಂತರೇ ನಿಪತಿತಃ ಶಫರೋ ವರಾಕಃ ।
ದೈವಾತ್ತತೋ ವಿಗಲಿತೋ ಗಿಲಿತೋ ಬಕೇನ
ವಕ್ರೇ ವಿಧೌ ವದ ಕಥಂ ವ್ಯವಸಾಯಸಿದ್ಧಿಃ ॥ ೨೭೦ ॥

ಒಂದು ಮೀನು ಬೆಸ್ತನ ಕೈಯಿಂದ ತಪ್ಪಿಸಿಕೊಂಡು ಬಲೆಗೆ ಬಿದ್ದಿತು. ಅಲ್ಲಿಂದಲೂ ನುಸುಳಿಕೊಂಡು ಈಚೆಗೆ ಬಂದರೆ ಕೊಕ್ಕರೆಯು ನುಂಗಿ

ಬಿಟ್ಟಿತು. ಹೀಗೆ ವಿಧಿಯು ನಮಗೆ ವಿರುದ್ಧವಾಗಿದ್ದಾಗ ನಮ್ಮ ಪ್ರಯತ್ನವೇನೂ ಸಾಗುವುದಿಲ್ಲ.

ಕರ್ಮಣೋ ಹಿ ಪ್ರಧಾನತ್ವಂ ಕಿಂ ಕುರ್ವಂತಿ ಶುಭಾ ಗ್ರಹಾಃ ।
ವಸಿಷ್ಠದತ್ತಲಗ್ನೋಽಪಿ ರಾಮಃ ಕಿಂ ಭ್ರಮತೇ ವನಮ್ ॥ ೨೭೧ ॥

ಲೋಕದಲ್ಲಿ ಕರ್ಮಫಲಕ್ಕೇ ಪ್ರಾಧಾನ್ಯ. ಶುಭಗ್ರಹಗಳು ಏನೂ ಮಾಡಲಾರವು. ವಸಿಷ್ಠರು ಪಟ್ಟಾಭಿಷೇಕಕ್ಕೆ ಲಗ್ನವಿಟ್ಟಿದ್ದರೂ: ರಾಮನಿಗೆ ವನವಾಸ ತಪ್ಪಲಿಲ್ಲ.

ಶತೇಷು ಜಾಯತೇ ಶೂರಃ ಸಹಸ್ರೇಷು ಚ ಪಂಡಿತಃ ।
ವಕ್ತಾ ದಶಸಹಸ್ರೇಷು ದಾತಾ ಲಕ್ಷೇಷು ವಾ ನ ವಾ ॥ ೨೭೨ ॥

ನೂರಕ್ಕೆ ಒಬ್ಬ ವೀರನೂ, ಸಹಸ್ರಕ್ಕೆ ಒಬ್ಬ ಪಂಡಿತನೂ, ಹತ್ತು ಸಾವಿರಕ್ಕೆ ಒಬ್ಬ ವಾಗ್ಮಿಯೂ, ಹುಟ್ಟುವರು. ದಾನಿಯು ಲಕ್ಷಕ್ಕೆ ಒಬ್ಬ ಹುಟ್ಟ ಬಹುದೋ ಏನೋ?

ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರೇ ವಿನಶ್ಯತಿ ।
ಪುಣ್ಯಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ ॥ ೨೭೩ ॥

ಅನ್ಯಕ್ಷೇತ್ರದಲ್ಲಿ ಮಾಡಿದ ಪಾಪವು ಪುಣ್ಯಕ್ಷೇತ್ರದಲ್ಲಿ ನಾಶವಾಗುತ್ತದೆ. ಪುಣ್ಯಕ್ಷೇತ್ರದಲ್ಲಿ ಮಾಡಿದ ಪಾಪವು ವಜ್ರಲೇಪದಂತೆ ಅಪರಿಹಾರ್ಯವಾಗುತ್ತದೆ.

ಅನ್ಯೈಸ್ಸಾಕಂ ವಿರೋಧೇ ತು ವಯಂ ಪಂಚೋತ್ತರಂಶತಮ್ ।
ಪರಸ್ಪರವಿರೋಧೇ ತು ವಯಂ ಪಂಚ ಚ ತೇ ಶತಮ್ ॥ ೨೭೪ ॥

ಇದು ಧರ್ಮರಾಜನ ಮಾತು. ಬೇರೆಯವರು ನಮ್ಮನ್ನು ಕೆಣಕಿದಾಗ ನಾವು ನೂರೈದು ಜನರೂ ಒಂದೇ ಆಗುವೆವು. ನಾವು ನಾವೇ ಕಾದಾಡಿ

ದಾಗ ನಾವು ಐದು ಮಂದಿ ಒಂದು. ದುರ್ಯೋಧನಾದಿಗಳು ನೂರು ಮಂದಿ ಒಂದು. ಇದು ಒಗ್ಗಟ್ಟನ್ನೂ ವಿಶಾಲಬುದ್ಧಿಯನ್ನೂ ತೋರಿಸುತ್ತದೆ.

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ ।
ತಸ್ಮಾತ್ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ ॥ ೨೭೫ ॥

ಪ್ರಿಯವಚನವನ್ನು ಆಡುವುದರಿಂದ ಎಲ್ಲ ಪ್ರಾಣಿಗಳೂ ಸಂತೋಷ ಪಡುತ್ತವೆ ಎಂದಮೇಲೆ ಪ್ರಿಯವಚನವನ್ನೇ ನಾವು ಏಕೆ ಆಡಬಾರದು? ಮಾತಿಗೇನು ಬರ?

ಹಸ್ತಾದಪಿ ನ ದಾತವ್ಯಂ ಗೃಹಾದಪಿ ನ ದೀಯತೇ ।
ಪರೋಪಕರಣಾರ್ಥಾಯ ವಚನೇ ಕಾ ದರಿದ್ರತಾ ॥ ೨೭೬ ॥

ಕೈಯಿಂದಲೂ ಏನನ್ನೂ ಕೊಡಬೇಕಾಗಿಲ್ಲ. ಮನೆಯಿಂದಲೂ ಏನನ್ನೂ ಕೊಡಬೇಕಾಗಿಲ್ಲ. ಪರೋಪಕಾರಕ್ಕಾಗಿ ಎರಡು ಒಳ್ಳೆಯ ಮಾತಾಡಿದರೆ ಏನು ನಷ್ಟ?

ಅಶಕ್ತಸ್ತು ಭವೇತ್ಸಾಧುಃ ಬ್ರಹ್ಮಚಾರೀ ಚ ನಿರ್ಧನಃ ।
ವ್ಯಾಧಿತೋ ದೇವಭಕ್ತಶ್ಚ ವೃದ್ಧಾ ನಾರೀ ಪತಿವ್ರತಾ ॥ ೨೭೭ ॥

ಕೈಲಾಗದವನು ಸಾಧುವೂ, ಧನವಿಲ್ಲದವನು ಬ್ರಹ್ಮಚಾರಿಯೂ, ರೋಗಿಯು ದೈವಭಕ್ತನೂ, ಮುದುಕಿಯು ಪತಿವ್ರತೆಯೂ ಆಗುತ್ತಾಳೆ.

ವಿಷಂ ಕುಪಠಿತಾ ವಿದ್ಯಾ ವಿಷಂ ವ್ಯಾಧಿರನೌಷಧಃ ।
ವಿಷಂ ವ್ಯಾಧಿರ್ದರಿದ್ರಸ್ಯ ವೃದ್ಧಸ್ಯ ತರುಣೀ ವಿಷಮ್ ॥ ೨೭೮ ॥

ಸರಿಯಾಗಿ ಓದದ ವಿದ್ಯೆಯೂ ಔಷಧೋಪಚಾರವಿಲ್ಲದ ರೋಗವೂ, ದರಿದ್ರನಿಗೆ ಬಂದ ರೋಗವೂ ವೃದ್ಧನಿಗೆ ತರುಣಿಯೂ ವಿಷದಂತೆ ಪರಿಣಮಿಸುತ್ತಾರೆ.

ನಾರೀಣಾಂ ನಾಯಕಂ ನೇತ್ರಂ ವೈಶ್ಯಾನಾಂ ನಾಯಕಂ ಧನಮ್ ।
ವಿಪ್ರಾಣಾಂ ನಾಯಿಕಾ ವಿದ್ಯಾ ವೃಂತಾಕಃ ಶಾಕನಾಯಕಃ ॥ ೨೭೯ ॥

ಕಣ್ಣಿನಿಂದಲೇ ನಾರಿಯರಿಗೆ ಪ್ರಾಶಸ್ತ್ಯ. ವೈಶ್ಯರಿಗೆ ಧನದಿಂದಲೂ, ಬ್ರಾಹ್ಮಣರಿಗೆ ವಿದ್ಯೆಯಿಂದಲೂ ಬೆಲೆ. ಬದನೆಕಾಯಿಯು ಶಾಕನಾಯಕ. ತರಕಾರಿಗಳಲ್ಲಿ ಮುಖ್ಯ. ತೊಟ್ಟು ಉದ್ದವಾಗಿರುವುದರಿಂದ ಆಕರ್ಷಕ ವಾಗಿರುತ್ತದೆ.

ವೃಂತಾಕಃ ಕೋಮಲಃ ಪಥ್ಯಃ ಕೂಷ್ಮಾಂಡಃ ಕೋಮಲೋ ವಿಷಃ ।
ಆರ್ದ್ರಕಂ ತು ಸದಾ ಪಥ್ಯಂ ಅಪಥ್ಯಂ ಬದರೀಫಲಮ್ ॥ ೨೮೦ ॥

ಎಳೆಯ ಬದನೆಯಕಾಯಿ ಪಥ್ಯ. ಎಳೆಯ ಕುಂಬಳಕಾಯಿ ವಿಷ. ಹಸಿ ಶುಂಠಿಯು ಯಾವಾಗಲೂ ಪಥ್ಯ. ಬದರೀ (ಎಳಚೀಹಣ್ಣು) ಫಲವು ಅಪಥ್ಯ. ಅಂದರೆ ತಿನ್ನಬಾರದು.

ಯಜ್ಞೋಪವೀತೇ ದ್ವೇ ಧಾರ್ಯೇ ಶ್ರೌತೇ ಸ್ಮಾರ್ತೇ ಚ ಕರ್ಮಣಿ ।
ತೃತೀಯಮುತ್ತರೀಯಾರ್ಥಂ ವಸ್ತ್ರಾಭಾವೇ ಚತುರ್ಥಕಮ್ ॥ ೨೮೧

ಶ್ರೌತ ಮತ್ತು ಸ್ಮಾರ್ತಕರ್ಮಾನುಷ್ಠಾನಕ್ಕಾಗಿ ಎರಡು ಜನಿವಾರಗಳನ್ನು ಧರಿಸಬೇಕು. ಉತ್ತರೀಯಕ್ಕೆ ಬದಲಾಗಿ ಮೂರನೆಯದನ್ನೂ, ವಸ್ತ್ರಾಭಾವ ವಿದ್ದಾಗ ನಾಲ್ಕನೆಯದನ್ನೂ ಧರಿಸಿಕೊಳ್ಳಬೇಕು. ಅಂದರೆ ಕೌಪೀನವನ್ನು ಮಾತ್ರ ಧರಿಸಿದ್ದಾಗ ಎಂದು ತಿಳಿದುಕೊಳ್ಳಬೇಕು. ಹಿಂದೆ ಋಷಿಗಳು ಅರಣ್ಯದಲ್ಲಿ ಕೇವಲ ಕೌಪೀನಧಾರಿಗಳಾಗಿ ತಪಸ್ಸನ್ನು ಮಾಡುತ್ತಿದ್ದರೆಂದು ಹೇಳಲ್ಪಟ್ಟಿದೆ. ಅಂತಹ ಸಂದರ್ಭದಲ್ಲಿ ನಾಲ್ಕು ಜನಿವಾರವಿರಬೇಕೆಂದು ಶಾಸ್ತ್ರ

ಶರ್ಮಾಂತಂ ಬ್ರಾಹ್ಮಣಸ್ಯೋಕ್ತಂ ವರ್ಮಾಂತಂ ಕ್ಷತ್ರಿಯಸ್ಯ ಚ ।
ಗುಪ್ತಾಂತಂ ಚೈವ ವೈಶ್ಯಸ್ಯ ದಾಸಾಂತಂ ಶೂದ್ರಜನ್ಮನಃ ॥ ೨೮೨ ॥

ಗುರುಹಿರಿಯರಿಗೆ ನಮಸ್ಕಾರ ಮಾಡುವಾಗ ಬ್ರಾಹ್ಮಣನು ಶರ್ಮನೆಂದೂ, ಕ್ಷತ್ರಿಯನು ವರ್ಮನೆಂದೂ, ವೈಶ್ಯನು ಗುಪ್ತನೆಂದೂ, ಶೂದ್ರನು ದಾಸನೆಂದೂ ಹೇಳಿಕೊಂಡು ನಮಸ್ಕರಿಸಬೇಕು. ಇದು ಪ್ರಾಚೀನಪದ್ಧತಿ. ಈಗ ರೂಢಿಯಲ್ಲಿಲ್ಲ.

ದೇಶಾಟನಂ ಪಂಡಿತಮಿತ್ರತಾ ಚ
ಧೀರಾಂಗನಾ ರಾಜಸಭಾಪ್ರವೇಶಃ ।
ಅನೇಕಶಾಸ್ತ್ರಾರ್ಥವಿಲೋಕನಂ ಚ
ಚಾತುರ್ಯಮೂಲಾನಿ ಭವಂತಿ ಪಂಚ ॥ ೨೮೩ ॥

ಮನುಷ್ಯನು ಚತುರನಾಗಲು ದೇಶ ಸಂಚಾರ, ಪಂಡಿತರ ಸ್ನೇಹ, ಓದಿದ ಅಥವಾ ಧೈರ್ಯಶಾಲಿನಿಯಾದ ಸ್ತ್ರೀಯ ಸಂಗಡ ವಿವಾಹ, ರಾಜಕೀಯದಲ್ಲಿ ಮುನ್ನುಗ್ಗುವುದು, ಅನೇಕ ಶಾಸ್ತ್ರಗಳನ್ನು ಓದುವುದು ಹೀಗೆ ಐದು ಘಟನೆಗಳು ಕಾರಣವಾಗುತ್ತವೆ.

ಕಿಂ ವಾಸಸೈವಂ ನ ವಿಚಾರಣೀಯಂ
ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ ।
ಪೀತಾಂಬರಂ ವೀಕ್ಷ್ಯ ದದೌ ಸ್ವಕನ್ಯಾಂ
ಚರ್ಮಾಂಬರಂ ವೀಕ್ಷ್ಯ ವಿಷಂ ಸಮುದ್ರಃ ॥ ೨೮೪ ॥

ವಸ್ತ್ರಕ್ಕೇನು ಬೆಲೆ ? ಎಂದು ಕೇಳಬಾರದು. ಯಾವ ಕಾಲದಲ್ಲೂ ಅದಕ್ಕೆ ಬೆಲೆ ಉಂಟೇ ಉಂಟು. ಸಾಮಾನ್ಯಜನರು ಅದರಿಂದಲೇ ಯೋಗ್ಯತೆಯನ್ನು ನಿರ್ಣಯಿಸುತ್ತಾರೆ. ಇದನ್ನು ಕವಿಯು ಮಾರ್ಮಿಕವಾಗಿ ಈ ರೀತಿ ತಿಳಿಸಿದ್ದಾನೆ. ಸಮುದ್ರರಾಜನು, ಪೀತಾಂಬರಧಾರಿಯಾಗಿದ್ದುದರಿಂದ ವಿಷ್ಣುವಿಗೆ ಲಕ್ಷ್ಮಿಯನ್ನು ಕೊಟ್ಟು, ಚರ್ಮಾಂಬರನಾಗಿದ್ದುದರಿಂದ

ಶಿವನಿಗೆ ವಿಷವನ್ನು ಕೊಟ್ಟುಬಿಟ್ಟನು. ಇದು ಕೇವಲ ಚಮತ್ಕಾರಕ್ಕೆ ಹೇಳಿರುವ ಮಾತು.

ಕೇಯೂರಾ ನ ವಿಭೂಷಯಂತಿ ವಪುಷಂ ಹಾರಾ ನ ಚಂದ್ರೋಜ್ವಲಾಃ
ನ ಸ್ನಾನಂ ನ ವಿಲೇಪನಂ ನ ಕುಸುಮಂ ನಾಲಂಕೃತಾ ಮೂರ್ಧಜಾಃ ।
ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ
ಕ್ಷೀಯಂತೇ ಖಲು ಭೂಷಣಾನಿ ಸತತಂ ವಾಗ್ಭೂಷಣಂ
ಭೂಷಣಮ್ ॥ ೨೮೫ ॥

ಮನುಷ್ಯನಿಗೆ ಒಡವೆಗಳು, ಮುತ್ತಿನಹಾರ, ಸ್ನಾನ, ಲೇಪನ, ಹೂವು, ಬಾಚಲ್ಪಟ್ಟ ಕೇಶರಾಶಿ ಇವಾವುವೂ ಗೌರವವನ್ನು ತರುವುದಿಲ್ಲ. ಅವೆಲ್ಲಾ ಕಾಲಕ್ರಮದಲ್ಲಿ ನಾಶವಾಗುವಂತಹವು. ಸುಸಂಸ್ಕೃತವಾದ ಭಾಷೆಯೊಂದೇ ಶಾಶ್ವತವಾದ ಆಭರಣ.

ಸೌಮಿತ್ರಿರ್ವದತಿ ವಿಭೀಷಣಾಯ ಲಂಕಾಂ
ದೇಹಿ ತ್ವಂ ಭುವನಪತೇ ವಿನೈವ ಕೋಶಮ್ ।
ಏತಸ್ಮಿನ್ರಘುಪತಿರಾಹ ವಾಕ್ಯಮೇತತ್
ವಿಕ್ರೀತೇ ಕರಿಣಿ ಕಿಮಂಕುಶೇ ವಿವಾದಃ ॥ ೨೮೬ ॥

ಲಂಕೆಯನ್ನು ಗೆದ್ದಮೇಲೆ ಲಕ್ಷ್ಮಣನು ರಾಮನಿಗೆ, ಕೋಶಬಲವನ್ನುಳಿಸಿಕೊಂಡು (ಧನವನ್ನು) ಲಂಕಾ ರಾಜ್ಯವನ್ನು ಮಾತ್ರ ವಿಭೀಷಣನಿಗೆ ಕೊಡುವಂತೆ ಹೇಳಿದಾಗ ರಾಮನು, ತಮ್ಮ! ಆನೆಯನ್ನೇ ಮಾರಿದಮೇಲೆ ಅಂಕುಶದಿಂದೇನಾಗಬೇಕು? ಎಂದು ಹೇಳಿದನು. ಅಂದರೆ ದೇಶಕ್ಕಿರುವ ಬೆಲೆ ಕೋಶಕ್ಕಿಲ್ಲ ಎಂದರ್ಥ.

ನ ಭೂತಪೂರ್ವಂ ನ ಕದಾಪಿ ವಾರ್ತಾ
ಹೇಮ್ನಃ ಕುರಂಗೋ ನ ಕದಾಪಿ ದೃಷ್ಟಃ ।
ತಥಾಪಿ ತೃಷ್ಣಾ ರಘುನಂದನಸ್ಯ
ವಿನಾಶಕಾಲೇ ವಿಪರೀತಬುದ್ಧಿಃ ॥ ೨೮೭ ॥

ಚಿನ್ನದ ಜಿಂಕೆಯು ಹಿಂದಿರಲಿಲ್ಲ. ಯಾರೂ ನೋಡಿಯೂ ಇಲ್ಲ. ಆದರೂ ರಾಮನಿಗೆ ಅದರಮೇಲೆ ಆಸೆಯಾಯಿತೆಂದರೆ ಏನು ಹೇಳುವುದು? ವಿನಾಶಕಾಲದಲ್ಲಿ ಬುದ್ಧಿಯು ವಿರುದ್ಧವಾಗಿ ತಿರುಗುತ್ತದೆ. ವಿಪರೀತ ಎಂದರೆ ವಿರುದ್ಧವೆಂದು ಅರ್ಥ.

ವಿಷಾದಪ್ಯಮೃತಂ ಗ್ರಾಹ್ಯಮಮೇಧ್ಯಾದಪಿ ಕಾಂಚನಮ್ ।
ನೀಚಾದಪ್ಯುತ್ತಮಾಂ ವಿದ್ಯಾಂ ಸ್ತ್ರೀರತ್ನಂ ದುಷ್ಕುಲಾದಪಿ ॥ ೨೮೮ ॥

ವಿಷದಿಂದ ಅಮೃತವನ್ನೂ, ಅಶುದ್ಧ ವಸ್ತುವಿನಿಂದ ಚಿನ್ನವನ್ನೂ, ಒಳ್ಳೆಯ ವಿದ್ಯೆಯನ್ನು ನೀಚನಿಂದಲಾದರೂ, ಉತ್ತಮ ಸ್ತ್ರೀಯನ್ನು ದುಷ್ಕುಲ (ವಂಶ) ದಿಂದಲೂ ಸ್ವೀಕರಿಸಬಹುದು. ಒಟ್ಟಿನಲ್ಲಿ ಕೆಟ್ಟದ್ದರಿಂದಲೂ ಒಳ್ಳೆಯದನ್ನೇ ಸ್ವೀಕರಿಸಬೇಕು. ನಾಲ್ಕನೆಯ ಪಾದವು ವಸಿಷ್ಠ ಪರಾಶರರಂತಹವರಿಗೆ ಸಲ್ಲುತ್ತದೆಯೆಂದೂ ಸಾಮಾನ್ಯ ಜನರಿಗಲ್ಲವೆಂದೂ ಒಂದು ಮತ. ಒಂದು ವಂಶದಲ್ಲಿ ತಾಯಿ-ತಂದೆ ಅಪವಾದಕ್ಕೆ ತುತ್ತಾಗಿದ್ದರೂ ಹುಡುಗಿಯು ಯೋಗ್ಯಳಾಗಿದ್ದರೆ ಸ್ವೀಕಾರಾರ್ಹಳೆಂದು ಇನ್ನೊಂದು ಮತ.

ಪರೋಕ್ಷೇ ಕಾರ್ಯಹಂತಾರಂ ಪ್ರತ್ಯಕ್ಷೇ ಪ್ರಿಯವಾದಿನಮ್ ।
ವರ್ಜಯೇತ್ತಾದೃಶಂ ಮಿತ್ರಂ ವಿಷಕುಂಭಂ ಪಯೋಮುಖಮ್ ॥೨೮೯

ಹಿಂದೆ ಕೆಲಸವನ್ನು ಕೆಡಿಸುವ, ಮುಂದೆ ಪ್ರಿಯವಚನವಾಡುವ ಕಪಟ ಮಿತ್ರನನ್ನು—ಮೇಲೆ ಹಾಲು, ಒಳಗೆ ವಿಷತುಂಬಿರುವ ಗಡಿಗೆಯಂತೆ ಬಿಟ್ಟುಬಿಡಬೇಕು.

ಅನರ್ಘ್ಯಮಪಿ ಮಾಣಿಕ್ಯಂ ಹೇಮಾಶ್ರಯಮಪೇಕ್ಷತೇ ।
ನಿರಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ ॥ ೨೯೦ ॥

ಮಾಣಿಕ್ಯವೆಂಬ ರತ್ನವು ಸ್ವತಃ ಅಮೂಲ್ಯವಾಗಿದ್ದರೂ, ಅದು ಶೋಭಿಸಲು ಸುವರ್ಣದ ಆಶ್ರಯಬೇಕಾಗುತ್ತದೆ. ಇದರಂತೆಯೇ ವಿದ್ವಾಂಸರೂ, ಸ್ತ್ರೀಯರೂ, ಬಳ್ಳಿಗಳೂ ಕೂಡ ಆಶ್ರಯವಿಲ್ಲದಿದ್ದರೆ ಶೋಭಿಸುವುದಿಲ್ಲ.

ಸ್ವಗೃಹೇ ಪೂಜ್ಯತೇ ಮೂರ್ಖಃ ಸ್ವಗ್ರಾಮೇ ಪೂಜ್ಯತೇ ಪ್ರಭುಃ ।
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ಸರ್ವತ್ರ ಪೂಜ್ಯತೇ ॥ ೨೯೧ ॥

ಮೂರ್ಖನಿಗೆ ಮನೆಯಲ್ಲಿ ಮಾತ್ರ ಹೇಗೋ ಬೆಲೆ ಸಿಗುತ್ತದೆ. ಗ್ರಾಮಾಧಿಕಾರಿಗೆ ತನ್ನ ಗ್ರಾಮದಲ್ಲಿ ಮಾತ್ರ. ರಾಜನಿಗೆ ತನ್ನ ದೇಶದಲ್ಲಿ ಮಾತ್ರ ಗೌರವವಿದ್ದರೆ ವಿದ್ವಾಂಸರಿಗೆ ಎಲ್ಲಾ ಕಡೆಯಲ್ಲೂ ಗೌರವವುಂಟು.

ನಖಿನಾಂ ಚ ನದೀನಾಂ ಚ ಶೃಂಗಿಣಾಂ ಶಸ್ತ್ರಪಾಣಿನಾಮ್ ।
ವಿಶ್ವಾಸೋ ನೈವ ಕರ್ತವ್ಯಃ ಸ್ತ್ರೀಷು ರಾಜಕುಲೇಷು ಚ ॥ ೨೯೨ ॥

ಉಗುರುಳ್ಳ ಹುಲಿ ಕರಡಿ ಮುಂತಾದ ಪ್ರಾಣಿಗಳನ್ನೂ, ನದಿಗಳನ್ನೂ (ಯಾವಾಗ ಪ್ರವಾಹ ಬರುವುದೋ) ಕೊಂಬುಳ್ಳ ಎತ್ತು ಎಮ್ಮೆ ಮುಂತಾದುವುಗಳನ್ನೂ, ಶಸ್ತ್ರಪಾಣಿಗಳನ್ನೂ, ಸ್ತ್ರೀಯರನ್ನೂ, ರಾಜಕೀಯ ಪುರುಷರನ್ನೂ ನಂಬಬಾರದು.

ಧನಂಜಯೇ ಹಾಟಕಸಂಪರೀಕ್ಷಾ ಮಹಾರಣೇ ಶಸ್ತ್ರಭೃತಾಂ ಪರೀಕ್ಷಾ ।
ವಿಪತ್ತಿಕಾಲೇ ಗೃಹಿಣೀಪರೀಕ್ಷಾ ವಿದ್ಯಾವತಾಂ ಭಾಗವತೇ ಪರೀಕ್ಷಾ ॥

ಚಿನ್ನವನ್ನು ಅಗ್ನಿಯಲ್ಲೂ ಶಸ್ತ್ರಧಾರಿಯನ್ನು ಯುದ್ಧದಲ್ಲೂ ಹೆಂಡತಿಯನ್ನು ಆಪತ್ತಿನಲ್ಲೂ ವಿದ್ವಾಂಸರನ್ನು, ಭಾಗವತದಲ್ಲೂ ಪರೀಕ್ಷಿಸಬೇಕು. ರಾಮಾಯಣ ಭಾರತಗಳಿಗಿಂತ ಭಾಗವತವು ಕಷ್ಟವೆಂದು ತಾತ್ಪರ್ಯ.

ವ್ಯಸನಾನಿ ಸಂತಿ ಬಹುಶೋ ವ್ಯಸನದ್ವಯಮೇವ ಕೇವಲಂ ವ್ಯಸನಮ್ ।
ವಿದ್ಯಾಭ್ಯಸನಂ ವ್ಯಸನಂ ಹ್ಯಥವಾ ಹರಿಪಾದಸೇವನಂ ವ್ಯಸನಮ್ ೨೯೪

ವ್ಯಸನವೆಂದರೆ ಚಟ, ಗೀಳು. ಅಭ್ಯಾಸ ಒಳ್ಳೆಯದಾದರೆ ಸುವ್ಯಸನ, ಕೆಟ್ಟದ್ದಾದರೆ ದುರ್ವ್ಯಸನ. ಲೋಕದಲ್ಲಿ ಎಷ್ಟೋ ವ್ಯಸನಗಳುಂಟು ಅವುಗಳಲ್ಲಿ ಮುಖ್ಯವಾದುವು ಎರಡೇ. ವಿದ್ಯೆ ಕಲಿಯುವ ವ್ಯಸನ ಮತ್ತು ಹರಿಪಾದಸೇವೆಯ ವ್ಯಸನ.

ವಿವಾಹೋ ಜನ್ಮ ಮರಣಂ ಯದಾ ಯತ್ರ ಚ ಯೇನ ಚ ।
ತ್ರಯಃ ಕಾಲಕೃತಾಃ ಪಾಶಾಃ ಶಕ್ಯಂತೇ ನ ನಿವರ್ತಿತುಮ್ ॥ ೨೯೫ ॥

ವಿವಾಹ, ಜನನ, ಮರಣಗಳು, ಯಾವಾಗ ಎಲ್ಲಿ ಯಾರಿಂದ ಅಥವಾ ಯಾರ ಸಂಗಡ ಆಗುತ್ತವೆಯೆಂಬುದನ್ನು ಹೇಳಲು ಸಾಧ್ಯವಿಲ್ಲ. (ಇವು ಆಕಾಶ, ಸಮುದ್ರ, ವಿಮಾನ ಪಾತಾಳಗಳಲ್ಲೂ ಆಗುವುದುಂಟು.)

ವೇಷಂ ನ ವಿಶ್ವಸೇತ್ಪ್ರಾಜ್ಞೋ ವೇಷೋ ದೋಷಾಯ ಜಾಯತೇ ।
ರಾವಣೋ ಭಿಕ್ಷುರೂಪೇಣ ಜಹಾರ ಜನಕಾತ್ಮಜಾಮ್ ॥ ೨೯೬ ॥

ವಿವೇಕಶಾಲಿಗಳು ವೇಷಕ್ಕೆ ಬೆಲೆ ಕೊಡಬಾರದು. ಮತ್ತು ನಂಬಲೂ ಬಾರದು. ರಾವಣನು ಭಿಕ್ಷು ವೇಷದಿಂದ ಸೀತೆಯನ್ನು ಅಪಹರಿಸಿದನು. (ಹೀಗೆಯೇ ಅರ್ಜುನನೂ ಸುಭದ್ರೆಯನ್ನು ಅಪಹರಿಸಿದನು)

ವೈದ್ಯರಾಜ ನಮಸ್ತುಭ್ಯಂ ಯಮರಾಜಸಹೋದರ ।
ಯಮಸ್ತು ಹರತೇ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿ ಚ ೨೯೭

ವೈದ್ಯರಾಜನೇ ನಿನಗೆ ನಮಸ್ಕಾರ. ನೀನು ಯಮರಾಜನ ಸಹೋದರ. ಆದರೂ ನಿನಗಿಂತ ಯಮನೇ ಮೇಲು. ಏಕೆಂದರೆ ಯಮನು

ಪ್ರಾಣವನ್ನು ಮಾತ್ರ ಅಪಹರಿಸುತ್ತಾನೆ. ವೈದ್ಯನಾದರೋ ಪ್ರಾಣದ ಜೊತೆಗೆ ಧನವನ್ನೂ ಅಪಹರಿಸುತ್ತಾನೆ. ಈ ಕಾಲದಲ್ಲಿ ಇದು ಹೆಚ್ಚಾಗಿದೆ.

ಶ

ನಾಪಿತಸ್ಯ ಗೃಹೇ ಕ್ಷೌರಂ ಪಾಷಾಣೇ ಗಂಧಲೇಪನಮ್ ।
ಆತ್ಮರೂಪಂ ಜಲೇ ದೃಷ್ಟ್ವಾ ಶಕ್ರಸ್ಯಾಪಿ ಶ್ರಿಯಂ ಹರೇತ್ ॥ ೨೯೮ ॥

ಕ್ಷೌರಿಕನ ಮನೆಯಲ್ಲಿ ಕ್ಷೌರಮಾಡಿಸಿಕೊಳ್ಳುವುದು, ಕಲ್ಲುತೇಯ್ದು ಗಂಧ ಹಚ್ಚಿಕೊಳ್ಳುವುದು (ಅಥವಾ ಗುಂಡುಕಲ್ಲಿಗೆ ಗಂಧ ಹಚ್ಚುವುದು) ಮತ್ತು ನೀರಿನಲ್ಲಿ ತನ್ನ ರೂಪವನ್ನು ನೋಡಿಕೊಳ್ಳುವುದು ಶ್ರೇಯಸ್ಕರವಲ್ಲ. ಹೀಗೆ ಮಾಡುವುದರಿಂದ ಇಂದ್ರನ ಸಂಪತ್ತೂ ಹಾಳಾಗುತ್ತದೆ ಎಂದಮೇಲೆ ನಮ್ಮ ಸಂಪತ್ತು ಉಳಿಯುತ್ತದೆಯೇ ? (ಶಕ್ರಃ =ಇಂದ್ರ)

ಅಜಾರಜಃ ಖರರಜಸ್ತಥಾ ಸಂಮಾರ್ಜನೀರಜಃ ।
ದೀಪಮಂಚಕಯೋಶ್ಛಾಯಾ ಶಕ್ರಸ್ಯಾಪಿ ಶ್ರಿಯಂ ಹರೇತ್ ॥ ೨೯೯

ಮೇಕೆಯ ಕಾಲುಗಳ ಧೂಳು, ಕತ್ತೆಯ ಕಾಲುಗಳ ಧೂಳು, ಕಸಪರಕೆಯ ಧೂಳು, ದೀಪ ಮತ್ತು ಮಂಚಗಳ ನೆರಳು ಮೈಮೇಲೆ ಬೀಳಬಾರದು. ಇವು ಶಕ್ರನ ಸಂಪತ್ತನ್ನೂ ಅಪಹರಿಸುತ್ತವೆ.

ಶನೈಃ ಪಂಥಾಃ ಶನೈಃ ಕಂಥಾಃ ಶನೈಃ ಪರ್ವತಲಂಘನಂ ।
ಶನೈರ್ವಿದ್ಯಾ ಶನೈರ್ವಿತ್ತಂ ಪಂಚೈತಾನಿ ಶನೈಃಶನೈಃ ॥ ೩೦೦ ॥

ದಾರಿಯನ್ನು ನಿಧಾನವಾಗಿ ನಡೆಯಬೇಕು. ಭಾರವನ್ನು ಮೆಲ್ಲಗೆ ಹೊರಬೇಕು. ಮೆಲ್ಲಗೆ ಬೆಟ್ಟವನ್ನು ದಾಟಬೇಕು. ವಿದ್ಯೆಯನ್ನೂ ಧನವನ್ನೂ ನಿಧಾನವಾಗಿ ಸಂಗ್ರಹಿಸಬೇಕು. ಆತುರಪಡಬಾರದು.

ಅಸ್ಥಿವದ್ದಧಿವಚ್ಚೈವ ಕುಷ್ಠವತ್ಪಿಷ್ಟವತ್ತಥಾ ।
ರಾಜನ್ ತವ ಯಶೋಭಾತಿ ಶರಚ್ಚಂದ್ರಮರೀಚಿವತ್ ॥ ೩೦೧ ॥

ಒಬ್ಬ ರಾಜನ ವರ್ಣನೆ. ಕಳಪೆಯ ಕವಿತೆ. ಕೊನೆಯ ಪಾದಕ್ಕೇ ಬೆಲೆ. ಇದು ಕಾಳಿದಾಸನದು ಎಂದು ಹೇಳುತ್ತಾರೆ. ರಾಜನೇ, ನಿನ್ನ ಕೀರ್ತಿಯು ಮೂಳೆ, ಮೊಸರು, ಕುಷ್ಠ ಮತ್ತು ಹಿಟ್ಟಿನಂತೆ ಶೋಭಿಸುತ್ತಾ ಇದೆ. ಮತ್ತು ಶರಚ್ಚಂದ್ರನ ಕಿರಣಗಳಂತೆಯೂ ಹರಡಿಕೊಂಡು ಶೋಭಿಸುತ್ತಿದೆ.

ಶತ್ರೋರಪಿ ಗುಣಾ ವಾಚ್ಯಾ ದೋಷವಾಚ್ಯಾ ಗುರೋರಪಿ ।
ಸರ್ವದಾ ಸರ್ವಯತ್ನೇನ ಪುತ್ರೇ ಶಿಷ್ಯವದಾಚರೇತ್ ॥ ೩೦೨ ॥

ಗುಣವು ಶತ್ರುವಿನಲ್ಲಿದ್ದರೂ ಹೊಗಳಬೇಕು. ದೋಷವು ಗುರುಗಳಲ್ಲಿದ್ದರೂ ಖಂಡಿಸಬೇಕು. ಯಾವಾಗಲೂ, ಯಾವ ರೀತಿ ಯಿಂದಲೂ ಮಗನನ್ನು ಶಿಷ್ಯನಂತೆ ನೋಡಿಕೊಳ್ಳಬೇಕು.

ಶಠಂ ಪ್ರತಿ ಶಠಂ ಬ್ರೂಯಾತ್ ಆದರಂ ಪ್ರತಿ ಚಾದರಂ ।
ತತ್ರ ದೋಷೋ ನ ಭವತಿ ದುಷ್ಟೇ ದುಷ್ಟಂ ಸಮಾಚರೇತ್॥೩೦೩॥

ಒರಟರಿಗೆ ಒರಟಾಗಿಯೂ, ಆದರವುಳ್ಳವರಿಗೆ ಆದರದಿಂದಲೂ ಉತ್ತರಿಸಬೇಕು. ದುಷ್ಟರಿಗೆ ದುಷ್ಟತನವೇ ಸರಿ. ಅದರಲ್ಲಿ ತಪ್ಪೇನೂ ಇಲ್ಲ.

ಶತಂವಿಹಾಯ ಭೋಕ್ತವ್ಯಂ ಸಹಸ್ರಂ ಸ್ನಾನಮಾಚರೇತ್ ।
ಲಕ್ಷಂ ವಿಹಾಯ ದಾತವ್ಯಂ ಕೋಟಿಂ ತ್ಯಕ್ತ್ವಾ ಹರಿಂ ಭಜೇತ್ ॥ ೩೦೪

ನೂರು ಅಡ್ಡಿಗಳಿದ್ದರೂ ಬಿಟ್ಟು ಊಟ ಮಾಡಬೇಕು. ಸಾವಿರ ವಿದ್ದರೂ ಸ್ನಾನ ಮಾಡಬೇಕು. ಲಕ್ಷವಿದ್ದರೂ ದಾನ ಮಾಡಬೇಕು. ಕೋಟಿ ಯಿದ್ದರೂ ಬಿಟ್ಟು ಹರಿಯನ್ನು ಭಜಿಸಬೇಕು.

ಶ್ಮಶಾನಾಂತೇ ಪುರಾಣಾಂತೇ ಮೈಥುನಾಂತೇ ಚ ಯಾ ಮತಿಃ ।
ಸಾ ಮತಿಃ ಸರ್ವದಾ ಸ್ಯಾಚ್ಚೇತ್ ಕೋ ನ ಮುಚ್ಯೇತ ಬಂಧನಾತ್ ॥ ೩೦೫

ಶ್ಮಶಾನಾಂತದಲ್ಲಿ ಪುರಾಣಾಂತದಲ್ಲಿ ಮತ್ತು ಮೈಥುನಾಂತದಲ್ಲಿ ಯಾವ ಬುದ್ಧಿಯಿರುತ್ತದೆಯೋ ಅದೇ ಬುದ್ಧಿಯು ಯಾವಾಗಲೂ ಇದ್ದಲ್ಲಿ ಯಾರು ತಾನೇ ಸಂಸಾರಬಂಧನದಿಂದ ಬಿಡುಗಡೆ ಹೊಂದುವುದಿಲ್ಲ?

ಶ್ವಶುರಗೃಹನಿವಾಸಃ ಸ್ವರ್ಗತುಲ್ಯೋ ನರಾಣಾಂ
ಯದಿ ವಸತಿ ವಿವೇಕೀ ಪಂಚ ವಾ ಷಡ್ದಿನಾನಿ ।
ದಧಿಮಧುಘೃತವರ್ಜ್ಯಂ ಮಾಸಮೇಕಂ ವಸೇಚ್ಚೇತ್
ತದುಪರಿ ದಿನಮೇಕಂ ಪಾದರಕ್ಷಾಪ್ರಯೋಗಃ ॥ ೩೦೬ ॥

ಮಾನವರಿಗೆ ಮಾವನ ಮನೆಯ ವಾಸವು ಸ್ವರ್ಗದಂತಿರುತ್ತದೆ. ವಿವೇಕಶಾಲಿಯಾದವನು ಐದಾರುದಿನ ಮಾತ್ರ ಇರಬೇಕು. ತಿಂಗಳಿದ್ದರೆ ಹಾಲು ಮೊಸರು ತುಪ್ಪಗಳು ತಪ್ಪಿ ಹೋಗುತ್ತವೆ; ಅದರ ಮೇಲೂ ಇರಲು ಹತ್ತಿದರೆ ಪಾದರಕ್ಷಾ ಪ್ರಹಾರವಾಗುತ್ತದೆ. ಅಂದರೆ ಮರ್ಯಾದೆ ಇರುವುದಿಲ್ಲ ಎಂದು ತಾತ್ಪರ್ಯ.

ಶ್ರದ್ಧಯಾ ದೀಯತೇ ಯಸ್ಮಾಚ್ಛ್ರಾದ್ಧಂ ತೇನ ನಿಗದ್ಯತೇ ।
ಪಿತೄನುದ್ದಿಶ್ಯ ವಿಪ್ರೇಭ್ಯೋ ದತ್ತಂ ಶ್ರಾದ್ಧಮುದಾಹೃತಮ್ ॥ ೩೦೭ ॥

ಪಿತೃದೇವತೆಗಳನ್ನು ಉದ್ದೇಶಿಸಿ ಬ್ರಾಹ್ಮಣರ ಮೂಲಕ ಉಪವಾಸಾದಿ ಶ್ರದ್ಧಾನಿಯಮಗಳಿಂದ ಮಾಡುವ ಕರ್ಮವಿಶೇಷಕ್ಕೆ ಶ್ರಾದ್ಧವೆನ್ನುತ್ತಾರೆ.

ಪ್ರಾತಃಸ್ನಾನಂ ಗವಾಂ ಸೇವಾ ಆರಾಮಃ ಪುಷ್ಪವಾಟಿಕಾ ।
ಮಾತಾಪಿತ್ರೋಶ್ಚ ಶುಶ್ರೂಷಾ ಶಾಸ್ತ್ರಾಯ ಚ ಸುಖಾಯ ಚ ॥

ಪ್ರಾತಃಕಾಲದಲ್ಲಿ ಮೊದಲು ಸ್ನಾನ ಮಾಡುವುದು, ಅನಂತರ

ಗೋಸೇವೆ ಮಾಡುವುದು, ಆಮೇಲೆ ಉಪವನ ಮತ್ತು ಹೂದೋಟಗಳಲ್ಲಿ ವಿಹರಿಸುವುದು ಅಥವಾ ಅವುಗಳ ರಕ್ಷಣೆ ಮತ್ತು ಪೋಷಣೆಯ ಕೆಲಸದಲ್ಲಿ ತೊಡಗುವುದು ಮನೆಗೆ ಬಂದಮೇಲೆ ತಾಯಿ ತಂದೆಗಳ ಸೇವೆ ಮಾಡುವುದು. ಇದರಿಂದ ಸುಖವೂ ಪುಣ್ಯವೂ ಎರಡೂ ಸಿಗುವುದು. ಶಾಸ್ತ್ರಾಚರಣೆಯಿಂದ ಪುಣ್ಯಪ್ರಾಪ್ತಿ, ವ್ಯಾಯಾಮವೂ ಆಗಿ ಆರೋಗ್ಯವೂ ಹೆಚ್ಚುತ್ತದೆ.

ಅಗ್ರತಶ್ಚತುರೋ ವೇದಾಃ ಪೃಷ್ಠತಃ ಸಶರಂ ಧನುಃ ।
ಇದಂ ಬ್ರಾಹ್ಮಮಿದಂ ಕ್ಷಾತ್ರಂ ಶಾಪಾದಪಿ ಶರಾದಪಿ ॥ ೩೦೯ ॥

ಬಾಯಲ್ಲಿ ಚತುರ್ವೇದಗಳು ಹಿಂಭಾಗದಲ್ಲಿ ಧನುರ್ಬಾಣಗಳೂ ಇರುವವನು ಶಾಪದಿಂದಲಾದರೂ ಶರದಿಂದಲಾದರೂ ಶತ್ರುಗಳನ್ನು ನಾಶ ಮಾಡಬಲ್ಲನು. ವಾಗ್ಬಾಣ ಧನುರ್ಬಾಣ ಎರಡರಿಂದಲೂ ಕಾರ್ಯವನ್ನು ಸಾಧಿಸುವವನಾಗಬೇಕು.

ಕ್ರೋಧ ಏವ ಮಹಾನ್ ಶತ್ರುಸ್ತೃಷ್ಣಾ ವೈತರಣೀ ನದೀ ।
ಸಂತೋಷೋ ನಂದನವನಂ ಶಾಂತಿರೇವ ಹಿ ಕಾಮಧುಕ್ ॥೩೧೦॥

ಮನುಷ್ಯನಿಗೆ ಕೋಪವೇ ಮಹಾಶತ್ರು. ದುರಾಸೆಯೇ ವೈತರಣೀ ನದಿ. ಸಂತೋಷವೇ ನಂದನವನ. ಶಾಂತಿಯೇ ಕಾಮಧೇನು.

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ ೩೧೧

ಆಸೆಯಿಲ್ಲದೆ, ಮನಸ್ಸನ್ನು ವಶದಲ್ಲಿಟ್ಟುಕೊಂಡು, ದಾನಾದಿಗಳನ್ನು ಸ್ವೀಕರಿಸದೆ (ಅಥವಾ ಹೆಂಡತಿಯರನ್ನೂ ದೂರ ಮಾಡಿ,) ಕೇವಲ ದೇಹ ರಕ್ಷಣೆಗಾಗಿ, ಆಹಾರ ನಿದ್ರಾದಿಗಳನ್ನು ಮಾಡುತ್ತಿದ್ದರೂ ಪಾಪಬರುವುದಿಲ್ಲ. ಧರ್ಮಸಾಧನೆಗಾಗಿ ದೇಹವನ್ನು ರಕ್ಷಿಸಿಕೊಳ್ಳಬೇಕು. ಪರಿಗ್ರಹ ಎಂದರೆ ಹೆಂಡತಿ ಎಂದೂ ಆಗುತ್ತದೆ.

ಗುರುರಾತ್ಮವತಾಂ ಶಾಸ್ತಾ ರಾಜಾ ಶಾಸ್ತಾ ದುರಾತ್ಮನಾಮ್ ।
ಅಥ ಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥ ೩೧೨ ॥

ಪ್ರಶಸ್ತಾತ್ಮರನ್ನೂ ಉತ್ತಮರನ್ನೂ ಗುರುವು ಅಂಕೆಯಲ್ಲಿಟ್ಟುಕೊಳ್ಳ ಬಲ್ಲನು. ದುರಾತ್ಮರನ್ನು ರಾಜನು ನಿಗ್ರಹಿಸಬಲ್ಲನು. ಪ್ರಚ್ಛನ್ನ ಪಾಪಿಗಳನ್ನು ಅಂದರೆ ಗುಟ್ಟಾಗಿ ಪಾಪಮಾಡಿದವರನ್ನು ಯಮನೇ ವಿಚಾರಿಸಿ ಕೊಳ್ಳುವನು.

ಯಃ ಸ್ವಭಾವೋ ಹಿ ಯಸ್ಯಾಸ್ತೇ ಸ ನಿತ್ಯಂ ದುರತಿಕ್ರಮಃ ।
ಶ್ವಾ ಯದಿ ಕ್ರಿಯತೇ ರಾಜಾ ಸ ಕಿಂ ನಾಶ್ನಾತ್ಯುಪಾನಹಮ್ ॥ ೩೧೩

ಯಾರಿಗೆ ಯಾವುದು ಹುಟ್ಟುಗುಣವೋ ಅದನ್ನು ಅವರು ಬಿಡ ಲಾರರು. ನಾಯಿಯು ರಾಜನಾಗಿ ಮಾಡಲ್ಪಟ್ಟರೆ ಅದು ಪಾದರಕ್ಷೆಯನ್ನು ಕಡಿಯದೇ ಬಿಟ್ಟೀತೆ ?

ನ ಕಾಲನಿಯಮೋಽಥವಾ ಋಣಧನಾದಿ ಸಂರೋಧನಂ ।
ನ ಭೂತಿಪರಿಶುದ್ಧಿರಪ್ಯಥ ನ ಚಾತ್ರ ದಿಗ್ಬಂಧನಮ್ ।
ನ ಚಾಂಗಕರಮಾತೃಕಾನ್ಯಸನವಾಯುಸಂಶೋಧನಂ ।
ಶಿವಾಯ ಗುರವೇ ನಮಃ ಪರಮಮಂತ್ರಸಾಮ್ರಾಡಯಮ್ ॥ ೩೧೪

''ಶಿವಾಯ ಗುರವೇ ನಮಃ' ಎಂಬ ಮಂತ್ರಚಕ್ರವರ್ತಿಯನ್ನು ಪಠಿಸಿದರೆ ಸಾಕು ಸಂಸಾರಬಂಧನದಿಂದ ಬಿಡುಗಡೆಯಾಗುತ್ತದೆ. ಈ ಮಂತ್ರಪಠಿಸಲು ಹೆಚ್ಚು ಶ್ರಮ, ಸಿದ್ಧತೆಗಳು ಬೇಕಿಲ್ಲ. ಕಾಲ ನಿಯಮವಿಲ್ಲ. ಸಾಲ ಸೋಲ ಮಾಡಿ ಧನವನ್ನು ತರಬೇಕಾಗಿಲ್ಲ. ಭಸ್ಮಧಾರಣೆ, ಅಂಗನ್ಯಾಸ, ಕರನ್ಯಾಸ, ಪ್ರಾಣಾಯಾಮ ದಿಗ್ಬಂಧನ ಮುಂತಾದುವೂ ಬೇಕಿಲ್ಲ. ಬೇರೆ ಜಪ ತಪಗಳಿಗೆ ಇವೆಲ್ಲಾ ಬೇಕು.

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ಶಿವಸ್ಯ ಹೃದಯಂ ವಿಷ್ಣುರ್ವಿಷ್ಣೋಶ್ಚ ಹೃದಯಂ ಶಿವಃ ॥ ೩೧೪ ॥

ಹರಿಹರರಿಗೆ ಭೇದವಿಲ್ಲವೆಂಬುದು ಈ ಶ್ಲೋಕದ ಸಾರಾಂಶ. ಶಿವನು ವಿಷ್ಣುರೂಪ. ವಿಷ್ಣುವೂ ಶಿವರೂಪನೇ. ವಿಷ್ಣುವು ಶಿವನ ಹೃದಯ, ಶಿವನೂ ವಿಷ್ಣುವಿನ ಹೃದಯವೇ.

ಸದ್ಭಿಸ್ತು ಲೀಲಯಾ ಪ್ರೋಕ್ತಂ ಶಿಲಾಲಿಖಿತಮಕ್ಷರಮ್ ।
ಅಸದ್ಭಿಶ್ಶಪಥೇನೋಕ್ತಂ ಜಲೇ ಲಿಖಿತಮಕ್ಷರಮ್ ॥ ೩೧೬ ॥

ಸಜ್ಜನರು ಯಾವುದೋ ಜ್ಞಾನದಲ್ಲಿದ್ದಾಗ 'ಆಗಲಿ' ಎಂದು ಮಾತುಕೊಟ್ಟರೂ ಅದು ಕಲ್ಲಿನಲ್ಲಿ ಕೆತ್ತಿದಂತೆ ಸ್ಥಿರ. ದುರ್ಜನರು ಆಣೆ ಪ್ರಮಾಣ ಮಾಡಿ ಹೇಳಿದ್ದರೂ ನೀರಿನ ಮೇಲೆ ಬರೆದ ಅಕ್ಷರದಂತೆ ಅಸ್ಥಿರವಾದುದು.

ರಾಜ್ಞಶ್ಚಾಮಾತ್ಯಜಾದೋಷಾಃ ಪತ್ನೀದೋಷಾಸ್ತು ಭರ್ತರಿ ।
ತಥಾ ಶಿಷ್ಯಾರ್ಜಿತಂ ಪಾಪಂ ಗುರುಃ ಪ್ರಾಪ್ನೋತಿ ನಿಶ್ಚಿತಮ್ ॥ ೩೧೭

ಮಂತ್ರಿಯು ಮಾಡಿದ ದೋಷಕ್ಕೆ ರಾಜನು ಹೊಣೆ. ಹೆಂಡತಿಯು ಮಾಡಿದುದಕ್ಕೆ ಗಂಡನು ಹೊಣೆ. ಶಿಷ್ಯನು ಮಾಡಿದ ಪಾಪಕ್ಕೆ ಗುರುವೇ ಹೊಣೆ. ಅವರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಎಂದರ್ಥ. ಅದು ಇವರ ಜವಾಬ್ದಾರಿಗೆ ಸೇರಿದ್ದು.

ಶುಭಂ ಬ್ರೂಯಾತ್ ಪ್ರಿಯಂ ಬ್ರೂಯಾತ್
ಭದ್ರಮಿತ್ಯೇವ ವಾ ವದೇತ್ ।
ಶುಷ್ಕವೈರಂ ವಿವಾದಂ ಚ ನ ಕುರ್ಯಾತ್ಕೇನಚಿತ್ಸಹ ॥ ೩೧೮ ॥

ಯಾರು ಏನು ಕೇಳಿದರೂ ಶುಭವಾಗಲಿ, ಭದ್ರವಾಗಲಿ ಎಂದು

ನುಣುಚಿಕೊಳ್ಳಬೇಕು. ಕಠಿಣ ಅಥವಾ ಅಧಿಕವಚನವಾಡಿ ಯಾರನ್ನೂ ಎದುರು ಹಾಕಿಕೊಳ್ಳಬಾರದು. ಮಾತು ಬಲ್ಲವನಿಗೆ ಜಗಳವಿಲ್ಲವಷ್ಟೆ.

ಸಂಧ್ಯಾಮುಪಾಸತೇ ವಿಪ್ರಾ ನಿತ್ಯಮೇವ ದ್ವಿಜೋತ್ತಮಾಃ ।
ಶುಚಿರ್ವಾಪ್ಯಶುಚಿರ್ವಾಪಿ ಕಾಲೇ ಸಂಧ್ಯಾ ವಿಧೀಯತೇ ॥ ೩೧೯

ಮಡಿಯೋ ಮೈಲಿಗೆಯೋ ಸಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡಿ ಮುಗಿಸಬೇಕು. ಮಡಿನೀರು, ಮಗುಟ, ವಿಭೂತಿ, ಪಂಚಪಾತ್ರೆ ಉದ್ಧರಣೆ ಎಂದು ಕೂತರೆ ಕಾಲವು ಮಿಂಚಿಹೋಗುತ್ತದೆ. ಪುಂಡರೀಕಾಕ್ಷನ ಸ್ಮರಣೆ ಮತ್ತು ಜಲಮಾರ್ಜನೆಗಳಿಂದ ಶುದ್ಧನಾಗುತ್ತಾನೆ.

ಶ್ರುತಿಸ್ಮೃತೀ ಉಭೇ ನೇತ್ರೇ ದ್ವಿಜಸ್ಯ ಪರಿಕೀರ್ತಿತೇ ।
ಏಕೇನ ಹೀನಃ ಕಾಣಸ್ಸ್ಯಾತ್ ದ್ವಾಭ್ಯಾಮಂಧಃ ಪ್ರಜಾಯತೇ ॥ ೩೨೦ ॥

ಬ್ರಾಹ್ಮಣನಿಗೆ ಶ್ರುತಿಸ್ಮೃತಿ ಎಂಬುವು ಎರಡು ಕಣ್ಣುಗಳು. ಒಂದಿಲ್ಲದವನು ಅರ್ಧ ಕುರುಡನೂ ಎರಡೂ ಇಲ್ಲದವನು ಪೂರ್ಣ ಕುರುಡನೂ ಆಗುವನು.

ಷ

ಷಟ್ಕರ್ಣೋ ಭಿದ್ಯತೇ ಮಂತ್ರಶ್ಚತುಷ್ಕರ್ಣಃ ಸ್ಥಿರೋ ಭವೇತ್ ।
ದ್ವಿಕರ್ಣಸ್ಯ ಚ ಮಂತ್ರಸ್ಯ ಬ್ರಹ್ಮಾಪ್ಯಂತಂ ನ ಗಚ್ಛತಿ ॥ ೩೨೧ ॥

ಆರು ಕಿವಿಗಳಿದ್ದರೆ (ಮೂರು ಜನ) ಮಂತ್ರಾಲೋಚನೆಯು ಬಯಲಾಗಿಬಿಡುತ್ತದೆ. ನಾಲ್ಕಿದ್ದರೆ ಸ್ಥಿರವಾಗಿರುತ್ತದೆ. ಎರಡೇ ಕಿವಿಗಳು ಅಂದರೆ ಒಬ್ಬನೇ ಇದ್ದರೆ ಅದನ್ನು ಭೇದಿಸಲು ಬ್ರಹ್ಮನಿಗೂ ಸಾಧ್ಯವಾಗದು.

ಸ

ಸರ್ವೇ ಬ್ರಹ್ಮ ವದಿಷ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ ।
ನೈವ ತಿಷ್ಠಂತಿ ಮೈತ್ರೇಯ ಶಿಶ್ನೋದರಪರಾಯಣಾಃ ॥ ೩೨೨ ॥

ಕಲಿಯುಗದಲ್ಲಿ ಎಲ್ಲರೂ ಬ್ರಹ್ಮನ ವಿಷಯದಲ್ಲಿ ಮಾತಾಡುತ್ತಾರೆ. ಆದರೆ ಶಿಶ್ನೋದರ ಪರಾಯಣರಾಗಿ, ಬ್ರಹ್ಮನಲ್ಲಿ ಯಾರೂ ಸ್ಥಿರವಾಗಿ ನಿಲ್ಲುವುದಿಲ್ಲ. ಬರೀ ಬೂಟಾಟಿಕೆ ಹೆಚ್ಚು.

ಸಕೃಜ್ಜಲ್ಪಂತಿ ರಾಜಾನಃ ಸಕೃಜ್ಜಲ್ಪಂತಿ ಪಂಡಿತಾಃ ।
ಸಕೃತ್ಪ್ರದೀಯತೇ ಕನ್ಯಾ ತ್ರೀಣ್ಯೇತಾನಿ ಸಕೃತ್ಸಕೃತ್ ॥ ೩೨೩ ॥

ರಾಜರು ಒಂದೇ ಮಾತಾಡುತ್ತಾರೆ. ಪಂಡಿತರೂ ಅಷ್ಟೇ. ವೃಥಾ ಹರಟುವುದಿಲ್ಲ. ಕನ್ಯೆಯನ್ನು ಒಂದುಸಲ ಮಾತ್ರ ದಾನ ಮಾಡುತ್ತಾರೆ. ಈ ಮೂರೂ ಒಂದೊಂದೇ ಸಲ.

ಶುಚಿ ಭೂಮಿಗತಂ ತೋಯಂ ಶುಚಿರ್ನಾರೀ ಪತಿವ್ರತಾ ।
ಶುಚಿಃ ಕ್ಷೇಮಕರೋ ರಾಜಾ ಸಂತೋಷೀ ಬ್ರಾಹ್ಮಣಃ ಶುಚಿಃ ॥ ೩೨೪ ॥

ಮಳೆಯ ನೀರು ಭೂಮಿಯ ಮೇಲೆ ಬಿದ್ದಮೇಲೆ ಶುಚಿಯೆಂದು ಪರಿಗಣಿಸಲ್ಪಡುತ್ತದೆ. ಪತಿವ್ರತೆಯಾದ ಸ್ತ್ರೀ ಶುಚಿಯಾಗಿರುತ್ತಾಳೆ. ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವ ರಾಜನು ಶುಚಿಯು. ಸಂತೋಷದಿಂದಿರುವ ಬ್ರಾಹ್ಮಣನು ಶುಚಿಯಾಗಿರುತ್ತಾನೆ.

ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಮ್ ।
ಏತದ್ವಿದ್ಯಾತ್ಸಮಾಸೇನ ಲಕ್ಷಣಂ ಸುಖದುಃಖಯೋಃ ॥ ೩೨೫ ॥

ಪರಾಧೀನದಲ್ಲಿರುವುದೆಲ್ಲಾ ಕಷ್ಟ. ಸ್ವಾಧೀನದಲ್ಲಿರುವುದೆಲ್ಲಾ ಸುಖ. ಇದೇ ಸುಖದುಃಖಗಳ ಲಕ್ಷಣವೆಂದು ಸಂಗ್ರಹವಾಗಿ ತಿಳಿದುಕೊಳ್ಳಬೇಕು.

ಕಷ್ಟಾ ವೃತ್ತಿಃ ಪರಾಧೀನಾ ಕಷ್ಟೋ ವಾಸೋ ನಿರಾಶ್ರಯಃ ।
ನಿರ್ಧನೋ ವ್ಯವಸಾಯಶ್ಚ ಸರ್ವಕಷ್ಟಾ ದರಿದ್ರತಾ ॥ ೩೨೬ ॥

ಪರಾಧೀನದ ಜೀವನವು ಕಷ್ಟಕರವಾದುದು. ಹೀಗೆಯೇ ಆಶ್ರಯವಿಲ್ಲದ ಅಂದರೆ ಮನೆಮಠಗಳಿಲ್ಲದ ವಾಸವೂ ಕಷ್ಟ. ಧನವಿಲ್ಲದ ವ್ಯಾಪಾರ ಮುಂತಾದುವೂ ಅಷ್ಟೆ. ಬಡತನವು ಸರ್ವರೀತಿಯಿಂದಲೂ ಕಷ್ಟಕರವು. ವ್ಯವಸಾಯ ಎಂದರೆ ವ್ಯಾಪಾರ ಮುಂತಾದ ಕೆಲಸಗಳು. ಕೃಷಿ ಅಲ್ಲ.

ಅಪ್ರಾಪ್ತಯೌವನಾ ನಾರೀ ನ ಕಾಮಾಯ ನ ಶಾಂತಯೇ ।
ಸಂಪ್ರಾಪ್ತೇ ಷೋಡಶೇ ವರ್ಷೇ ಗರ್ದಭೀ ಚಾಪ್ಸರಾಯತೇ ॥ ೩೨೭ ॥

ಯೌವನವನ್ನು ಪಡೆಯದ ಹುಡುಗಿ ಕಾಮಕ್ಕೂ ಅಲ್ಲ ಶಾಂತಿಗೂ ಅಲ್ಲ. ಹದಿನಾರು ವರ್ಷವಾದರೆ ಕತ್ತೆಯ ಹಾಗಿದ್ದರೂ ಅಪ್ಸರ ಸ್ತ್ರೀಯಂತೆ ಸುಂದರಿಯಾಗುತ್ತಾಳೆ.

ಸ ರಾಘವೇಂದ್ರೋ ಹೃತರಾಜದಾರಃ
ಸ ವಾನರೇಂದ್ರೋ ಹೃತರಾಜದಾರಃ ।
ಏವಂ ತಯೋರಧ್ವನಿ ದೈವಯೋಗಾತ್
ಸಮಾನಶೀಲವ್ಯಸನೇಷು ಸಖ್ಯಮ್ ॥ ೩೨೮ ॥

ರಾಮನೂ ಹೆಂಡತಿಯನ್ನು ಕಳೆದುಕೊಂಡಿದ್ದನು. ಸುಗ್ರೀವನೂ ಅಷ್ಟೆ. ದೈವಯೋಗದಿಂದ ಇಂತಹ ಇಬ್ಬರೂ ಒಂದಾದರು. ಸ್ನೇಹವು ಕುದುರಲು ಸಮಾನವಾದ ಶೀಲ ಮತ್ತು ವ್ಯಸನವಿರಬೇಕು.

ಮೃಗಾ ಮೃಗೈಸ್ಸಂಗಮನುವ್ರಜಂತಿ
ಗಾವಶ್ಚ ಗೋಭಿಸ್ತುರಗಾಸ್ತುರಂಗೈಃ ।
ಮೂರ್ಖಾಶ್ಚ ಮೂರ್ಖೈಃ ಸುಧಿಯಃ ಸುಧೀಭಿಃ
ಸಮಾನಶೀಲವ್ಯಸನೇಷು ಸಖ್ಯಮ್ ॥ ೩೨೯ ॥

ಜಿಂಕೆಗಳು ಜಿಂಕೆಗಳ ಸಂಗಡ, ಗೋವುಗಳು ಗೋವುಗಳ ಸಂಗಡ ಕುದುರೆಗಳು ಕುದುರೆಗಳ ಸಂಗಡ, ಮೂರ್ಖರು ಮೂರ್ಖರ ಸಂಗಡ ಸೇರಿಕೊಳ್ಳುತ್ತಾರೆ. ಸ್ನೇಹಕ್ಕೆ ಕಾರಣ ಸಮಾನ ಗುಣವೇ.

ಯಥಾ ವಿಹಂಗಾಸ್ತರುಮಾಶ್ರಯಂತಿ
ನದ್ಯೋ ಯಥಾ ಸಾಗರಮಾಶ್ರಯಂತಿ ।
ಯಥಾ ತರುಣ್ಯಃ ಶ್ರಿಯಮಾಶ್ರಯಂತಿ
ಸರ್ವೇ ಜನಾಃ ಕಾಂಚನಮಾಶ್ರಯಂತಿ ॥ ೩೩೦ ॥

ಪಕ್ಷಿಗಳು ವೃಕ್ಷವನ್ನಾಶ್ರಯಿಸುವಂತೆ, ನದಿಗಳು ಸಮುದ್ರವನ್ನಾಶ್ರಯಿಸುವಂತೆ, ತರುಣಿಯರು ಲಕ್ಷ್ಮಿಯನ್ನಾಶ್ರಯಿಸುವಂತೆ ಎಲ್ಲ ಜನರೂ ಕಾಂಚನವನ್ನಾಶ್ರಯಿಸುತ್ತಾರೆ.

ಸರ್ವೌಷಧೀನಾಮಮೃತಂ ಪ್ರಧಾನಂ
ಸರ್ವೇಷು ಸೌಖ್ಯೇಷ್ವಶನಂ ಪ್ರಧಾನಮ್
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ
ಸರ್ವೇಷು ಗಾತ್ರೇಷು ಶಿರಃ ಪ್ರಧಾನಮ್ ॥ ೩೩೧ ॥

ಔಷಧಿಗಳಲ್ಲಿ ಅಮೃತವೂ, ಸೌಖ್ಯಗಳಲ್ಲಿ ಆಹಾರವೂ, ಇಂದ್ರಿಯಗಳಲ್ಲಿ ನೇತ್ರವೂ, ದೇಹದಲ್ಲಿ ತಲೆಯೂ ಮುಖ್ಯವಾದುದು.

ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ
ಸ ಪಂಡಿತಃ ಸ ಶ್ರುತವಾನ್ ಗುಣಜ್ಞಃ ।
ಸ ಏವ ದಾತಾ ಸ ಚ ದರ್ಶನೀಯಃ
ಸರ್ವೇ ಗುಣಾಃ ಕಾಂಚನಮಾಶ್ರಯಂತಿ ॥ ೩೩೨ ॥

ಧನವಿರುವವನೇ ಸದ್ವಂಶದವನು. ಅವನೇ ಪಂಡಿತನು, ಅವನೇ ಶಾಸ್ತ್ರಜ್ಞನು, ಅವನೇ ಗುಣಗ್ರಾಹಿ, ಅವನೇ ದಾನಿ, ಅವನೇ ಸುಂದರ, ಎಲ್ಲ ಗುಣಗಳೂ ಧನವನ್ನವಲಂಬಿಸಿರುತ್ತವೆ.

ಸದ್ವಂಶಜಾತಂ ಗುಣಕೋಟಿನಮ್ರಂ
ಧನುಃ ಕಥಂ ಪಾರ್ಥಿವವಾಮಹಸ್ತೇ ।
ಶರಃ ಪರಪ್ರಾಣವಿಹಾರದಕ್ಷಃ
ಸಪಕ್ಷಪಾತೋಽಪ್ಯಧಮೋ ಗರೀಯಾನ್ ॥ ೩೩೩ ॥

ಯೋಗ್ಯರಿಗೆ ಸರಿಯಾದ ಸ್ಥಾನ ದೊರೆಯುವುದಿಲ್ಲ, ಅಯೋಗ್ಯರಿಗೇ ದೊರೆಯುತ್ತದೆಯೆಂದು ಧನುರ್ಬಾಣಗಳ ಹೋಲಿಕೆ ಮತ್ತು ಶ್ಲೇಷದಿಂದ ಕವಿಯು ಚಮತ್ಕಾರವನ್ನು ತೋರಿಸಿರುತ್ತಾನೆ. ಸದ್ವಂಶ = ಉತ್ತಮ ಕುಲ ಮತ್ತು ಒಳ್ಳೆಯ ಬಿದಿರು, ಗುಣಕೋಟಿ = ಕೋಟಿಗಟ್ಟಲೆ ಒಳ್ಳೆಯ ಗುಣಗಳು ಮತ್ತು ಹೆದೆ ಮತ್ತು ಧನಸ್ಸಿನ ತುದಿ, ನಮ್ರ = ವಿನಯ, ಬಗ್ಗುವುದು. ಇದು ಕ್ಷತ್ರಿಯನ ಎಡಗೈನಲ್ಲಿರುತ್ತದೆ. ಪರಪ್ರಾಣದಿಂದ ವಿಹರಿಸುವ, ಪಕ್ಷಪಾತಗುಣವುಳ್ಳ ಪಕ್ಕೆಯಲ್ಲಿ ಚುಚ್ಚುವ, ಅಧಮವಾದ ಬಾಣಕ್ಕೆ ಬಲಗೈನಲ್ಲಿ ಸ್ಥಾನ. ಹಿಂದೆ ರಾಜಾಶ್ರಯದಲ್ಲಿ, ಈಗ ಪ್ರಜಾ ಪ್ರಭುತ್ವದ ಸರ್ಕಾರದಲ್ಲಿ ಅಯೋಗ್ಯರಿಗೆ ಉತ್ತಮ ಸ್ಥಾನವೂ ಯೋಗ್ಯರಿಗೆ ಅಧಮಸ್ಥಾನವೂ ದೊರೆಯುತ್ತಿದೆಯೆಂದು ಹೇಳುತ್ತಾರೆ.

ಪಿಪೀಲಿಕಾರ್ಜಿತಂ ಧಾನ್ಯಂ ಮಕ್ಷಿಕಾಸಂಚಿತಂ ಮಧು ।
ಲುಬ್ಧೇನ ಸಂಚಿತಂ ದ್ರವ್ಯಂ ಸಮೂಲಂ ಚ ವಿನಶ್ಯತಿ ॥ ೩೩೪ ॥

ಇರುವೆಗಳು ಸಂಗ್ರಹಿಸಿದ ಧಾನ್ಯ, ಜೇನುಹುಳುಗಳು ಕೂಡಿಟ್ಟ ಜೇನು ತುಪ್ಪ, ಜಿಪುಣನು ಕೂಡಿಟ್ಟ ಹಣ—ಮೂಲಸಹಿತ ನಾಶವಾಗುತ್ತವೆ.

ಪುತ್ರ ಇತ್ಯೇವ ಪಿತರಿ ಕನ್ಯಕೇತ್ಯೇವ ಮಾತರಿ ।
ಇತ್ಯೇವಂ ವದತಃ ಪುಂಸಃ ಸರ್ವತ್ರ ವಿಜಯೋ ಭವೇತ್ ॥ ೩೩೫

ಕೆಲವು ಅಲ್ಪಜ್ಞರಾದ ಜ್ಯೋತಿಷಿಕರು ತಂದೆಗೆ 'ಗಂಡುಮಗು ಹುಟ್ಟುವುದೆಂದೂ' ತಾಯಿಗೆ 'ಹೆಣ್ಣೆಂದೂ' ಹೇಳಿ ಭೇಷ್ ಎನ್ನಿಸಿಕೊಳ್ಳು ತ್ತಾರೆ. ಈಗ ಇಂತಹವರಿಗೇ ಕಾಲ.

ತಕ್ಷಕಸ್ಯ ವಿಷಂ ದಂತೇ ಮಕ್ಷಿಕಾಯಾಶ್ಚ ಮಸ್ತಕೇ ।
ವೃಶ್ಚಿಕಸ್ಯ ವಿಷಂ ಪುಚ್ಛೇ ಸರ್ವಾಂಗೇ ದುರ್ಜನಸ್ಯ ತತ್ ॥ ೩೩೬ ॥

ವಿಷವು ತಕ್ಷಕನೆಂಬ ಸರ್ಪದ ಹಲ್ಲಿನಲ್ಲೂ ಜೇನುನೊಣದ ತಲೆಯಲ್ಲೂ, ಚೇಳಿನ ಕೊಂಡಿ (ಬಾಲ)ಯಲ್ಲೂ ದುರ್ಜನರ ಸರ್ವಾಂಗಗಳಲ್ಲೂ ಇರುತ್ತದೆ.

ಚತುರಃ ಸಖಿ ಮೇ ಭರ್ತಾ
ಸ ಯಲ್ಲಿಖತಿ ತದನ್ಯೋ ನ ವಾಚಯತಿ ।
ತಸ್ಮಾದಪ್ಯಧಿಕೋ ಮೇ ಸ್ವಯ-
ಮಪಿ ಲಿಖಿತಂ ಸ್ವಯಂ ನ ವಾಚಯತಿ ॥ ೩೩೭ ॥

ಒಬ್ಬ ಗೃಹಿಣಿಯು ಮತ್ತೊಬ್ಬಳನ್ನು ಕುರಿತು ತನ್ನ ಗಂಡನ, ಪ್ರತಿಭೆಯನ್ನು (ದಡ್ಡತನವನ್ನೂ) ಹೀಗೆ ಹೇಳಿಕೊಳ್ಳುತ್ತಾಳೆ. ಸಖಿ, ನನ್ನ ಗಂಡ ತುಂಬಾ ಜಾಣ. ಅವನು ಬರೆದುದನ್ನು ಬೇರೆ ಯಾರೂ ಓದಲಾರರು. ಅಷ್ಟು ಪ್ರೌಢವಾದ ಶೈಲಿ ಎಂದಳು. ಆಗ ಕೇಳುತ್ತಿದ್ದ ಗೃಹಿಣಿಗೆ ಉರಿಹತ್ತಿತು, ಉತ್ಸಾಹವೂ ಮಿತಿಮೀರಿತು. ನಿನ್ನ ಗಂಡನಿಗಿಂತ ನನ್ನ ಗಂಡನ ಶೈಲಿ ಇನ್ನೂ ಬಿಗಿ. ಅವನೇ ಬರೆದದ್ದನ್ನು ಮರುಕ್ಷಣದಲ್ಲಿ ಅವನೇ ಓದಲಾರನು ಎಂದಳು.

ತೀರ್ಥೇ ವಿವಾಹೇ ಯಾತ್ರಾಯಾಂ ಸಂಗ್ರಾಮೇ ದೇಶವಿಪ್ಲವೇ ।
ನಗರಗ್ರಾಮದಾಹೇ ಚ ಸ್ಪೃಷ್ಟಾಸ್ಪೃಷ್ಟಿರ್ನ ದುಷ್ಯತೇ ॥ ೩೩೮ ॥

ತೀರ್ಥಕ್ಷೇತ್ರ, ವಿವಾಹಮಂಟಪ, ಯಾತ್ರಾಸ್ಥಲ, ಯುದ್ಧಭೂಮಿ, ಪ್ರವಾಹ, ಭೂಕಂಪ ಮುಂತಾದ ಸಂಕಷ್ಟಗಳಲ್ಲಿ, ನಗರ ಹಳ್ಳಿಗಳಿಗೆ ಬೆಂಕಿ ಬಿದ್ದಾಗ ರೈಲು ಬಸ್ಸು ಮಾರ್ಕೆಟ್‌ಗಳಲ್ಲಿ ಒಬ್ಬರನ್ನೊಬ್ಬರು ಮುಟ್ಟಿಕೊಂಡರೆ ದೋಷವಿಲ್ಲ.

ಸರ್ವತ್ರ ಜಯಮನ್ವಿಚ್ಛೇತ್ಪುತ್ರಾದಿಚ್ಛೇತ್ಪರಾಜಯಮ್ ।
ವಾಸುದೇವಂ ನಮಸ್ಯಂತಿ ವಸುದೇವಂ ನ ಕಶ್ಚನ ॥ ೩೩೯ ॥

ಮನುಷ್ಯನು ವಿದ್ಯೆಯ ವಿಷಯದಲ್ಲಿ ಎಲ್ಲ ಕಡೆಯಲ್ಲೂ ಜಯವನ್ನು ಬಯಸಬೇಕು. ಮಗನಿಂದ ಮಾತ್ರ ಸೋಲನ್ನು ಬಯಸಬೇಕು. ಅಂದರೆ ಅವನು ಇನ್ನೂ ಹೆಚ್ಚು ವಿದ್ಯಾವಂತನಾಗಬೇಕೆಂಬುದು ತಾತ್ಪರ್ಯ. ವಾಸುದೇವನನ್ನು (ಕೃಷ್ಣನನ್ನು) ವಂದಿಸುತ್ತಾರೆ. ಅವನ ತಂದೆಯಾದ ವಸುದೇವನನ್ನಲ್ಲ.

ಸಹಸಾ ವಿಧದೀತ ನ ಕ್ರಿಯಾಂ ಅವಿವೇಕಃ ಪರಮಾಪದಾಂ ಪದಮ್ ।
ವೃಣತೇ ಹಿ ವಿಮೃಶ್ಯಕಾರಿಣಂ ಗುಣಲುಬ್ಧಾಃ ಸ್ವಯಮೇವ ಸಂಪದಃ ॥

ಯಾವ ಕೆಲಸವನ್ನೂ ದುಡುಕಿ ಮಾಡಬಾರದು. ಅವಿವೇಕವೇ ಆಪತ್ತುಗಳಿಗೆ ವಾಸಸ್ಥಾನ. ವಿಮರ್ಶಿಸಿ ಕೆಲಸಮಾಡುವವನನ್ನು ಸಂಪತ್ತುಗಳು ತಾವಾಗಿಯೇ ಹುಡುಕಿಕೊಂಡು ಬರುತ್ತವೆ.

ಸರ್ವನಾಶೇ ಸಮುತ್ಪನ್ನೇ ಹ್ಯರ್ಧಂ ತ್ಯಜತಿ ಪಂಡಿತಃ ।
ಅರ್ಧೇನ ಕುರುತೇ ಕಾರ್ಯಂ ಸರ್ವನಾಶೋ ನ ಜಾಯತೇ ೩೪೧

ಸರ್ವನಾಶವಾಗುವ ಸಂದರ್ಭ ಬಂದಾಗ ಪಂಡಿತನಾದವನು ಅರ್ಧವನ್ನು ತ್ಯಜಿಸಿಬಿಡುತ್ತಾನೆ. ಅರ್ಧವಾದರೂ ಉಳಿದು ಸರ್ವನಾಶವು ತಪ್ಪುತ್ತದೆ.

ಸಂಗಸ್ಸರ್ವಾತ್ಮನಾ ತ್ಯಾಜ್ಯಃ ಸ ಚೇತ್ತ್ಯಕ್ತುಂ ನ ಶಕ್ಯತೇ ।
ಸ ಸದ್ಭಿಸ್ಸಹಕರ್ತವ್ಯಃ ಸಂತಃ ಸರ್ವಸ್ಯ ಭೇಷಜಮ್ ॥ ೩೪೨ ॥

ಆತ್ಮೋದ್ಧಾರವನ್ನು ಬಯಸುವವನು ವಿಷಯಾಸಕ್ತಿಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ವಿಷಯವಂದರೆ ರೂಪರಸಾದಿಗಳು

ಅವುಗಳ ಸೇವನೆಯೇ ವಿಷಯಾಸಕ್ತಿ. ಅದಾಗದಿದ್ದರೆ ಸಜ್ಜನರ ಸಹವಾಸವನ್ನಾದರೂ ಮಾಡಬೇಕು. ಸತ್ಪುರುಷರೇ ಸರ್ವಕ್ಕೂ ಔಷಧವು.

ಕ್ಷುಧಿತಸ್ತೃಷಿತಃ ಕಾಮೀ ವಿದ್ಯಾರ್ಥೀ ಬಹುಪೋಷಕಃ ।
ಭಂಡಾರರಕ್ಷಕಶ್ಚೈವ ಸಪ್ತ ಸುಪ್ತಾನ್ ಪ್ರಬೋಧಯೇತ್ ॥ ೩೪೩ ॥

ಸಾಮಾನ್ಯವಾಗಿ ನಿದ್ರಿಸುತ್ತಿರುವವರನ್ನು ಎಬ್ಬಿಸಬಾರದೆಂಬ ನಿಯಮ ಇದೆ. ಆದರೆ ಈ ಏಳು ಮಂದಿಯನ್ನು ಎಬ್ಬಿಸಬಹುದಂತೆ. ಅವರಾರೆಂದರೆ— ಹಸಿದವನು, ಬಾಯಾರಿದವನು, ಕಾಮಿಯು, ವಿದ್ಯಾರ್ಥಿ, ಬಹುಮಂದಿಯನ್ನು ಪೋಷಿಸುವವನು, ಭಂಡಾರದ ಒಡೆಯನು, ರಕ್ಷಕನು (ಕಾವಲುಗಾರ) ಇವರು (ಮತ್ತು ವಾಹನ ಚಾಲಕ.)

ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶೇಷತಾ ।
<u>ಸಜೀವಂ</u> ದಹತೇ ಚಿಂತಾ ನಿರ್ಜೀವಂ ದಹತೇ ಚಿತಾ ॥ ೩೪೪ ॥

ಚಿಂತೆಗೂ ಚಿತೆಗೂ ಬಿಂದು ಮಾತ್ರ ವ್ಯತ್ಯಾಸ. ಮಾಡುವ ಕೆಲಸವಾದರೋ ದೊಡ್ಡದು. ಚಿತೆಯು ಶವವನ್ನು ಸುಟ್ಟರೆ ಚಿಂತೆಯು ಬದುಕಿರುವವನನ್ನೇ ಸುಡುತ್ತದೆ. ಚಿಂತೆಯು ನಿದ್ರೆಗೂ ಶತ್ರು.

ಅಸಾರೇ ಖಲು ಸಂಸಾರೇ <u>ಸಾರಂ</u> ಶ್ವಶುರಮಂದಿರಮ್ ।
ಕ್ಷೀರಾಬ್ಧೌ ಚ ಹರಿಶ್ಶೇತೇ ಹರಶ್ಶೇತೇ ಹಿಮಾಲಯೇ ॥ ೩೪೫ ॥

ಅಸಾರವಾದ ಸಂಸಾರದಲ್ಲಿ ಮಾವನ ಮನೆಯೊಂದೇ ಸಾರವುಳ್ಳದ್ದು. ಆದುದರಿಂದಲೇ ಹರಿಯು ಕ್ಷೀರಸಮುದ್ರದಲ್ಲೂ ಹರನು ಹಿಮಾಲಯದಲ್ಲೂ ಮಲಗಿ ನಿದ್ರಿಸುತ್ತಾರೆ.

ರೋಗಸ್ಯೋಪಕ್ರಮೇ ಸಾಂತ್ವಂ ಮಧ್ಯೇ ಕಿಂಚಿದ್ಧನವ್ಯಯಃ ।
ಶನೈರನಾದರಃ ಶಾಂತೌ <u>ಸ್ನಾತೋ ವೈದ್ಯಂ ನ ಪಶ್ಯತಿ</u> ॥ ೩೪೬ ॥

ರೋಗಬಂದಾಗ ರೋಗಿಯು ವೈದ್ಯರ ಬಳಿ ಹೋಗಿ ಮೊದಲು ಮೃದು ಮಧುರವಾಗಿ ಮಾತಾಡುತ್ತಾನೆ. ಮಧ್ಯದಲ್ಲಿ ಸ್ವಲ್ಪ ಧನವನ್ನು ಕೊಡುತ್ತಾನೆ. ನಿಧಾನವಾಗಿ ರೋಗವು ವಾಸಿಯಾಗತೊಡಗಿದಾಗ, ಅನಾದರವು ಆರಂಭವಾಗುತ್ತದೆ. ಸ್ನಾನಮಾಡಿದನೆಂದರೆ (ರೋಗ ವಾಸಿಯಾದ ಮೇಲೆ ಸ್ನಾನ ಮಾಡುವುದು) ವೈದ್ಯನನ್ನು ಮರೆತೇಬಿಡುತ್ತಾನೆ. ಉಪಾಧ್ಯಾಯರು, ವೈದ್ಯರು ಕೆಲಸವಾದಮೇಲೆ ಅಪ್ರಯೋಜಕರಷ್ಟೆ?

ದುಗ್ಧಂ ಪಯಸ್ತದಪಿ ಚ ಕ್ವಥಿತಂ ತದೇವ
ಮಾಧುರ್ಯಮಪ್ಯಪಹೃತಂ ಮಥಿತಂ ಚ ವೇಗಾತ್ ।
ದಗ್ಧಃ ಪುನರ್ಘೃತಕೃತೇ ನವನೀತಪಿಂಡಃ
ಸ್ನೇಹಸ್ತು ಕಾರಣಮನರ್ಥಪರಂಪರಾಯಾಃ ॥ ೩೪೭ ॥

ಸ್ನೇಹ ಸಂಪಾದನೆಗಾಗಿ ಎಷ್ಟು ಶ್ರಮಪಡಬೇಕಾಗುತ್ತದೆಯೆಂಬುದನ್ನು ಚಮತ್ಕಾರದಿಂದ ಚಿತ್ರಿಸುತ್ತಾನೆ. ಸ್ನೇಹ ಎಂದರೆ ಜಿಡ್ಡು ಅಂದರೆ ತುಪ್ಪ ಮತ್ತು ಮಿತ್ರತ್ವ. ಹಾಲಿನಿಂದ ತುಪ್ಪವನ್ನು ಹೊರಡಿಸಬೇಕಾದರೆ, ಕೆಚ್ಚಲಿನಿಂದ ಕರೆದು, ಕಾಯಿಸಿ, ಅದರ ಮಾಧುರ್ಯವನ್ನು ಕಳೆದು, ಹುಳಿ ಮೊಸರನ್ನಾಗಿ ಮಾಡಿ, ಅದನ್ನು ಕಡೆಗೋಲಿಂದ ವೇಗವಾಗಿ ಕಡೆಯಬೇಕು. ಆಮೇಲೆ ಬೆಣ್ಣೆಯ ಮುದ್ದೆಯನ್ನು ಮತ್ತೆ ಕಾಯಿಸಬೇಕು. ಇಷ್ಟು ಶ್ರಮಪಟ್ಟರೆ ತುಪ್ಪವು (ಸ್ನೇಹ) ದೊರಕುತ್ತದೆ. (ಆತ್ಮಸಾಕ್ಷಾತ್ಕಾರಕ್ಕೂ ಹೀಗೆಯೇ ಶ್ರಮ ಪಡಬೇಕೆಂದು ಶಾಸ್ತ್ರವು ಹೇಳುತ್ತದೆ)

ನಿತ್ಯಂ ಛೇದಸ್ತೃಣಾನಾಂ ಭುವಿ ನಖಲಿಖನಂ ಪಾದಯೋಶ್ಚಾಲ್ಪಶೌಚಂ
ದಂತಾನಾಮಲ್ಪಶೌಚಂ ವದನಮಲಿನತಾ ರೂಕ್ಷತಾ ಮೂರ್ಧಜಾನಾಮ್ ।
ದ್ವೇ ಸಂಧ್ಯೇ ಚಾತಿನಿದ್ರಾ ಹ್ಯವಸನಶಯನಂ ಗ್ರಾಸಹಾಸ್ಯಾತಿರೇಕಃ
ಸ್ವಾಂಗೇ ಪೀಠೇ ಚ ವಾದ್ಯಂ ಹರತಿ ಸುರಪತೇಃ ಕೇಶವಸ್ಯಾಪಿ ಲಕ್ಷ್ಮೀಮ್
॥ ೩೪೮ ॥

ಕೆಲವು ದುರಭ್ಯಾಸಗಳು ತಾವಾಗಿ ಬರುತ್ತವೆ. ಯಾವಾಗಲೂ ಬಾಯಿಂದ ಹುಲ್ಲನ್ನು ಕಚ್ಚುತ್ತಿರುವುದು. ನೆಲದ ಮೇಲೆ ಉಗುರಿಂದ ಬರೆಯುತ್ತಿರುವುದು ಅಥವಾ ಗೀರುತ್ತಿರುವುದು. ಕಾಲುಗಳನ್ನು ಪೂರ್ತಿ ತೊಳೆಯದೇ ಇರುವುದು. ಹಲ್ಲುಗಳನ್ನು ಸ್ವಲ್ಪ ಉಜ್ಜುವುದು, ಮುಖದ ಮೇಲೆ ಕೊಳೆ ಕೂಡಿಸಿಕೊಂಡಿರುವುದು ತಲೆಗೂದಲಿಗೆ ಎಣ್ಣೆಯಿಲ್ಲದೆ ತರಕಲಾಗಿ ಬಿಟ್ಟುಕೊಂಡಿರುವುದು, ಎರಡು ಸಂಧ್ಯಾಕಾಲಗಳಲ್ಲೂ ನಿದ್ರಿಸುವುದು, ಬಟ್ಟೆಯಿಲ್ಲದೆ ಮಲಗುವುದು, ತುತ್ತುಗಳ ಬಗ್ಗೆ ಹಾಸ್ಯ ಮಾಡುವುದು ಅಥವಾ ತುತ್ತು ನುಂಗುತ್ತಿರುವಾಗ ದೇವರ ಧ್ಯಾನ ಮಾಡದೆ ಅತಿಯಾಗಿ ಹಾಸ್ಯ ಮಾಡುವುದು. (ಕಬಳೇಕಬಳೇ ಗೋವಿಂದಃ ಎಂದು) ತನ್ನ ಅಂಗದಲ್ಲೇ ಅಥವಾ ಬೆನ್ನಿನ ಮೇಲೆ ವಾದ್ಯ ಬಾರಿಸುವುದು, ಈ ದುರ್ಗುಣಗಳು ಇಂದ್ರನ ಮತ್ತು ಕೇಶವನ ಸಂಪತ್ತನ್ನೂ ಅಪಹರಿಸಿಬಿಡುತ್ತವೆ.

ಸ್ಥಾನಭ್ರಷ್ಟಾ ನ ಶೋಭಂತೇ ದಂತಾಃ ಕೇಶಾ ನಖಾ ನರಾಃ ।
ಸ್ಥಾನಭ್ರಷ್ಟಾಸ್ತು ಶೋಭಂತೇ ಸಿಂಹಾಃ ಸತ್ಪುರುಷಾ ಗಜಾಃ ॥ ೩೪೯

ಹಲ್ಲುಗಳು, ಕೂದಲು, ಉಗುರು ಮತ್ತು ಮನುಷ್ಯರು ಇರುವ ಜಾಗವನ್ನು ಕಳೆದುಕೊಂಡರೆ ಶೋಭಿಸುವುದಿಲ್ಲ, ಬೆಲೆ ಕಡಿಮೆ. ಅದೇ ಸಿಂಹ, ಆನೆ ಮತ್ತು ಸಜ್ಜನರು ಸ್ಥಾನಭ್ರಷ್ಟರಾದರೂ (ಎಲ್ಲಿದ್ದರೂ) ಶೋಭಿಸುತ್ತಾರೆ. ಬೆಲೆಯುಂಟು.

ಕರಸ್ಥಮುದಕಂ ತ್ಯಕ್ತ್ವಾ ಘನಸ್ಥಮಭಿವಾಂಛತಿ ।
ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ ॥ ೩೫೦ ॥

ಬುದ್ಧಿಹೀನನು ಕೈಯಲ್ಲಿರುವ ನೀರನ್ನು ಬಿಟ್ಟು ಮೋಡದ ನೀರಿಗೆ ಆಸೆಪಡುತ್ತಾನೆ. ಅದು ಸಿಕ್ಕುವುದು ಏನು ಖಚಿತ? ಹಾಗೆಯೇ ಸಿದ್ಧವಾಗಿರುವ ಆಹಾರವನ್ನು ಬಿಟ್ಟು ಭಿಕ್ಷೆ ಬೇಡುವುದಕ್ಕೆ ಹೋಗುತ್ತಾನೆ.

ಕರೋತಿ ಶೋಭಾಮಲಕೇ ಸ್ತ್ರಿಯಾಃ ಕೋ
ದೃಶ್ಯಾ ನ ಕಾಂತಾ ವಿಧಿನಾ ಚ ಕೋಕ್ತಾ।
ಅಂಗೇ ತು ಕಸ್ಮಿನ್ ದಹನಃ ಪುರಾರೇಃ
ಸಿಂದೂರಬಿಂದುರ್ವಿಧವಾಲಲಾಟೇ ॥ ೩೫೧ ॥

ಇದೊಂದು ತರಹ ಚಮತ್ಕಾರ. ಮೊದಲಿನ ಮೂರು ಸಾಲುಗಳ ಪ್ರಶ್ನೆಗಳಿಗೆ ಕಡೆಯಸಾಲಿನಲ್ಲಿ ಉತ್ತರ. ಸ್ತ್ರೀಯರ ಮುಂಗುರುಳುಗಳ ಸ್ಥಾನದಲ್ಲಿ ಯಾವುದು ಶೋಭಿಸುತ್ತದೆ? ಸಿಂದೂರದ ಬೊಟ್ಟು. ಯಾವ ಸ್ತ್ರೀಯನ್ನು ನೋಡಬಾರದೆಂದು ವಿಧಿಯು ಹೇಳುತ್ತದೆ? ವಿಧವೆಯನ್ನು. ಶಿವನ ಯಾವ ಅಂಗದಲ್ಲಿ ಅಗ್ನಿಯಿದೆ? ಲಲಾಟದಲ್ಲಿ.

ಸ್ತ್ರಿಯೋ ಹಿ ಮೂಲಂ ನಿಧನಸ್ಯ ಪುಂಸಃ
ಸ್ತ್ರಿಯೋ ಹಿ ಮೂಲಂ ವ್ಯಸನಸ್ಯ ಪುಂಸಃ ।
ಸ್ತ್ರಿಯೋ ಹಿ ಮೂಲಂ ನರಕಸ್ಯ ಪುಂಸಃ
ಸ್ತ್ರಿಯೋ ಹಿ ಮೂಲಂ ಕಲಹಸ್ಯ ಪುಂಸಃ ॥ ೩೫೨ ॥

ಪುರುಷರ ಮರಣಕ್ಕೂ ಕುಡಿತ ಮುಂತಾದ ದುಶ್ಚಟಕ್ಕೂ, ನರಕಕ್ಕೂ, ಜಗಳಕ್ಕೂ ಸ್ತ್ರೀಯರೇ ಮೂಲ. ಇವರು ಸರಿಯಾಗಿದ್ದು ದಕ್ಷರಾದರೆ ಪುರುಷರನ್ನು ಸನ್ಮಾರ್ಗಕ್ಕೆ ತರಬಲ್ಲರು.

ಆತ್ಮಬುದ್ಧಿಃ ಸುಖಾಯ್ಯೆವ ಗುರುಬುದ್ಧಿರ್ವಿಶೇಷತಃ ।
ಪರಬುದ್ಧಿರ್ವಿನಾಶಾಯ ಸ್ತ್ರೀಬುದ್ಧಿಃ ಪ್ರಳಯಾಂತಿಕಾ ॥ ೩೫೩ ॥

ತನ್ನ ಬುದ್ಧಿಯು ಸುಖವನ್ನುಂಟುಮಾಡುತ್ತದೆ. ಗುರುಗಳ (ತಂದೆ) ಬುದ್ಧಿವಚನವೂ ವಿಶೇಷಫಲಕೊಡುತ್ತದೆ. ಪರಬುದ್ಧಿಯು ಕೆಡಿಸಿ ಬಿಡುತ್ತದೆ. ಸ್ತ್ರೀಬುದ್ಧಿಯು ಪ್ರಳಯವನ್ನೇ ಮಾಡಿಬಿಡುತ್ತದೆ.

ಸರ್ವಸ್ಯ ದ್ವೇ ಸುಮತಿಕುಮತೀ ಸಂಪದಾಪತ್ತಿಹೇತೂ
ಏಕೋ ಗೋತ್ರೇ ಪ್ರಭವತಿ ಪುಮಾನ್ ಯಃ ಕುಟುಂಬಂ ಬಿಭರ್ತಿ ।
ವೃದ್ಧೋ ಯೂನಾ ಸಹ ಪರಿಚಯಾತ್ತ್ಯಜ್ಯತೇ ಕಾಮಿನೀಭಿಃ
ಸ್ತ್ರೀಪುಂವಚ್ಚ ಪ್ರಭವತಿ ಯದಾ ತದ್ಧಿಗೇಹಂ ವಿನಷ್ಟಮ್ ॥ ೩೫ ॥

ವ್ಯಾಕರಣ ಶಾಸ್ತ್ರವನ್ನೋದಿ, ಅರಣ್ಯದಲ್ಲಿ ಬ್ರಹ್ಮರಾಕ್ಷಸನಾಗಿದ್ದವನೊಬ್ಬ ಭಟ್ಟೋಜೀದೀಕ್ಷಿತರನ್ನು ಅಡ್ಡಹಾಕಿ, ಈ ನಾಲ್ಕು ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡದಿದ್ದರೆ ನಿನ್ನನ್ನು ತಿಂದುಬಿಡುವೆನೆಂದು ಹೆದರಿಸಿದನಂತೆ. ಪಾಣಿನಿ ಮಹರ್ಷಿಗಳ ಅಷ್ಟಾಧ್ಯಾಯಿಸೂತ್ರಗಳಲ್ಲಿ ಬರುವ ನಾಲ್ಕು ಸೂತ್ರಗಳೇ ಈಗ ಪೂರ್ಣ ಮಾಡತಕ್ಕವುಗಳು.

೧. ಸರ್ವಸ್ಯದ್ವೇ = ಎಲ್ಲರಿಗೂ ಎರಡು

೨. ಏಕೋಗೋತ್ರೇ = ವಂಶದಲ್ಲಿ ಒಬ್ಬ

೩. ವೃದ್ಧೋಯೂನಾ= ಮುದುಕನು ಯುವಕನ ಸಂಗಡ

೪. ಸ್ತ್ರೀಪುಂವಚ್ಚ = ಸ್ತ್ರೀಯು ಪುರುಷನಂತೆ

ಉತ್ತರ ೧ - ಎಲ್ಲರಿಗೂ ಸಂಪತ್ತು ಮತ್ತು ವಿಪತ್ತಿಗೆ ಕಾರಣವಾಗಬಲ್ಲ ಸುಮತಿ, ಕುಮತಿಯೆಂಬ ಎರಡು ತರಹ ಬುದ್ಧಿಯಿರುತ್ತವೆ.

೨. ಕುಟುಂಬವನ್ನು ಸರಿಯಾಗಿ ಸಾಕಬಲ್ಲ ಧೀರನು ಒಂದು ವಂಶದಲ್ಲಿ ಒಬ್ಬನು ಹುಟ್ಟುತ್ತಾನೆ.

೩. ಯುವಕನ ಪರಿಚಯವಾದ ಮೇಲೆ ಕಾಮಿನಿಯರು ಮುದುಕನನ್ನು ಬಿಟ್ಟುಬಿಡುತ್ತಾರೆ.

೪. ಸ್ತ್ರೀಯು ಪುರುಷನಂತೆ ವರ್ತಿಸಿದರೆ ಆ ಮನೆಯು ಹಾಳಾಯಿತೆಂದೇ ಅರ್ಥ. ಈ ಉತ್ತರಗಳಿಂದ ಬ್ರಹ್ಮರಾಕ್ಷಸನಿಗೆ ತೃಪ್ತಿಯಾಗಿ ಬಿಟ್ಟುಬಿಟ್ಟನಂತೆ. ಒಟ್ಟಿನಲ್ಲಿ ಇದೊಂದು ಯಾರೋ ಪಂಡಿತರು ಕಟ್ಟಿರುವ ಕತೆ. ಈ ನಾಲ್ಕು ಸೂತ್ರಗಳ ಅರ್ಥವೇ ಬೇರೆ. ಒಟ್ಟಿನಲ್ಲಿ ಕೇಳುವುದಕ್ಕೆ ರೋಚಕವಾಗಿದೆ. ಹೇಳದೇ ಇದ್ದುದನ್ನೂ ಪಂಡಿತರು ಊಹಿಸುತ್ತಾರಷ್ಟೆ!

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ಚಕ್ರವತ್ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ॥ ೩೫೬ ॥

ಮನುಷ್ಯನ ಜೀವನದಲ್ಲಿ ಸುಖವಾದಮೇಲೆ ದುಃಖ, ದುಃಖವಾದ ಮೇಲೆ ಸುಖ—ಚಕ್ರದಂತೆ, ಸುತ್ತುತ್ತಿರುತ್ತವೆ.

ಸುಖಾರ್ಥೀ ಚೇತ್ತ್ಯಜೇದ್ವಿದ್ಯಾಂ ವಿದ್ಯಾರ್ಥೀ ಚೇತ್ತ್ಯಜೇತ್ಸುಖಮ್ ।
ಸುಖಾರ್ಥಿನಃ ಕುತೋ ವಿದ್ಯಾ ಕುತೋ ವಿದ್ಯಾರ್ಥಿನಃ ಸುಖಮ್ ॥

ಸುಖಾಭಿಲಾಷಿಯು ವಿದ್ಯೆಯನ್ನು ಬಿಡಬೇಕು. ವಿದ್ಯಾಭಿಲಾಷಿಯು ಸುಖವನ್ನು ಬಿಡಬೇಕು. ಸುಖಾರ್ಥಿಗಳಿಗೆ ವಿದ್ಯೆಯೂ ವಿದ್ಯಾರ್ಥಿಗಳಿಗೆ ಸುಖವೂ ದೊರೆಯುವುದು ಕಷ್ಟ.

ಪ್ರದೋಷೇ ದೀಪಕಶ್ಚಂದ್ರಃ ಪ್ರಭಾತೇ ದೀಪಕೋ ರವಿಃ ।
ತ್ರೈಲೋಕ್ಯೇ ದೀಪಕೋ ಧರ್ಮಃ ಸುಪುತ್ರಃ ಕುಲದೀಪಕಃ ॥ ೩೫೮

ಪ್ರದೋಷಕಾಲದಲ್ಲಿ ಲೋಕಕ್ಕೆ ಚಂದ್ರನೂ, ಪ್ರಭಾತ ಕಾಲದಲ್ಲಿ ಸೂರ್ಯನೂ, ಮೂರು ಲೋಕಕ್ಕೂ ಧರ್ಮವೂ, ವಂಶಕ್ಕೆ ಸುಪುತ್ರನೂ ಬೆಳಕಾಗುತ್ತಾರೆ.

ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ
ಪರೋ ದದಾತೀತಿ ಕುಬುದ್ಧಿರೇಷಾ ।
ಅಹಂ ಕರೋಮೀತಿ ವೃಥಾಭಿಮಾನಃ
ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ ॥ ೩೫೯ ॥

ಸುಖವನ್ನಾಗಲೀ ದುಃಖವನ್ನಾಗಲೀ ಯಾರೂ ಕೊಡುವುದಿಲ್ಲ. ಬೇರೆಯವರು ಕೊಡುತ್ತಾರೆಂಬುದು ಸರಿಯಲ್ಲ. ನಾನು ಮಾಡುತ್ತೇನೆ ಎಂಬುದು ಕೂಡ ಬರೀ ಜಂಬದ ಮಾತು. ಈ ಲೋಕವು (ಜನವು) ತನ್ನ ಜನ್ಮಾಂತರದಲ್ಲಿ ಮಾಡಿದ ಕರ್ಮವೆಂಬ ಸೂತ್ರದಿಂದ ಕಟ್ಟಲ್ಪಟ್ಟಿದೆ.

ಸಿದ್ಧಮನ್ನಂ ಫಲಂ ಪಕ್ವಂ ನಾರೀಪ್ರಥಮಯೌವನಮ್ ।
ಸುಭಾಷಿತಂ ಚ ತಾಂಬೂಲಂ ಸದ್ಯೋ ಗೃಹ್ಣಾತಿ ಬುದ್ಧಿಮಾನ್ ॥ ೩೬೦

ಸಿದ್ಧವಾಗಿರುವ ಆಹಾರ, ಮಾಗಿರುವ ಹಣ್ಣು, ನಾರಿಯ ಪ್ರಥಮ ಯೌವನ, ಸುಭಾಷಿತ ಮತ್ತು ತಾಂಬೂಲ—ಇವುಗಳನ್ನು ಬುದ್ಧಿವಂತನಾದವನು ಕೂಡಲೇ ಸ್ವೀಕರಿಸಿಬಿಡುತ್ತಾನೆ.

ಉಪಾಧ್ಯಾಯಶ್ಚ ವೈದ್ಯಶ್ಚ ಋತುಕಾಲೇ ವರಾಂಗನಾ ।
ಸೂತಿಕಾ ದೂತಿಕಾ ಚೈವ ಕಾರ್ಯಾಂತೇ ತೃಣವತ್ ಸ್ಮೃತಾಃ॥ ೩೬೧ ॥

ಉಪಾಧ್ಯಾಯರು, ವೈದ್ಯರು, ಋತುಕಾಲಾನಂತರ ಉತ್ತಮಸ್ತ್ರೀ, ಪ್ರಸವಮಾಡಿಸಿದ ಸ್ತ್ರೀ, ಕಾಮುಕರನ್ನು ಒಂದೆಡೆ ಸೇರಿಸಲು ಶ್ರಮಿಸಿದ ದೂತಿಕೆ (ದೂತಿ) ಇವರೆಲ್ಲಾ ಕೆಲಸವಾದಮೇಲೆ ಹುಲ್ಲಿಗಿಂತ ಕಡೆ.

ಮೌನಾನ್ಮೂಕಃ ಪ್ರವಚನಪಟುರ್ವಾಚಕೋ ಜಲ್ಪಕೋ ವಾ
ಧೃಷ್ಟಃ ಪಾರ್ಶ್ವೇ ಪ್ರಭವತಿ ತದಾ ದೂರತಶ್ಚಾಪ್ರಗಲ್ಭಃ ।
ಕ್ಷಾಂತ್ಯಾ ಭೀರುರ್ಯದಿ ನ ಸಹತೇ ಪ್ರಾಯಶೋ ನಾಭಿಜಾತಃ
ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ
॥ ೩೬೨ ॥

ಸೇವಕನು ಮಾತಾಡದಿದ್ದರೆ ಮೂಗನೆಂದೂ, ಚೆನ್ನಾಗಿ ಮಾತಾಡಿದರೆ ಹರಟೆಯಮಲ್ಲನೆಂದೂ, ಪಕ್ಕದಲ್ಲಿ ಸುಳಿದರೆ ಅವಿನೀತನೆಂದೂ ದೂರದಲ್ಲೇ ಇದ್ದರೆ ದಾಕ್ಷೀಕ ಸಾಲದೆಂದೂ (ಚುರುಕಿಲ್ಲವೆಂದೂ) ಸಹನೆಯುಳ್ಳವನಾದರೆ ಪುಕ್ಕಲು ಸ್ವಭಾವದವನೆಂದೂ, ದುಡುಕಿನ ಸ್ವಭಾವದವನಾದರೆ, ಉತ್ತಮ ವಂಶದವನಲ್ಲವೆಂದೂ, ಪ್ರಭುಗಳು ಅಲ್ಲಗಳೆಯುತ್ತಾರೆ. ಹೇಗಿದ್ದರೂ ತಪ್ಪು. ಆದುದರಿಂದ ಸೇವಾಧರ್ಮವೆಂಬುದು ಬಹಳ ಗಂಭೀರವಾದ ವಿಷಯ. ಯೋಗಿಗಳಿಗೂ ತಿಳಿಯುವುದಿಲ್ಲ.

ರಾಮಚಂದ್ರಸಮಾದಿಷ್ಟನಲಸಂಚಯಸಂಚಿತಮ್ ।
ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ ॥ ೩೬೩ ॥

ಶ್ರೀರಾಮಚಂದ್ರನ ಆಜ್ಞೆಯಂತೆ ನಳನಿಂದ ನಿರ್ಮಿಸಲ್ಪಟ್ಟ ಸಮುದ್ರದ ಸೇತುವೆಯನ್ನು ನೋಡಿದವರು ಬ್ರಹ್ಮಹತ್ಯಾದೋಷದಿಂದಲೂ ಮುಕ್ತರಾಗುತ್ತಾರೆ.

ಹ

ಹಸತಾ ಲಭ್ಯತೇ ನಾರೀ ರುದತಾ ಲಭ್ಯತೇ ಧನಮ್ ।
ಪಠತಾ ಲಭ್ಯತೇ ವಿದ್ಯಾ ತ್ಯಜತಾ ಲಭ್ಯತೇ ಯಶಃ ॥ ೩೬೪ ॥

ನಗುವವನಿಗೆ ಸ್ತ್ರೀಯು ಒಲಿಯುತ್ತಾಳೆ. ಅಳುವವನಿಗೆ ಹಣವು ದೊರೆಯುತ್ತದೆ. ಓದುವವನಿಗೆ ವಿದ್ಯೆ ಬರುತ್ತದೆ. ತ್ಯಾಗಿಗೆ ಕೀರ್ತಿ ಲಭಿಸುತ್ತದೆ.

ಹಸದ್ಭಿಃ ಕ್ರಿಯತೇ ಕರ್ಮ ರುದದ್ಭಿರನುಭೂಯತೇ ।
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್ ॥ ೩೬೫

ನಗುತ್ತಾ ಪಾಪಕರ್ಮಗಳನ್ನು ಮಾಡುತ್ತಾರೆ. ಅಳುತ್ತಾ ಅನುಭವಿಸುತ್ತಾರೆ. ಹಿಂದೆ ಮಾಡಿದ ಶುಭಾಶುಭಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು.

ಹಣವಾನ್ಗುಣವಾನ್ ಲೋಕೇ ಹಣಹೀನೋ ಹೆಣಾಧಮಃ ।
ಹೆಣಂ ನೊಣಾಶ್ಚ ಸೇವಂತೇ ಹಣಹೀನಂ ನ ಕಶ್ಚನ ॥ ೩೬೬ ॥

ಇದೊಂದು ಕನ್ನಡಸಂಸ್ಕೃತ ಮಿಶ್ರಿತ ಶ್ಲೋಕ. ಯಾರೋ ವಿನೋದಕ್ಕಾಗಿ ರಚಿಸಿದ್ದಾರೆ. ಭಾಷೆ ಶುದ್ಧವಲ್ಲದಿದ್ದರೂ ನೀತಿ ಚೆನ್ನಾಗಿದೆ. ಲೋಕದಲ್ಲಿ ಹಣವಂತನೇ ಗುಣವಂತ. ಹಣವಿಲ್ಲದವನು ಹೆಣಕ್ಕಿಂತ ಕಡೆ.

ಹೆಣದ ಮೇಲೆ ನೊಣಗಳಾದರೂ ಕುಳಿತುಕೊಳ್ಳುತ್ತವೆ. ಹಣವಿಲ್ಲದವನ ಬಳಿ ನೊಣವೂ ಸುಳಿಯುವುದಿಲ್ಲ.

ದ್ವಾರಂ ದ್ವಾರಮಟನ್ ಭಿಕ್ಷು ಶ್ಶಿಕ್ಷತ್ಯೇವಂ ನ ಯಾಚತೇ ।
ಅದತ್ವಾ ಮಾದೃಶೋ ಮಾಭೂರ್ದತ್ವಾ ತ್ವಂ ತ್ವಾದೃಶೋ ಭವ ॥ ೩೬೭

ಭಿಕ್ಷುಕನು ಪ್ರತಿ ಮನೆಯ ಬಾಗಿಲ ಬಳಿಗೂ ಹೋಗಿ 'ದಾನ ಮಾಡದೆ ನನ್ನ ಹಾಗೆ ನೀವು ಮುಂದಿನ ಜನ್ಮದಲ್ಲಿ ಭಿಕ್ಷುಕರಾಗಬೇಡಿ ದಾನಮಾಡಿ ಈಗಿರುವಂತೆಯೇ ದಾನಕೊಡುವ ಸ್ಥಿತಿಯಲ್ಲೇ ಇರಿ' ಎಂದು ಶಿಕ್ಷಣವನ್ನು ಕೊಡುತ್ತಾನೆ. ಬೇಡುವ ಉದ್ದೇಶ ಅವನಿಗಿಲ್ಲ. ನೀತಿ ಬೋಧನೆಯೇ ಉದ್ದೇಶ ಎಂದು ಕವಿಯ ಕಲ್ಪನೆ.

ಮುಂದಿನ ಪದ್ಯಗಳು ಅಕಾರಾದಿ ನಿಯಮಕ್ಕೆ ಒಳಪಟ್ಟಿಲ್ಲ

ಸುಭಾಷಿತೇನ ಗೀತೇನ ಯುವತೀನಾಂ ಚ ಲೀಲಯಾ ।
ಮನೋ ನ ಭಿದ್ಯತೇ ಯಸ್ಯ ಸ ಯೋಗೀ ಹ್ಯಥವಾ ಪಶುಃ ॥ ೩೬೮

ಒಳ್ಳೆಯ ಸುಭಾಷಿತಶ್ಲೋಕಗಳಿಂದಲೂ, ಸಂಗೀತದಿಂದಲೂ ತರುಣಿಯರ ಲೀಲಾವಿನೋದಗಳಿಂದಲೂ (ಶೃಂಗಾರ ಚೇಷ್ಟೆಗಳಿಂದ) ಯಾವನ ಮನಸ್ಸು ವಿಚಲಿತವಾಗುವುದಿಲ್ಲವೋ ಅವನು (ಶಿವಸಂತಹ) ಯೋಗಿಯಾಗಿರಬೇಕು. ಅಥವಾ ಪಶುವಾಗಿರಬೇಕು.

ವಿಶ್ವಾಮಿತ್ರಾಹಿಪಶ್ವಾದೌ ಕರ್ದಮೇಷು ಜಲೇಷು ಚ ।
ಅಂಧೇ ತಮಸಿ ವಾರ್ಧಕ್ಯೇ ದಂಡೋ ದಶಗುಣೋ ಭವೇತ್ ॥ ೩೬೯

ದಂಡವು (ದೊಣ್ಣೆಯು) ಹತ್ತು ಗುಣವುಳ್ಳದ್ದು. ಯಾವುವೆಂದರೆ ೧. ವಿ-ಕಾಗೆ ಹದ್ದು ಮುಂತಾದ ಪಕ್ಷಿಗಳು. ೨. ಶ್ವಾ-ನಾಯಿ, ೩. ಅಮಿತ್ರ-ಶತ್ರು, ೪. ಅಹಿ-ಹಾವು, ೫. ಹಸು ಎತ್ತು ಮುಂತಾದವು, ೬. ಕರ್ದಮ-ಕೆಸರು, ೭. ಜಲ-ನೀರು, ೮. ಅಂಧ-ಕುರುಡ, ೯. ತಮ-ಕತ್ತಲು

೧೦. ವಾರ್ಧಕ್ಯ-ಮುಪ್ಪು. ಕೈಯಲ್ಲಿ ಬಲಿಷ್ಠವಾದ ಲಾಠಿ, ಅಥವಾ ದೊಣ್ಣೆಯೊಂದಿದ್ದರೆ, ಪಕ್ಷಿ, ನಾಯಿ, ಶತ್ರುಗಳು, ಹಾವುಗಳು, ಎತ್ತು, ಹಸು ಮುಂತಾದವುಗಳೂ ಕೆಸರಿನಲ್ಲಿ ಹರಿಯುತ್ತಿರುವ ಅಥವಾ ನಿಂತಿರುವ ನೀರಿನಲ್ಲಿ, ಕುರುಡನಿಗೆ, ಕತ್ತಲಲ್ಲಿ ಸಂಚರಿಸುವಾಗ ಮತ್ತು ಮುದುಕತನದಲ್ಲಿ ಪ್ರಯೋಜನಕ್ಕೆ ಬರುತ್ತದೆ. ಇದು ಬಾಲಕರನ್ನು ಹೊಡೆಯಲು ಮಾತ್ರ ಉಪಯೋಗಕ್ಕೆ ಬರುತ್ತದೆಯೆಂಬ ಅರ್ಥ ಸರಿಯಲ್ಲ. ಅದರಲ್ಲೂ ಈ ಮಿತಸಂತಾನದ ಯುಗದಲ್ಲಿ ಇದಕ್ಕೆ ಅವಕಾಶವೇ ಇಲ್ಲ. 'ದಂಡಂ ದಶಗುಣಂ' ಎಂಬುದು ತಪ್ಪು. 'ದಂಡೋ ದಶಗುಣೋ ಭವೇತ್' ಎಂಬುದೇ ಸರಿ.

ಗುರುಷು ಮಿಲಿತೇಷು ಶಿರಸಾ ಪ್ರಣಮತಿ
ಲಘುಷೂನ್ನತಾ ಸಮೇಷು ಸಮಾ ।
ಉಚಿತಜ್ಞಾಸಿ ತುಲೇ, ಕಿಂ ತುಲಯಸಿ
ಗುಂಜಾಫಲೈಃ ಕನಕಮ್ ॥ ೩೭೦ ॥

ಇದು ತೂಕ ಮಾಡುವ ತಕ್ಕಡಿಯನ್ನು ಕುರಿತು ಪ್ರಶ್ನೆ ಮಾಡುವುದು. ತುಲಾ=ಎಂದರೆ ತಕ್ಕಡಿ. ಎಲೈ ತಕ್ಕಡಿಯೇ, ನಿನಗೆ ಯಾರಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಔಚಿತ್ಯ ಜ್ಞಾನವು ಚೆನ್ನಾಗಿದೆ. ತೂಕ ಮಾಡುವಾಗ ನಿನಗಿಂತ ಭಾರವಾದ ವಸ್ತುವು ಬಂದರೆ ಗೌರವ (ಗುರು-ಎಂದರೆ, ಗುರುಗಳು-ದೊಡ್ಡದು ಎಂದು ಎರಡರ್ಥ)ವನ್ನು ತೋರಿಸುವುದಕ್ಕಾಗಿ ಮೇಲಕ್ಕೇಳುವುದರ ಮೂಲಕ ನಮಸ್ಕಾರ ಮಾಡುತ್ತೀಯೆ. ಲಘುಷು-ನಿನಗಿಂತ ಹಗುರವಾದವರು, ಅಥವಾ ಕಡಿಮೆ ಯೋಗ್ಯತೆಯುಳ್ಳವರು ಬಂದರೆ ಏಳದೆ ಹಾಗೆಯೇ ಕುಳಿತಿರುತ್ತೀಯೆ. ಸರಿಸಮನಾದವರು ಬಂದರೆ ಸಮನಾಗಿಯೇ ಇರುತ್ತೀಯೆ. ಹೀಗಿದ್ದರೂ ಬೆಲೆಬಾಳುವ ಚಿನ್ನವನ್ನು ಬೆಲೆಯಿಲ್ಲದ ಗುಲಗಂಜಿಗಳಿಂದ ತೂಕಮಾಡುತ್ತೀಯೆ ಅಂದರೆ ಬೆಲೆ ಕಟ್ಟುತ್ತೀಯೆ. ಇದು ಮಾತ್ರ ಒಪ್ಪತಕ್ಕದ್ದಲ್ಲ. ಅಂದರೆ ಎಂತಹವನಲ್ಲೂ ಏನಾದರೂ ಒಂದು ದೋಷವಿದ್ದೇ ಇರುತ್ತದೆ. ಯಾವನೂ-ಸರ್ವ

ಗುಣಪರಿಪೂರ್ಣನಲ್ಲ ಎಂದು ಕವಿಯ ಕಲ್ಪನೆ. ನಮ್ಮ ದೃಷ್ಟಿಗೂ ಕವಿಯ ದೃಷ್ಟಿಗೂ ಇದೇ ವ್ಯತ್ಯಾಸ.

ಪಾಣೌ ಗೃಹೀತಾಪಿ ಪುರಸ್ಕೃತಾಪಿ
ಸ್ನೇಹೇನ ನಿತ್ಯಂ ಪರಿಪಾಲಿತಾಪಿ ।
ಪರೋಪಕಾರಾಯ ಭವೇದವಶ್ಯಂ
ವೃದ್ಧಸ್ಯ ಭಾರ್ಯಾ ಕರದೀಪಿಕೇವ ॥ ೩೭೧ ॥

ಮುದುಕನು ಶಾಸ್ತ್ರೋಕ್ತವಾಗಿ ಹೆಂಡತಿಯ ಕೈಹಿಡಿದಿದ್ದರೂ ಅವಳು ತನ್ನ ಗಂಡನಿಗೇ ಅಲ್ಲದೆ ಬೇರೆಯವರಿಗೂ ಉಪಕಾರ ಅಥವಾ ಸೇವೆ ಮಾಡುತ್ತಾಳೆ. ಶ್ಲೇಷಾರ್ಥದಿಂದ ಕವಿಯು ಚೆನ್ನಾಗಿ ಚಿತ್ರಿಸಿದ್ದಾನೆ. ಪಾಣೌ ಗೃಹೀತಾ = ಮದುವೆ ಮಾಡಿಕೊಳ್ಳಲ್ಪಟ್ಟವಳು ಪಾಣಿಗ್ರಹಣ—ಎಂದರೆ ಮದುವೆ. ಇನ್ನೊಂದರ್ಥ ಓಡಿಹೋಗದಂತೆ ಕೈಯಿಂದ ಹಿಡಿದುಕೊಂಡಿದ್ದರೂ, ಪುರಸ್ಕೃತಾಪಿ =ಎಲ್ಲ ಕಾರ್ಯ ಮತ್ತು ಸಂದರ್ಭದಲ್ಲೂ ತಿರಸ್ಕಾರವಿಲ್ಲದೆ ಪುರಸ್ಕರಿಸುತ್ತಾ ಮುಂದೆ ಇಟ್ಟುಕೊಂಡಿದ್ದರೂ, ಮುಂದೆ ಹಿಡಿದುಕೊಂಡಿದ್ದರೂ, ನಿತ್ಯವೂ ಸ್ನೇಹಪ್ರೀತಿಗಳಿಂದ ಸಂರಕ್ಷಿಸುತ್ತಿದ್ದರೂ, ಎಣ್ಣೆಯಿಂದ ರಕ್ಷಿಸುತ್ತಿದ್ದರೂ, ಸ್ನೇಹ-ಎಂದರೆ ತೈಲ-ಪ್ರೀತಿ ಹೀಗಿದ್ದರೂ ವೃದ್ಧನ ಭಾರ್ಯೆಯು ಕೈಯಿಂದ ಹಿಡಿಯಲ್ಪಟ್ಟಿರುವ ದೀಪದಂತೆ, ಪರರಿಗೂ ಉಪಕಾರ ಮಾಡುತ್ತಾಳೆ. ಕೈಯಿಂದ ಹಿಡಿಯದವನಿಗೂ ಬೆಳಕನ್ನು ಕೊಡುತ್ತದೆ. ಇದು ದೀಪದ ಸ್ವಭಾವ. ಕವಿಯು ಇದನ್ನು ವೃದ್ಧನ ಭಾರ್ಯೆಗೆ ಚಮತ್ಕಾರದಿಂದ ಹೋಲಿಸಿ ಶ್ಲೇಷ ಮೂಲಕವಾದ ಉಪಮಾಲಂಕಾರವನ್ನು ಚಿತ್ರಿಸಿದ್ದಾನೆ.

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥ ೩೭೨ ॥

ಯಾವನಿಗೆ ಸ್ವಬುದ್ಧಿಯಿಲ್ಲವೋ, ಅವನಿಗೆ ಶಾಸ್ತ್ರ ಓದುವುದರಿಂದ ಪ್ರಯೋಜನವಿಲ್ಲ. ಕಣ್ಣೇ ಇಲ್ಲದವನಿಗೆ ಕನ್ನಡಿಯು ಏನು ಮಾಡಬಲ್ಲದು ?

ಕಾಯಸ್ಥೇನೋದರಸ್ಥೇನ ಮಾತೃಮಾಂಸಂ ನ ಖಾದಿತಮ್ ।
ನ ದಯಾ ತತ್ರ ಹೇತುಃ ಸ್ಯಾತ್ತತ್ರ ಹೇತುರದಂತತಾ ॥ ೩೭೩ ॥

ಕಾಯಸ್ಥ-ಎಂದರೆ ಗುಮಾಸ್ತೆ. ಇವನು ಲಂಚದ ಮೂಲಕ ಎಲ್ಲರ ಮಾಂಸವನ್ನೂ ತಿನ್ನುತ್ತಾನೆ ಎಂದು ಒಬ್ಬರು ಹೇಳಿದಾಗ, ಮತ್ತೊಬ್ಬನು ''ತಾಯಿಯ ಗರ್ಭದಲ್ಲಿದ್ದಾಗ ತಾಯಿಯ ಮಾಂಸವನ್ನೇಕೆ ತಿನ್ನಲಿಲ್ಲ? ಆದುದರಿಂದ ಗುಮಾಸ್ತೆಗೆ ದಯೆಯುಂಟು. ನೀನು ಹೇಳುವಷ್ಟು ಕ್ರೂರಿ ಯಲ್ಲ'' ಎಂದಾಗ, ತಾಯಿಯ ಗರ್ಭದಲ್ಲಿದ್ದಾಗ ಅವನಿಗೆ ಮಾಂಸವನ್ನು ಕಡಿದು ತಿನ್ನಲು ಹಲ್ಲುಗಳಿರಲಿಲ್ಲ. ಆದುದರಿಂದ ಬಿಟ್ಟಿದ್ದಾನೆ. ದಯೆಯಿಂದ ಅಲ್ಲ ಎನ್ನುತ್ತಾನೆ. ಅಂದರೆ ಇವನು ಅಷ್ಟು ಕ್ರೂರಿ ಎಂದರ್ಥ. ಅಕ್ಕಸಾಲಿಗನು ಅಕ್ಕನ ಚಿನ್ನವನ್ನೂ ಕದಿಯುತ್ತಾನೆ ಎಂಬಂತೆ ವೃತ್ತಿಧರ್ಮ ಇದು.

ಉದಯೇ ಸವಿತಾ ರಕ್ತೋ ರಕ್ತಶ್ಚಾಸ್ತಮಯೇ ತಥಾ ।
ಸಂಪತ್ತೌ ಚ ವಿಪತ್ತೌ ಚ ಮಹತಾಮೇಕರೂಪತಾ ॥ ೩೭೪ ॥

''ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ'' ಎಂಬಂತೆ ಮಹಾತ್ಮರು ಸಂಪತ್ತಿನಲ್ಲೂ ವಿಪತ್ತಿನಲ್ಲೂ ಒಂದೇ ರೀತಿಯಿರುತ್ತಾರೆ. ಸೂರ್ಯನು ಉದಯಕಾಲದಲ್ಲೂ ಕೆಂಪಾಗಿರುತ್ತಾನೆ. ಅಸ್ತಮಯ ಕಾಲ ದಲ್ಲೂ ಕೆಂಪಾಗಿರುತ್ತಾನೆ. ಇಲ್ಲಿ ಉದಯ ಎಂದರೆ ಸಂಪತ್ತು. ಪುತ್ರೋತ್ಸವ ದಂತೆ. ಅಸ್ತ-ಎಂದರೆ ನಾಶ ಅಥವಾ ವಿಪತ್ತು. ಪುತ್ರನಾಶದಂತೆ.

ಶ್ಲೋಕಸ್ತು ಶ್ಲೋಕತಾಂ ಯಾತಿ ಯತ್ರ ತಿಷ್ಠಂತಿ ಸಾಧವಃ ।
ಲಕಾರೋ ಲುಪ್ಯತೇ ತತ್ರ ಯತ್ರ ತಿಷ್ಠಂತ್ಯಸಾಧವಃ ॥ ೩೭೫ ॥

ಸಾಧುಸಜ್ಜನರು ವಿದ್ಯಾವಂತರಿರುವ ಸಭೆಯಲ್ಲಿ ಶ್ಲೋಕವನ್ನು ಹೇಳಿದರೆ ಅದು ನಿಜವಾಗಿಯೂ ಶ್ಲೋಕವಾಗುತ್ತದೆ. ಅಯೋಗ್ಯರಿರುವ

ಕಡೆ ಹೇಳಿದರೆ ಶ್ಲೋಕದಲ್ಲಿರುವ ಲಕಾರವು ಲೋಪವಾಗಿ ಶೋಕವಾಗಿ ಪರಿಣಮಿಸುತ್ತದೆ.

ಜೀವನಗ್ರಹಣೇ ನಮ್ರಾ ಗೃಹೀತ್ವಾ ಪುನರುನ್ನತಾಃ ।
ಕಿಂ ಕನಿಷ್ಠಾಃ ಕಿಮುಜ್ಯೇಷ್ಠಾ ಘಟೀಯಂತ್ರಸ್ಯ ದುರ್ಜನಾಃ ॥ ೩೭೬ ॥

ಜೀವನ-ಎಂದರೆ ನೀರು ಮತ್ತು ಜೀವಿಸುವ ಕಾಲ ಅಥವಾ ಜೀವನೋಪಾಯ. ದುರ್ಜನರು ಜೀವನಕ್ಕೆ ಒಂದು ದಾರಿಯನ್ನು ಒದಗಿಸುವ ತನಕ ನಮ್ರರಾಗಿರುತ್ತಾರೆ. ಅಂದರೆ ವಿಧೇಯರಾಗಿರುತ್ತಾರೆ. ಆಮೇಲೆ ಕೆಲಸವಾದಮೇಲೆ ನಮ್ಮ ಮೇಲೆಯೇ ಏರುತ್ತಾರೆ. ಇದಕ್ಕೆ ಒಂದು ಏತದ ಹೋಲಿಕೆಯನ್ನು ಕೊಡುತ್ತಾನೆ. ಘಟೀಯಂತ್ರ ಎಂದರೆ ಕೈತೋಟಕ್ಕೆ ನೀರನ್ನು ಹಾಯಿಸುವ ಏತ. ಇದು ನೀರನ್ನು ತುಂಬಿಕೊಳ್ಳುವಾಗ ತಗ್ಗಿಬಗ್ಗುತ್ತದೆ. ನೀರು ತುಂಬಿದ ಮೇಲೆ ಮೇಲಕ್ಕೆ ಎದ್ದುಬಿಡುತ್ತದೆ. ದುರ್ಜನರು ಈ ಏತಕ್ಕೆ ಅಣ್ಣನಾಗಬೇಕೋ ತಮ್ಮನಾಗಬೇಕೋ ತಿಳಿಯದು ಎನ್ನುತ್ತಾನೆ ಕವಿ.

ದಕ್ಷಿಣಾಶಾಪ್ರವೃತ್ತಸ್ಯ ಪ್ರಸಾರಿತಕರಸ್ಯ ಚ ।
ತೇಜಸ್ತೇಜಸ್ವಿನೋಽರ್ಕಸ್ಯ ಕ್ಷೀಯತೇಽನ್ಯಸ್ಯ ಕಾ ಕಥಾ ॥ ೩೭೭ ॥

ತೇಜೋನಿಧಿಯಾದ ಸೂರ್ಯನು ದಕ್ಷಿಣದಿಕ್ಕಿಗೆ ಬಂದಾಗ ಕಿರಣಗಳನ್ನು ಚೆನ್ನಾಗಿ ಹರಡಿದ್ದರೂ ಚುರುಕಾಗಿಲ್ಲದೆ ತೇಜೋಹೀನನಾಗಿ ಕಾಣಿಸುತ್ತಾನೆ. ಇನ್ನು ದಕ್ಷಿಣೆಯ ಮೇಲಿನ ಆಸೆಯಿಂದ ಬ್ರಾಹ್ಮಣನು ಕೈಚಾಚುತ್ತಿದ್ದರೆ, ಅವನ ತೇಜಸ್ಸು ಅಂದರೆ ನಿಗ್ರಹಾನುಗ್ರಹ ಶಕ್ತಿಯು ಕುಂದದೇ ಇರುತ್ತದೆಯೇ? ಅಂದರೆ ಕೇವಲ ದಕ್ಷಿಣೆಗಾಗಿಯೇ, ವೇದಶಾಸ್ತ್ರ ಪಾಠ ಹೇಳಿಕೊಡುವುದು, ಪೌರೋಹಿತ್ಯ ಮಾಡಿಸುವುದು ಮುಂತಾದುದರಿಂದ ತೇಜಸ್ಸು ಕಡಿಮೆಯಾಗುವುದು. ಇಲ್ಲಿ ದಕ್ಷಿಣಾ ಆಶಾ ಎಂದರೆ= ದಕ್ಷಿಣದ ದಿಕ್ಕು, ದಕ್ಷಿಣೆಯ ಆಸೆ. ಕರ-ಕಿರಣ, ಹಸ್ತ ಎಂದು ನಾನಾರ್ಥ. ತೇಜಸ್ಸು, ಶಕ್ತಿ ಮಹಿಮೆ.

ಉದ್ಯಮೇನೈವ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ ।
ನಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ ॥ ೩೭೮ ॥

ನಮ್ಮ ಇಷ್ಟಾರ್ಥಗಳು ಸಿದ್ಧಿಸಬೇಕಾದರೆ ಯಾವುದಾದರೂ ಕೆಲಸವನ್ನು ಮಾಡಲೇಬೇಕು. ದೈವದ ಮೇಲೆ ಭಾರಹಾಕಿ ಕೈಕಟ್ಟಿಕೊಂಡು ಕುಳಿತಿರಬಾರದು. ಮಲಗಿರುವ ಸಿಂಹದ ಬಾಯಿಗೆ ಯಾವ ಪ್ರಾಣಿಗಳೂ ತಾವಾಗಿ ಬಂದು ಬೀಳುವುದಿಲ್ಲ. ಅದು ಬೇಟೆಯಾಡಬೇಕು. ಇದರಂತೆಯೇ ನಾವೂ ಏನನ್ನಾದರೂ ಮಾಡಬೇಕು.

ನ ಸುಖಂ ನ ಚ ಸೌಭಾಗ್ಯಂ ಸ್ವಯಂ ಸ್ವಗುಣವರ್ಣನೇ ।
ಯಥೈವ ಚ ಪುರಂಧ್ರೀಣಾಂ ಸ್ವಹಸ್ತಕುಚಮರ್ದನಮ್ ॥ ೩೭೯ ॥

ಯಾರಾದರೂ ಒಬ್ಬ ವಿದ್ವಾಂಸರು ತನ್ನ ಪಾಂಡಿತ್ಯ, ವಿದ್ಯೆ, ಬಿರುದು ಮುಂತಾದುವುಗಳನ್ನು ತಾವೇ ಹೇಳಿಕೊಳ್ಳಬಾರದು. ಇದರಿಂದ ಸುಖವಾಗಲೀ ಸಂತೋಷವಾಗಲೀ ದೊರೆಯುವುದಿಲ್ಲ. ಬೇರೆಯವರ ಬಾಯಿಂದ ಹೊಗಳಿಸಿಕೊಳ್ಳಲ್ಪಟ್ಟರೇ ಹಿತವಾಗಿರುವುದು. ಪತಿವ್ರತೆಯೇ ಆಗಿದ್ದರೂ ಪತ್ನಿಯು ತಾನೇ ತನ್ನ ಕುಚಗಳನ್ನು ಹಿಸುಕಿಕೊಂಡರೆ ಸುಖವಿರುವುದಿಲ್ಲ. ಪತಿಯ ಕರದಿಂದಲೇ ಆದಾಗ ಮಾತ್ರ ಹಿತವಾಗಿರುತ್ತದೆ.

ವಿವಾಹಕಾಲೇ ಋತುಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇಯುಃ
ಪಂಚಾನೃತಾನ್ಯಾಹುರಪಾತಕಾನಿ ॥ ೩೮೦ ॥

ವಿವಾಹದ ಸಂದರ್ಭದಲ್ಲಿ, ಋತುಕಾಲಗಮನದ ಸಂದರ್ಭದಲ್ಲಿ, ಪ್ರಾಣಾಪಾಯವೊದಗಿದಾಗ, ಸರ್ವಧನವೂ ಅಪಹರಿಸಲ್ಪಡುವಾಗ ಮತ್ತು ಬ್ರಾಹ್ಮಣನಿಗೆ ಸಹಾಯವಾಗುವ ಸಂದರ್ಭದಲ್ಲಿ ಹೇಳುವ ಸುಳ್ಳು ಪಾಪವನ್ನುಂಟುಮಾಡುವುದಿಲ್ಲ.

ಪ್ರಸಾದೋ ನಿಷ್ಫಲೋ ಯಸ್ಯ ಕ್ರೋಧೋ ಯಸ್ಯ ನಿರರ್ಥಕಃ ।
ನ ತಂ ರಾಜಾನಮಿಚ್ಛಂತಿ ಷಂಡಂ ಪತಿಮಿವಾಂಗನಾಃ ॥ ೩೮೧ ॥

ಯಾವ ರಾಜನ ಪ್ರಸಾದವು ನಿಷ್ಫಲವೋ, ಹಾಗೆಯೇ ಕೋಪವೂ ಕೂಡ ನಿರರ್ಥಕವೋ ಅಂತಹ ರಾಜನನ್ನು, ಪ್ರಜೆಗಳು ಸ್ತ್ರೀಯರು ನಪುಂಸಕನಾದ ಪತಿಯನ್ನು ತಿರಸ್ಕರಿಸುವಂತೆ ತಿರಸ್ಕರಿಸುತ್ತಾರೆ.

ನ ಗಣಸ್ಯಾಗ್ರತೋ ಗಚ್ಛೇತ್ಸಿದ್ಧೇ ಕಾರ್ಯೇ ಸಮಂ ಫಲಮ್ ।
ಯದಿ ಕಾರ್ಯವಿಪತ್ತಿಃ ಸ್ಯಾತ್ ಮುಖರಸ್ತತ್ರ ಹನ್ಯತೇ ॥ ೩೮೨ ॥

ಗುಂಪಿನ ನಾಯಕತ್ವವನ್ನು ವಹಿಸಿಕೊಳ್ಳಬಾರದು. ಕಾರ್ಯವು ಸಿದ್ಧಿಸಿದರೆ ಫಲದಲ್ಲಿ ಎಲ್ಲರೂ ಸಮಪಾಲನ್ನು ಕೇಳುತ್ತಾರೆ. ಒಂದುವೇಳೆ ಕಾರ್ಯವು ಕೆಟ್ಟುಹೋದರೆ ನಾಯಕನನ್ನು ಹಿಂಸಿಸುತ್ತಾರೆ. ಆದುದರಿಂದ ಸಮಾಜದ ಪರವಾಗಿ ಹೋರಾಡುವುದು ಕಷ್ಟವೇ.

ಜೀವಂತೋಽಪಿ ಮೃತಾಃ ಪಂಚ ವ್ಯಾಸೇನ ಪರಿಕೀರ್ತಿತಾಃ ।
ದರಿದ್ರೋ ವ್ಯಾಧಿತೋ ಮೂರ್ಖಃ ಪ್ರವಾಸೀ ನಿತ್ಯಸೇವಕಃ ॥ ೩೮೩ ॥

ವೇದವ್ಯಾಸರು ಈ ಐದು ಮಂದಿಯನ್ನು ಬದುಕಿದ್ದರೂ ಸತ್ತವರ ಕೂಟಕ್ಕೆ ಸೇರಿಸಿರುತ್ತಾರೆ. ಯಾರೆಂದರೆ, ದರಿದ್ರ, ರೋಗಿ, ಮೂರ್ಖ ಯಾವಾಗಲೂ ಪ್ರವಾಸದಲ್ಲಿರುವವನು, ಮತ್ತು ಯಾವಾಗಲೂ ಸೇವಾವೃತ್ತಿಯಲ್ಲಿರುವವನು. ಇವರಿಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ.

ಕಮಲೇ ಕಮಲಾ ಶೇತೇ ಹರಶ್ಶೇತೇ ಹಿಮಾಲಯೇ ।
ಕ್ಷೀರಾಬ್ಧೌ ಚ ಹರಿಶ್ಶೇತೇ ಮನ್ಯೇ ಮತ್ಕುಟಶಂಕಯಾ ॥ ೩೮೪ ॥

ಲಕ್ಷ್ಮಿಯು ತಾವರೆಯಲ್ಲೂ, ಶಿವನು ಹಿಮಾಲಯದಲ್ಲೂ, ವಿಷ್ಣುವು ಕ್ಷೀರಸಮುದ್ರದಲ್ಲೂ ಮಲಗುತ್ತಾರೆ. ಇದರ ಗುಟ್ಟೇನು? ಎಂದು ಕೇಳಿದರೆ ಒಬ್ಬ ರಸಿಕನು ತನ್ನ ಅನುಭವಾಮೃತವನ್ನು ಹೀಗೆ ಹೇಳಿಕೊಳ್ಳುತ್ತಾನೆ.

''ಇದಕ್ಕೆಲ್ಲಾ ತಿಗಣೆಯಕಾಟವೇ ಕಾರಣ'' ಎಂದು ತನ್ನ ಅನುಭವವನ್ನು ''ಆತ್ಮವತ್ಸರ್ವಭೂತೇಷು'' ಎಂಬಂತೆ ಅವರಿಗೂ ಅನ್ವಯಿಸಿದ್ದಾನೆ. ಥಂಡಿಯಿರುವ ಕಡೆ ತಿಗಣೆ ಸೇರುವುದಿಲ್ಲ. 'ಮತ್ಕುಟ' ಎಂದರೆ ತಿಗಣೆ.

ಶೀತೇऽತೀತೇ ವಸನಮಶನಂ ವಾಸರಾಂತೇ ನಿಶಾಂತೇ
ಕ್ರೀಡಾರಂಭಂ ಕುವಲಯದೃಶಾಂ ಯೌವನಾಂತೇ ವಿವಾಹಮ್ ।
ಸೇತೋರ್ಬಂಧಂ ಪಯಸಿ ಚಲಿತೇ ವಾರ್ಧಕೇ ತೀರ್ಥಯಾತ್ರಾಂ
ವಿತ್ತೇऽತೀತೇ ವಿತರಣಮತಿಂ ಕರ್ತುಮಿಚ್ಛಂತಿ ಮೂಢಾಃ ॥ ೩೮೫

ಯಾವ ಕೆಲಸಕ್ಕಾದರೂ ಒಂದು ಕಾಲನಿಯಮವುಂಟು. ಚಳಿಗಾಲ ಕಳೆದಮೇಲೆ ಬೆಚ್ಚನೆಯ ಬಟ್ಟೆ ಧರಿಸುವುದು, ಸಾಯಂಕಾಲದಲ್ಲಿ ಊಟ ಮಾಡುವುದು, ಬೆಳಗಿನ ಜಾವದ ಕೊನೆಯಲ್ಲಿ ಕುವಲಯಾಕ್ಷಿಯರ ಸಂಗಡ ರತಿಕ್ರೀಡೆಯನ್ನಾರಂಭಿಸುವುದು, ಯೌವನವು ಕಳೆದುಹೋದ ಮೇಲೆ ಮದುವೆಯಾಗುವುದು, ನೀರು ಹರಿದುಹೋದಮೇಲೆ ಅಡ್ಡಗಟ್ಟೆ ಕಟ್ಟುವುದು ಮುಪ್ಪಿನಲ್ಲಿ ತೀರ್ಥಯಾತ್ರೆಗೆ ಹೊರಡುವುದು, ಧನ ಸಂಪಾದನೆಯು ನಿಂತು ಹೋದಮೇಲೆ ದಾನ ಮಾಡಬೇಕೆಂದು ಬಯಸುವುದು—ಇವೆಲ್ಲಾ ಮೂಢರು ಮಾಡುವ ಕೆಲಸಗಳು.

ಕರಾವಿವ ಶರೀರಸ್ಯಾಕ್ಷ್ಣೋರಿವ ಚ ಪಕ್ಷ್ಮಣೀ ।
ಅಪ್ರೇರಿತಹಿತಂ ಕಾರ್ಯಮಿದಂ ಸನ್ಮಿತ್ರಲಕ್ಷಣಮ್ ॥ ೩೮೬ ॥

ಕೈಗಳು ದೇಹವನ್ನೂ ರೆಪ್ಪೆಗಳು ಕಣ್ಣುಗಳನ್ನೂ ತನ್ನಷ್ಟಕ್ಕೆ ತಾನೇ ರಕ್ಷಿಸುವಂತೆ, ಮಿತ್ರನಾದವನು, ಪ್ರೇರಣೆಯಿಲ್ಲದೆ, ಕರೆಯಿಲ್ಲದೆ, ಸ್ನೇಹಿತನಿಗೆ ಹಿತವನ್ನು ಮಾಡಬೇಕು. ಇದೇ ಒಳ್ಳೆಯ ಸ್ನೇಹಿತನ ಲಕ್ಷಣ.

ವಾಣೀ ರಸವತೀ ಯಸ್ಯ ಭಾರ್ಯಾ ಪುತ್ರವತೀ ಸತೀ ।
ಲಕ್ಷ್ಮೀರ್ದಾನವತೀ ಯಸ್ಯ ಸಫಲಂ ತಸ್ಯ ಜೀವಿತಮ್ ॥ ೩೮೭ ॥

ಯಾವನ ಮಾತುಗಳಲ್ಲಿ ರಸಭಾವಗಳು ತುಂಬಿರುತ್ತವೆಯೋ, ಪತ್ನಿಯು ಪುತ್ರವತಿಯೂ, ಪತಿವ್ರತೆಯೂ ಆಗಿರುತ್ತಾಳೋ, ಸಂಪತ್ತು

ದಾನಮಾಡಲ್ಪಡುತ್ತದೆಯೋ ಅವನ ಬಾಳು ಸಾರ್ಥಕವಾದುದು.

ವಿಷಸ್ಯ ವಿಷಯಾಣಾಂ ಚ ದೂರಮತ್ಯಂತಮಂತರಮ್ ।
ಉಪಭುಕ್ತಂ ವಿಷಂ ಹಂತಿ ವಿಷಯಾಃ ಸ್ಮರಣಾದಪಿ ॥ ೩೮೮ ॥

ವಿಷಕ್ಕೂ ವಿಷಯಗಳಿಗೂ ತುಂಬಾ ಅಂತರವಿದೆ. ವಿಷವನ್ನು ಕುಡಿದರೆ ಮಾತ್ರ ಸಾಯುತ್ತಾನೆ, ವಿಷಯಗಳು ಎಂದರೆ ರೂಪ ರಸ ಸ್ರಕ್ ಚಂದನ ವನಿತಾದಿಗಳು ಸ್ಮರಿಸಿಕೊಂಡರೂ ಹಾಳುಮಾಡಿಬಿಡುತ್ತವೆ.

ಉತ್ತಮಂ ಸ್ವಾರ್ಜಿತಂ ಪುಷ್ಪಂ ಮಧ್ಯಮಂ ವನ್ಯಮುಚ್ಯತೇ ।
ಅಧಮಂ ತು ಕ್ರಯಕ್ರೀತಂ ಪಾರಕ್ಯಮಧಮಾಧಮಮ್ ॥ ೩೮೯ ॥

ನಾವೇ ಬೆಳೆದ ಹೂವು ಉತ್ತಮ, ವನದಲ್ಲಿ ಬೆಳೆದದ್ದು ಮಧ್ಯಮ, ಕ್ರಯದಿಂದ ಕೊಂಡದ್ದು ಅಧಮ, ಪರಕೀಯರು ಕೊಟ್ಟದ್ದು ಅಥವಾ ಪರರ ಗಿಡದಿಂದ ಅವರಿಗೆ ತಿಳಿಯದಂತೆ ಬಿಡಿಸಿಕೊಂಡು ತಂದದ್ದು ಅಧಮಾಧಮ.

ಭಟ್ಟಿರ್ನಷ್ಟೋಭಾರವೀಯೋಪಿ ನಷ್ಟಃ
ಭಿಕ್ಷುರ್ನಷ್ಟೋ ಭೀಮಸೇನೋಪಿ ನಷ್ಟಃ ।
ಭುಕ್ಕುಂಡೋಹಂ ಭೂಪತಿಸ್ತ್ವಂ ಹಿ ರಾಜನ್
ಬಬ್ಬಾವಳ್ಯಾಮಂತಕಸ್ಸನ್ನಿವಿಷ್ಟಃ ॥ ೩೯೦ ॥

ಇದೊಂದು ಚಮತ್ಕಾರದ ಪದ್ಯ. ಭೋಜರಾಜನ ದರ್ಶನಕ್ಕಾಗಿ ಭುಕ್ಕುಂಡನೆಂಬ ಕವಿಯು ಬಂದಿದ್ದನು. ಇಲ್ಲಿದ್ದ ಕವಿಗಳು ಅಸೂಯೆಯಿಂದ ಅವನ ಭೇಟಿಗೇ ಅವಕಾಶ ಮಾಡಿಕೊಡಲಿಲ್ಲ. ಆಗ ಇವನು ರಾಜನ ಅರಮನೆಯಲ್ಲಿ ಕಳ್ಳತನ ಮಾಡಬೇಕೆಂದು ಮಾಲು ಸಹಿತ ಸಿಕ್ಕಿಹಾಕಿ ಕೊಂಡನು. ಆಗ ರಾಜನು ಇವನನ್ನು ವಧಿಸುವಂತೆ ಆಜ್ಞೆ ಮಾಡಿದಾಗ ಈ ಪದ್ಯವನ್ನು ಹೇಳಿದನು. ರಾಜನೇ, ಭಟ್ಟಿಯೆಂಬ ಕವಿಯು ಸತ್ತು ಹೋದನು. ಆಮೇಲೆ ಭಾರವೀಯನೆಂಬುವನೂ, ಅನಂತರ

ಭಿಕ್ಷುವೂ ಆಮೇಲೆ ಭೀಮಸೇನನೆಂಬ ಕವಿಯೂ ಹೋದರು. ಈಗ ನಾನು ಭುಕ್ಕುಂಡ. ನಾನು ಹೋದೆನೆಂದರೆ ಭೂಪತಿಯಾದ ನಿನಗೆ ಮರಣ ಬಂತೆದೇ ತಿಳಿ. ಏಕೆಂದರೆ ಭಭಾಭಿಭೀಭುಭೂ ಎಂಬ ಕ್ರಮದಂತೆ ನೀನು ಭೂಪತಿ. ಈಗ ನಾನುಳಿದರೆ ನೀನು ಉಳಿಯುವೆ ಎಂದನಂತೆ. ಆಗ ರಾಜನು ಪಾಂಡಿತ್ಯಕ್ಕೆ ಮೆಚ್ಚಿ ಆಸ್ಥಾನ ಪಂಡಿತನನ್ನಾಗಿ ಮಾಡಿಕೊಂಡನಂತೆ. ಅಸೂಯಾಪರರಿಗೆ ಛೀಮಾರಿ ಹಾಕಿದನಂತೆ. ಈಶ್ವರನು ವಿಷವನ್ನು ಕುಡಿದು ಬದುಕಿದಂತೆ, ಒಳ್ಳೆಯ ವಿದ್ಯಾವಂತನು ಹೇಗಾದರೂ ಬದುಕುತ್ತಾನೆ. ಆತ್ಮಸ್ಥೈರ್ಯವಿರಬೇಕು.

ಜಾಮಾತಾ ಜಠರಂ ಜಾಯಾ ಜಾತವೇದಾ ಜಲಾಶಯಃ ।
ಪಂಚೈತೇ ತು ನ ಪೂರ್ಯಂತೇ ಪೂರ್ಯಮಾಣಾಃ ಪುನಃ ಪುನಃ ॥

ಜಕಾರದಿಂದ ಆರಂಭವಾಗುವ ಈ ಐದನ್ನು ಮತ್ತೆ ಮತ್ತೆ ತುಂಬಿಸುತ್ತಲೇ ಇರಬೇಕು. ತೃಪ್ತಿಯಾಯಿತು, ಪೂರ್ಣವಾಯಿತು ಎನ್ನುವ ನೆಮ್ಮದಿ ಇಲ್ಲ. ಯಾವುವೆಂದರೆ ಅಳಿಯ, ಹೊಟ್ಟೆ, ಹೆಂಡತಿ, ಅಗ್ನಿ, ಕೆರೆಕಟ್ಟೆ ಮುಂತಾದ ಜಲಾಶಯಗಳು.

ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷಾನ್ಯತರದ್ಭಜಂತೇ
ಮೂಢಃ ಪರಪ್ರತ್ಯಯನೇಯಬುದ್ಧಿಃ ॥ ೩೯ ॥

ಹಳೆಯದು ಎಂದ ಮಾತ್ರಕ್ಕೇ ಎಲ್ಲವೂ ಸರಿಯಲ್ಲ. ಹೊಸದಾದ ಮಾತ್ರಕ್ಕೆ ಎಲ್ಲವೂ ಕೆಟ್ಟದ್ದಲ್ಲ. ವಿದ್ಯಾವಂತರು ಎರಡರಿಂದಲೂ ಆರಿಸಿಕೊಳ್ಳ ಬಲ್ಲರು. ದಡ್ಡರು ಮಾತ್ರ ಇನ್ನೊಬ್ಬರು ಹೇಳಿದ್ದನ್ನು ಮೆಚ್ಚಿಕೊಳ್ಳುತ್ತಾರೆ. ಈ ಮಾತು ಈ ಕಾಲಕ್ಕೆ ಚೆನ್ನಾಗಿ ಒಪ್ಪುತ್ತದೆ. ವಿಜ್ಞಾನದ ಪ್ರಗತಿಯಿಂದ ಒಳ್ಳೆಯದು, ಕೆಟ್ಟದ್ದು ಎರಡೂ ಆಗಿದೆ. ಒಳ್ಳೆಯದನ್ನು ಆರಿಸಿಕೊಳ್ಳಬೇಕು.

ನ ಚೋರಹಾರ್ಯಂ ನ ಚ ರಾಜಹಾರ್ಯಂ
ನ ಭ್ರಾತೃಭಾಜ್ಯಂ ನ ಚ ಭಾರಕಾರಿ ।
ವ್ಯಯೇ ಕೃತೇ ವರ್ಧತ ಏವ ನಿತ್ಯಂ
ವಿದ್ಯಾಧನಂ ಸರ್ವಧನಪ್ರಧಾನಮ್ ॥ ೩೯೩ ॥

ವಿದ್ಯೆ ಎಂಬ ಧನವು ಎಲ್ಲ ಧನಗಳಿಗಿಂತಲೂ ಪ್ರಧಾನವಾದುದು. ಏಕೆಂದರೆ, ಇದನ್ನು ಕಳ್ಳರು ಕದಿಯಲಾರರು, ರಾಜರು ಕಿತ್ತುಕೊಳ್ಳಲಾರರು. ಅಣ್ಣ ತಮ್ಮಂದಿರಿಗೆ ಭಾಗ ಕೊಡಬೇಕಾಗಿಲ್ಲ. ಇದು ದೇಹಕ್ಕೆ ಭಾರವನ್ನು ಉಂಟುಮಾಡುವುದಿಲ್ಲ. ಖರ್ಚು ಮಾಡಿದಷ್ಟೂ ಹೆಚ್ಚುತ್ತಲೇ ಇರುತ್ತದೆ. ಬೇರೆ ಧನಗಳು ಹೀಗಿರುವುದಿಲ್ಲ.

ಮರಣಂ ಪ್ರಕೃತಿಶ್ಶರೀರಿಣಾಂ ವಿಕೃತಿರ್ಜೀವಿತಮುಚ್ಯತೇ ಬುಧೈಃ ।
ಕ್ಷಣಮಪ್ಯತಿಷ್ಠತೇ ಶ್ವಸನ್ ಯದಿ ಜಂತುರ್ನನು ಲಾಭವಾನಸೌ ॥ ೩೯೪

''ಶರೀರಿಗಳಿಗೆ ಸಾವೆಂಬುದು ಪ್ರಕೃತಿ. ಬಾಳೆಂಬುದು ವಿಕೃತಿ'' ಎಂದು ವಿದ್ವಾಂಸರು ಹೇಳುತ್ತಾರೆ. ಆದುದರಿಂದ ಶರೀರಿಯು ಒಂದು ಕ್ಷಣ ಬದುಕಿದ್ದರೂ ಅಷ್ಟೇ ಲಾಭವೆಂದು ತಿಳಿಯಬೇಕು. ಅಂದರೆ ಈ ಬಾಳು ಗಾಳಿಗೆ ಇಕ್ಕಿದ ದೀಪದಂತೆಯೂ, ನೀರಿನ ಮೇಲಿನ ಗುಳ್ಳೆಯಂತೆಯೂ ಅಸ್ಥಿರವೆಂದು ತಿಳಿಯಬೇಕು. ಬೇಗ ಸಾರ್ಥಕಪಡಿಸಿಕೊಳ್ಳಬೇಕು.

ನ ಕಾಯೇನ ಕೃತಂ ಕಾರ್ಯಂ ಮನಸೈವ ಕೃತಂ ಕೃತಮ್ ।
ಯೇನೈವಾಲಿಂಗಿತಾ ಕಾಂತಾ ತೇನೈವಾಲಿಂಗಿತಾ ಸುತಾ ॥ ೩೯೫ ॥

ಯಾವ ಕಾರ್ಯವನ್ನೇ ಆಗಲಿ ಕೇವಲ ದೇಹದಿಂದ ಮಾಡಿದರೆ ಮಾಡಿದಂತಾಗುವುದಿಲ್ಲ. ಮನಃಪೂರ್ವಕ ಮಾಡಿದರೇ ಮಾಡಿದಂತಾಗುತ್ತದೆ. ಒಂದೇ ದೇಹದಿಂದ ಹೆಂಡತಿಯನ್ನು ಆಲಿಂಗಿಸುತ್ತಾನೆ. ಅದೇ ದೇಹದಿಂದ ವಿದೇಶಕ್ಕೆ ಕಳಿಸಿಕೊಡುವಾಗ ಮಗಳನ್ನೂ ಆಲಿಂಗಿಸುತ್ತಾನೆ. ಆಲಿಂಗನ ಕ್ರಿಯೆ ಒಂದೇ ಆದರೂ ಭಾವನೆ ಬೇರೆಯಾಗುತ್ತದೆ. ಇದಕ್ಕೆ ಮನಸ್ಸೇ ಕಾರಣ.

ವಸ್ತ್ರೇಣ ವಪುಷಾ ವಾಚಾ ವಿದ್ಯಯಾ ವಿನಯೇನ ಚ ।
ವಕಾರಪಂಚಭಿರ್ಹೀನೋ ನರೋ ನಾಪ್ನೋತಿ ಗೌರವಮ್ ॥ ೩೯೬ ॥

ಸಮಾಜದಲ್ಲಿ ಗೌರವವನ್ನು ಗಳಿಸಲು ವಕಾರದಿಂದ ಆರಂಭವಾಗುವ ಐದು ಸಾಧನಗಳಿವೆ. ಮೊದಲನೆಯದು ವಸ್ತ್ರ. ಸಾಮಾನ್ಯ ಜನರು ಇದಕ್ಕೇ ಬೆಲೆ ಕೊಡುತ್ತಾರೆ. ಎರಡನೆಯದು ವಪು—ಎಂದರೆ ದಡೂತಿ ಯಾದ ದೇಹ. ಮೂರನೆಯದು ವಾಕ್. ಇದು ಮೇಲಿನ ಎರಡಕ್ಕಿಂತ ಮುಖ್ಯ. ಮಾತೇ ಬರದಿದ್ದರೇನು ಪ್ರಯೋಜನ? ನಾಲ್ಕನೆಯದು ವಿದ್ಯಾ. ಇದು ಇನ್ನೂ ಮುಖ್ಯ. ಐದನೆಯದು ವಿನಯ. ಇದು ಅತ್ಯಂತ ಮುಖ್ಯ. ಸುಶಿಕ್ಷಿತರ ದೃಷ್ಟಿಯಿಂದ ಮುಂದೆ ಮುಂದೆ ಶ್ರೇಷ್ಠ. ಅಶಿಕ್ಷಿತರ ದೃಷ್ಟಿಯಿಂದ, ಹಿಂದೆ ಹಿಂದೆ ಶ್ರೇಷ್ಠ. ಅನುಭವಸ್ಥರು ವಕಾರಪಂಚಕದ ಬಗ್ಗೆ ಬೇಕಾದಷ್ಟು ಮಾತಾಡಬಹುದು.

ಉತ್ತಮಂ ಸ್ವಾರ್ಜಿತಂ ವಿತ್ತಂ ಮಧ್ಯಮಂ ಪಿತುರಾರ್ಜಿತಮ್ ।
ಅಧಮಂ ಭ್ರಾತೃವಿತ್ತಂ ಚ ಸ್ತ್ರೀವಿತ್ತಮಧಮಾಧಮಮ್ ॥ ೩೯೭ ॥

ತಾನು ಸಂಪಾದಿಸಿದ್ದು ಉತ್ತಮ. ತಂದೆಯು ಸಂಪಾದಿಸಿದ್ದು ಮಧ್ಯಮ. ಅಣ್ಣ ತಮ್ಮಂದಿರು ಕೊಟ್ಟದ್ದು ಅಧಮ. ಸ್ತ್ರೀಯರು ಸಂಪಾದಿಸಿ ಕೊಟ್ಟದ್ದು ಅಧಮಾಧಮ. ಕೊನೆಯ ಪಾದದ ಬಗ್ಗೆ ಸಾಕಷ್ಟು ಗೊಂದಲಹುಟ್ಟುತ್ತದೆ. ಈ ಕಾಲದಲ್ಲಿ ಸ್ತ್ರೀಯರೇ ಹೆಚ್ಚು ಓದುತ್ತಿದ್ದಾರೆ. ಗಂಡುಗಳು ಕೆಲಸದಲ್ಲಿರುವ ಹುಡುಗಿಯರನ್ನೇ ಬಯಸುತ್ತಿದ್ದಾರೆ. ಆದುದರಿಂದ ಎರಡನೆಯ ಪಾದದಲ್ಲಿ ''ಮಧ್ಯಮಂ ಮಹಿಲಾರ್ಜಿತಂ'' ಎಂದು ಮಾಡಿದರೆ ಮೇಲು ಎನ್ನುತ್ತಾರೆ. ಮಿತಸಂತಾನ ಯೋಜನೆಯಂತೆ ಒಂದೇ ಮಗು ಹೆಣ್ಣಾಗಿ ಹುಟ್ಟಿದರೆ ಏನು ಮಾಡುವುದು?

ಆಚಾರ್ಯಾತ್ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ ।
ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ಕಾಲಕ್ರಮೇಣ ಚ ॥ ೩೯೮ ॥

ಶಿಷ್ಯನು ವಿದ್ಯೆಯಲ್ಲಿ ಆಚಾರ್ಯರಿಂದ ಕಾಲುಭಾಗವನ್ನೂ ತನ್ನ ಬುದ್ಧಿಶಕ್ತಿ ಮತ್ತು ಪರಿಶ್ರಮದಿಂದ ಕಾಲು ಭಾಗವನ್ನೂ, ಸಹಪಾಠಿಗಳಿಂದ ಕಾಲುಭಾಗವನ್ನೂ ಮತ್ತು ಕಾಲಾವಕಾಶದಿಂದ ಕಾಲುಭಾಗವನ್ನೂ ಕಲಿತುಕೊಂಡು ಪೂರ್ಣವಿದ್ಯಾವಂತನಾಗುತ್ತಾನೆ. ಉದಾಹರಣೆಗೆ ಒಂದು ಅಧ್ಯಾಯ ಭಗವದ್ಗೀತೆಯನ್ನು ಒಂದೇ ದಿನ ೧೫ ಸಲ ಹೇಳಿಸಿಕೊಂಡಾಗ ಬರುವುದಕ್ಕಿಂತ ೧೫ ದಿನ ನಿಯಮಿತಕಾಲದಲ್ಲಿ ಒಂದು ಸಲ ಹೇಳಿಸಿಕೊಂಡಾಗ ಇನ್ನೂ ಚೆನ್ನಾಗಿ ಬರುತ್ತದೆ.

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ ।
ತಸ್ಮಾತ್ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ ॥ ೩೯ ॥

ಪ್ರಿಯವಾದ ಮಾತನಾಡುವುದರಿಂದ ಮಕ್ಕಳು, ಯುವಕರು, ಮುದುಕರು, ನಾಯಿಗಳು, ಬೆಕ್ಕುಗಳು ಗೋವುಗಳು ಎಲ್ಲರೂ ಸಂತುಷ್ಟರಾಗುತ್ತಾರೆ. ಆದುದರಿಂದ ಮಧುರವಾದ ಮಾತನ್ನೇ ಆಡಬೇಕು. ಮಾತಿಗೇನು ಕೊರತೆ ಅಥವಾ ಬರ? ಇದು ದೇವರು ಮನುಷ್ಯನಿಗೆ ಅನುಗ್ರಹಿಸಿರುವ ವರ.

ಶ್ರಿಯಂ ಹುತಾಶನಾದೀಚ್ಛೇದಾಯುಷ್ಯಂ ಬ್ರಹ್ಮಣಸ್ತಥಾ ।
ಆರೋಗ್ಯಂ ಭಾಸ್ಕರಾದಿಚ್ಛೇನ್ಮೋಕ್ಷಮಿಚ್ಛೇಜ್ಜನಾರ್ದನಾತ್ ॥ ೪೦೦ ॥

ಸಂಪತ್ತನ್ನು ಅಗ್ನಿದೇವನಿಂದಲೂ, ಆಯುಸ್ಸನ್ನು ಬ್ರಹ್ಮನಿಂದಲೂ, ಆರೋಗ್ಯವನ್ನು ಸೂರ್ಯನಿಂದಲೂ, ಮೋಕ್ಷವನ್ನು ವಿಷ್ಣುವಿನಿಂದಲೂ ಬಯಸಬೇಕು. ಸಂಪತ್ತಿಗೆ ಮೂಲ ಸುವರ್ಣ. ಅದು ಅಗ್ನಿಯಿಂದ ಹುಟ್ಟಿದೆ. ಅದರಂತೆಯೇ ಬಣ್ಣ ಮತ್ತು ಹೊಳಪುಳ್ಳದ್ದು ''ಅಗ್ನೇರಪತ್ಯಂ ಪ್ರಥಮಂ ಸುವರ್ಣಂ'' ಎಂದು ವೇದದಲ್ಲಿ ಹೇಳಲ್ಪಟ್ಟಿದೆ. ಮೋಕ್ಷವನ್ನು ಕೊಡುವ ಶಕ್ತಿಯಿರುವುದು ಜನಾರ್ದನನಿಗೆ ಮಾತ್ರ. ಈ ಶ್ಲೋಕದ ಕೊನೆಯಲ್ಲಿ ಮೋಕ್ಷ ಶಬ್ದ ಬಂದಿರುವುದು ಒಂದು ವಿಧವಾಗಿ ಮಂಗಳಾಂತ್ಯವಾಗಿದೆ.

ಈ ಪುಸ್ತಕಗಳನ್ನು ಕೊಂಡು ಸಹಕರಿಸಬೇಕಾಗಿ ವಿನಂತಿ.

ವಾಲ್ಮೀಕಿ ರಾಮಾಯಣ	
(9 ಪುಸ್ತಕಗಳು–ಸುಮಾರು 5000 ಪುಟಗಳು)	ರೂ. 560–00
ಭಗವನ್ನಾಮಾವಳಿ (6ನೇ ಮುದ್ರಣ)	ರೂ. 40–00
ಶ್ರೀಮದ್ಭಾಗವತ ದಶಮ / ಏಕಾದಶ / ದ್ವಾದಶ ಸ್ಕಂಧಗಳು	
(ಮೂಲ ಅನುವಾದ) ಮೂರು ಪುಸ್ತಕಗಳು	ರೂ. 120–00
ಅಷ್ಟೋತ್ತರಶತನಾಮ ಸ್ತೋತ್ರಾವಳಿ	
(108 ಅಷ್ಟೋತ್ತರಗಳ ಸ್ತೋತ್ರ)	ರೂ. 60–00
ಭಗವದ್ಗೀತೆಯ ಉಪನ್ಯಾಸಗಳು	
(ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು)	ರೂ. 50–00
ಶ್ರೀ ರಾಮಕಥಾ ವೈಭವಮ್	ರೂ. 25–00
ಶ್ರೀ ಸತ್ಯಗಣಪತಿ ವ್ರತ ಕಥಾ	ರೂ. 15–00
ಸ್ತೋತ್ರ ಪುಷ್ಪಾಂಜಲಿ	ರೂ. 15–00
ಶ್ರೀರಾಮನಾಮ ವೈಭವಂ	ರೂ. 10–00
ಶ್ರೀ ಲಲಿತಾನಾಮಾವಳಿಃ	
(ಸಹಸ್ರನಾಮ ತ್ರಿಶತೀಸ್ತೋತ್ರ ಅಷ್ಟೋತ್ತರ)	ರೂ. 15–00
ದೇವತಾರ್ಚನಾ	ರೂ. 5–00
ಗಣಪತಿ ಅಥರ್ವ ಶೀರ್ಷ	ರೂ. 5–00
ಶ್ರೀರಾಮಕರ್ಣಾಮೃತ	ರೂ. 2–50
ಋಗ್ವೇದ ಸಂಧ್ಯಾವಂದನಮ್	ರೂ. 1–25
ಯಜುರ್ವೇದ ಸಂಧ್ಯಾವಂದನಮ್	ರೂ. 1–25
ಧರ್ಮಾವತಾರ ಶ್ರೀರಾಮಚಂದ್ರ	ರೂ. 10–00
ಶ್ರೀರಾಮ ರಕ್ಷಾ ಸ್ತೋತ್ರ	ರೂ. 10–00
ಪವಮಾನ ಸೂಕ್ತ	ರೂ. 30–00